ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 10 ಭಾನುವಾರ 2022

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 350 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4

ಹಿರಿಯ ಸಾಹಿತಿ ಸಿಪಿಕೆ ಕನ್ನಡದ ಆಸ್ತಿ



ಮೈಸೂರು, ಏ.9– ನಾಡಿನ ಹೆಸರಾಂತ ಸಾಹಿತಿ ಡಾ. ಸಿ.ಪಿ.ಕೆ ಅವರ 83ನೇ ಹುಟ್ಟುಹಬ್ಬದ ಪ್ರಯುಕ್ತ ಪಡುವಾರಹಳ್ಳಿಯ ಸ್ನೇಹ ಬಳಗದ ವತಿಯಿಂದ ಅವರನ್ನು ಶಾಲು ಹೊದಿಸಿ, ಹಾರ ಹಾಕಿ ಹೂವಿನ ಗಿಡ ನೀಡುವ ಮೂಲಕ ಗೌರವಿಸಲಾಯಿತು.

ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ ಸಿಪಿಕೆ ಅವರನ್ನು ಗೌರವಿಸಿ ಮಾತನಾಡಿ, ಪ್ರಸಿದ್ಧ ಸಾಹಿತಿಗಳಾದ ಸಿ.ಪಿ. ಕೃಷ್ಣಕುಮಾರ್ ಅವರು ಕನ್ನಡದ ಸಾಹಿತ್ಯ ಲೋಕದಲ್ಲಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದು ಅವರಿಗೆ ರಾಜ್ಯ ಮತ್ತು ರಾಷ್ಟ್ರಮಟ್ಟದ ಹಲವಾರು ವಿಚಾರ ಸಂಕಿರಣಗಳಲ್ಲಿ, ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. 1994ರಲ್ಲಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ,2011ರಲ್ಲಿ ಗಂಗಾವತಿಯಲ್ಲಿ ನಡೆದ 78ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಅವರ ಸಾಹಿತ್ಯದ ಕೊಡುಗೆಗೆ 'ಬಸವ ಸಾಹಿತ್ಯಶ್ರೀ' ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 'ಜಾನಪದ ತಜ್ಞ' ಪ್ರಶಸ್ತಿ, ಎಚ್.ಎಲ್. ನಾಗೇಗೌಡ 'ಜಾನಪದ ತಜ್ಞ' ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಚುಂಚಶ್ರೀ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪಡುವಾರಹಳ್ಳಿಯ ನಿವಾಸಿಗಳು ಎಂಬುದೂ ಹೆಮ್ಮೆಯ ವಿಚಾರ ಎಂದರು.

ಈ ಸಂದರ್ಭದಲ್ಲಿ ಪಡುವಾರಹಳ್ಳಿಯ ಜನತಾ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಎಸ್.ಕೃಷ್ಣಕುಮಾರ್, ರಾಘವ್ ಎಂ.ಗೌಡ, ಜಿ.ಕುಮಾರ್, ಸಿ.ರೇವಣ್ಣ, ಸಂತೋಷ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಾಳೆಯಿಂದ ಮೂರು ದಿನ 'ಶಿವ ಸಂಚಾರ' ನಾಟಕೋತ್ಸವ

ಮೈಸೂರು, ಏ.9(ಆರ್‌ಕೆಬಿ)– ಮೈಸೂರಿನ ಹೊಸಮಠ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಏ.11ರಿಂದ ಮೂರು ದಿನಗಳ ಕಾಲ ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾಸಂಘದ ವತಿಯಿಂದ 'ಶಿವ ಸಂಚಾರ' ನಾಟಕೋತ್ಸವ ಆಯೋಜಿಸಲಾಗಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6 ಗಂಟೆಗೆ ಶ್ರೀ ಚಿದಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್ ನಾಟಕೋತ್ಸವಕ್ಕೆ ಚಾಲನೆ ನೀಡುವರು. ಹಿರಿಯ ರಂಗಕರ್ಮಿ ಪ್ರಿ. ಗಂಗಾಧರಯ್ಯ ಅಧ್ಯಕ್ಷತೆ ವಹಿಸುವರು. ಬಳಿಕ ಚಂದ್ರಶೇಖರ ತಾಳ್ಯ ರಚನೆಯ ಛಾಯಾ ಭಾರ್ಗವಿ ನಿರ್ದೇಶನದ 'ಒಕ್ಕಲಿಗ ಮುದ್ದಣ್ಣ' ನಾಟಕ ಪ್ರದರ್ಶನವಾಗಲಿದೆ ಎಂದರು.

ಏ.12ರಂದು ಸಂಜೆ 6.30ಕ್ಕೆ ಲಿಂಗದೇವರು ಹಳೇಮನೆ ರಚನೆಯ ಆರ್.ಜಗದೀಶ್ ನಿರ್ದೇಶನದ 'ಗಡಿಯಂಕ ಕುಡಿಮುದ್ದ' ನಾಟಕ, ಏ.13ರಂದು ಪಿ.ಆರ್.ಅರುಣಕುಮಾರ್ ರಚನೆಯ ವೈ.ಡಿ.ಬಾದಾಮಿ ಸಾಣೇಹಳ್ಳಿ ನಿರ್ದೇಶನದ 'ಬಿಸ್ ಕಂದಕ್ಕರ' ನಾಟಕ ಪ್ರದರ್ಶನಗೊಳ್ಳಲಿದೆ. ಮೈಸೂರು ಜಿಲ್ಲಾ ಮತ್ತು ನಗರ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ವೀರಶೈವ ಲಿಂಗಾಯತ ಮಹಾಸಭಾ, ಬಸವ ಬಳಗಗಳ ಒಕ್ಕೂಟ, ಜಾಗತಿಕ ಲಿಂಗಾಯಿತ ಮಹಾಸಭಾ, ಮೈಸೂರು ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಾಯೋಜಕತ್ವದಲ್ಲಿ ಈ ನಾಟಕೋತ್ಸವ ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶಿವಮೂರ್ತಿ ಕಾರ್ಯ, ಚಂದ್ರಶೇಖರ್, ಶಾರದಾ, ಕುಮಾರಸ್ವಾಮಿ ಉಪಸ್ಥಿತರಿದ್ದರು.

ಬೆಲೆ ಏರಿಕೆ: ಜನರ ಬದುಕು ದುಸ್ತರ

ಅಖಿಲ ಭಾರತ ಪ್ರಿಯಾಂಕ–ರಾಹುಲ್‌ಗಾಂಧಿ ವೇದಿಕೆ ಟೀಕೆ

ಮೈಸೂರು,ಏ.9(ಆರ್‌ಕೆಬಿ)–ದೇಶದಲ್ಲಿ ಅಗತ್ಯ ವಸ್ತು ಸೇರಿದಂತೆ ಎಲ್ಲ ವಸ್ತುಗಳ ಬೆಲೆಯೇರಿಕೆಯ ಕಾರಣ ದೇಶದ 92 ಕೋಟಿ ಜನರ ಬದುಕು ದುಸ್ತರವಾಗಿದೆ. ಹೀಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬೆಲೆಯೇರಿಕೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕೆಂದು ಅಖಿಲ ಭಾರತ ಪ್ರಿಯಾಂಕ– ರಾಹುಲ್ ಗಾಂಧಿ ವೇದಿಕೆ ರಾಜ್ಯಾಧ್ಯಕ್ಷ ಮುಬೀನ್ ಉರ್ಮೆಜ್ ತಿಳಿಸಿದರು. ತೈಲ, ವಾಣಿಜ್ಯ ಮತ್ತು ಅಡುಗೆ ಅನಿಲ ದರಗಳು ನಿರಂತರವಾಗಿ ಏರುತ್ತಲೇ ಇರುವುದರಿಂದ ಜನರ ಬದುಕು ಚಿಂತಾಜನಕವಾಗಿದೆ. ದೇಶದ ಜಿಡಿಪಿ ಮೇಲೆ ಸರ್ಕಾರ ಶೇ.83ರಷ್ಟು ಸಾಲ ಮಾಡಿದ್ದು, ಇದು ಕೇಂದ್ರ ದಿನಗಳಲ್ಲಿ ಶೇ.90ಕ್ಕೇರುವ ಆತಂಕವಿದೆ ಎಂದು ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಇದರಿಂದಾಗಿ ದೇಶದ ಆರ್ಥಿಕತೆ ಮೇಲೆ ದೊಡ್ಡ ಪರಿಣಾಮವುಂಟಾಗುತ್ತಿದೆ. ಆದರೂ ಕೇವಲ ಪ್ರಚಾರದಲ್ಲಿ ತೊಡಗಿರುವ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರ ಯಾವುದೇ ಉದ್ಯೋಗ ಸೃಷ್ಟಿ ಮಾಡಿಲ್ಲ. ಕಳೆದ ಮೂರು ವರ್ಷಗಳಲ್ಲಿ ನಿರುದ್ಯೋಗದ ಕಾರಣ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಜನರು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದರು. ಗೋಷ್ಠಿಯಲ್ಲಿ ಫೋರಂನ ರಾಜ್ಯ ಉಪಾಧ್ಯಕ್ಷ ನಾಗರಾಜ್, ಪ್ರಧಾನ ಕಾರ್ಯದರ್ಶಿ ಫಿರೋಜ್‌ಖಾನ್ ಹವಾಲ್ದಾರ್, ನವಾಝುಲ್ ಹಕ್ ಉಪಸ್ಥಿತರಿದ್ದರು.



ಹುಟ್ಟುಹಬ್ಬದ ಅಂಗವಾಗಿ ವಕೀಲ ಸಿದ್ದರಾಜು ಅವರನ್ನು ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಹಾಗೂ ದುರ್ಗಾ ಗ್ರೂಪ್‌ನ ಚಂದ್ರಶೇಖರ್, ಸುರೇಶ್, ರವಿ, ರಾಜು, ಆನಂದ್, ವೆಂಕಟೇಶ್ ಕುಮಾರ್, ಸ್ವಾಮಿ ಇನ್ನಿತರರು ಅಭಿನಂದಿಸಿ, ಶುಭಾಶಯ ಕೋರಿದರು.

ಪ್ಯಾರಲಿಸಿಸ್ ಚಿಕಿತ್ಸಾ ಶಿಬಿರ

ಮೈಸೂರು, ಏ. 9– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಏ. 11 ರಿಂದ 16 ರವರೆಗೆ ಪ್ಯಾರಲಿಸಿಸ್ (ಲಕ್ವ) ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9538367282, ದೂ. 0821–2548231, 2548433 ಮೂಲಕ ಸಂಪರ್ಕಿಸಬಹುದು.

ತೀವ್ರ ಹೃದಯಾಘಾತ: ಮಹಿಳಾ ಖೈದಿ ಸಾವು

ಮೈಸೂರು,ಏ.9(ಆರ್‌ಕೆ)–ತೀವ್ರ ಹೃದಯಾಘಾತದಿಂದ ಮಹಿಳಾ ಖೈದಿಯೊಬ್ಬರು ಶನಿವಾರ ಸಾವನ್ನಪ್ಪಿದ್ದಾರೆ. ಹಾಸನ ಜಿಲ್ಲೆ ಹಳೇಬೀಡು ಗ್ರಾಮದ ರಾಧಾ(33) ಸಾವನ್ನಪ್ಪಿದವರು. ಮಾ.22ರಂದು ಎದೆನೋವು ಕಾಣಿಸಿಕೊಂಡ ಕಾರಣ ಅವರನ್ನು ಕೆ.ಆರ್.ಆಸ್ಪತ್ರೆ ಜೈಲಿನ ವಾರ್ಡಿಗೆ ದಾಖಲಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಜಯದೇವ ಹೃದ್ರೋಗ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. 2015ರಲ್ಲಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿದ್ದ ರಾಧಾ ಅಪರಾಧಿ ಎಂದು ದೃಢಪಟ್ಟ ಹಿನ್ನೆಲೆಯಲ್ಲಿ 2017ರಲ್ಲಿ ಶಿಕ್ಷೆಗೆ ಗುರಿಯಾಗಿ ಅಂದಿನಿಂದ ಮೈಸೂರು ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿದ್ದರು.

ಸ್ಕೂಟರ್‌ಗೆ ಲಾರಿ ಡಿಕ್ಕಿ: ಮಹಿಳೆ ಸಾವು

ಮೈಸೂರು, ಏ.9(ಆರ್‌ಕೆ)– ಲಾರಿಯೊಂದು ಹಿಂದಿನಿಂದ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸಾವನ್ನಪ್ಪಿರುವ ಘಟನೆ ಕೃಷ್ಣರಾಜ ಸಾಗರ (ಕೆಆರ್‌ಎಸ್)ದ ಸಂತೆ ಮೈದಾನದ ಬಳಿ ಶನಿವಾರ ಬೆಳಗ್ಗೆ ಸಂಭವಿಸಿದೆ.

ಪಾಂಡವಪುರ ತಾಲೂಕು ಸಿಂಡಬೋಗನಹಳ್ಳಿ ನಿವಾಸಿ ಸುಮತಿ(38) ಸಾವನ್ನಪ್ಪಿದವರು. ಗಾರ್ಮೆಂಟ್ಸ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅವರು ಬೆಳಗ್ಗೆ 6 ಗಂಟೆಯಲ್ಲಿ ತಮ್ಮ ಸ್ಕೂಟರ್‌ನಲ್ಲಿ ಮೈಸೂರಿಗೆ ಬರುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಲಾರಿ ಕೆಆರ್‌ಎಸ್ ಪೊಲೀಸ್ ಠಾಣೆ ಎದುರು ಸಂತೆ ಮಾಳದಲ್ಲಿ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಾರಿ ಡಿಕ್ಕಿ ಹೊಡೆದ ರಭಸಕ್ಕೆ ಸ್ಕೂಟರ್ ಸವಾರರಾದ ಸುಮತಿ ಅವರ ತಲೆಗೆ ತೀವ್ರ ಗಾಯಗಳಾದ ಪರಿಣಾಮ ಸ್ಥಳದಲ್ಲೇ ಅಸುನೀಗಿದರು. ಸ್ಥಳಕ್ಕೆ ಧಾವಿಸಿದ ಪೊಲೀಸರು ಮಹಜರು ನಡೆಸಿ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದ್ದು, ಲಾರಿ ವಶಕ್ಕೆ ಪಡೆದಿದ್ದಾರೆ.

ನ್ಯಾಯಾಲಯಗಳಲ್ಲಿ ವರ್ಚುವಲ್ ಸಭೆ ಅಳವಡಿಸಿದರೆ ಅನುಕೂಲ

ಪ್ರಧಾನ ಸಿವಿಲ್ ನ್ಯಾಯಾಧೀಶ ಎಂ.ಎಲ್.ರಘುನಾಥ್ ಅಭಿಮತ



ಮೈಸೂರು, ಏ.9(ಆರ್‌ಕೆ)– ತಂತ್ರಜ್ಞಾನ ಆಧರಿತ ವರ್ಚುವಲ್ ಸಭೆ ನಡೆಸುವುದರಿಂದ ನ್ಯಾಯಾಲಯಗಳ ಸಮಯ ಉಳಿಯುವುದಲ್ಲದೇ, ಕಕ್ಷಿದಾರರಿಗೂ ಅನುಕೂಲವಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಎಂ.ಎಲ್.ರಘುನಾಥ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲಾ ಅಭಿಯೋಜನಾ ಇಲಾಖೆ ಹಾಗೂ ಜಿಲ್ಲಾ ಪೊಲೀಸ್ ಘಟಕದ ಆಶ್ರಯದಲ್ಲಿ ಮೈಸೂರಿನ ಎಸ್ಪಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಾಗಾರ **'Rules ForVideo Conferencing in Courts'** ಉದ್ದೇಶಿಸಿ ಮಾತನಾಡುತ್ತಿದ್ದ ಅವರು ವರ್ಚುವಲ್ ಸಭೆ, ಸಂವಾದ ನಡೆಸುವುದರಿಂದ ಸಮಯ, ಹಣ ಉಳಿತಾಯವಾಗುವುದರ ಜೊತೆಗೆ ಕಕ್ಷಿದಾರರಿಗೂ ರಕ್ಷಣೆಯ ಭಾವನೆ ಮೂಡಲಿದೆ ಎಂದರು.

ಅಭಿಯೋಜನೆ ಹಾಗೂ ಪೊಲೀಸ್ ಅಧಿಕಾರಿಗಳಿಗೆ ಕಲಂ 293ದಂಡ ಪ್ರಕ್ರಿಯೆ ಸಂಹಿತೆಯಡಿ ನೀಡಲಾದ ತಜ್ಞರ ವರದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಸಾಕ್ಷ್ಯ ನೀಡುವಾಗ ಪಾಲಿಸಬೇಕಾದ ಕ್ರಮಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸುವ ಬಗ್ಗೆ ಪ್ರತಿಯೊಬ್ಬರಿಗೂ ಅರಿವಿರಬೇಕು ಎಂದರು.

ಸಂಸದೀಯ ಸ್ಥಾಯಿ ಸಮಿತಿ ಹಾಗೂ ಸಾರ್ವಜನಿಕ ಕುಂದು ಕೊರತೆಗಳ ಕಾನೂನು ಮತ್ತು ನ್ಯಾಯ ಸಮಿತಿ ನೀಡಿರುವ ವರದಿ ಮೇರೆಗೆ ಎಲ್ಲಾ ನ್ಯಾಯಾಲಯಗಳಲ್ಲಿ ವರ್ಚುವಲ್ ಸಭೆಗಳನ್ನು ಅಳವಡಿಸಿಕೊಳ್ಳಬೇಕೆಂದು ನಿರ್ದೇಶನ ನೀಡಲಾಗಿದ್ದು, ಕೋವಿಡ್–19 ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ವರ್ಚುವಲ್ ಸಭೆ ನಡೆಸಲಾಯಿತು. ಮುಂದೆಯೂ ಈ ತಂತ್ರಜ್ಞಾನವನ್ನು ಬಳಸಿಕೊಳ್ಳುವಂತೆಯೂ ನ್ಯಾಯಾಧೀಶರು ಸಲಹೆ ನೀಡಿದರು.

ವರ್ಚುವಲ್ ಮೂಲಕ ಕೋರ್ಟ್‌ಗಳಲ್ಲಿ ಪ್ರಕರಣ ದಾಖಲು ಮಾಡಿಕೊಳ್ಳಬೇಕಾದರೆ ವಕೀಲರು ಸಂಬಂಧಪಟ್ಟ ಜಿಲ್ಲಾ ನ್ಯಾಯಾಲಯದ ಅಧಿಕೃತ ಇ–ಮೇಲ್ ಐಡಿಗೆ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕು. ಇದರಿಂದ ಕಕ್ಷಿದಾರರಾಗಲೀ, ವಕೀಲರಾಗಲೀ ನ್ಯಾಯಾಲಯಕ್ಕೆ ಖುದ್ದು ಹಾಜರಾಗಬೇಕಿಲ್ಲ. ಇದರಿಂದ ಸಮಯ, ಹಣ ಉಳಿತಾಯವಾಗಲಿದೆ ಎಂದು ರಘುನಾಥ ಅವರು ಅಭಿಪ್ರಾಯಪಟ್ಟರು.

ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶ ಆರ್. ಚಂದ್ರಶೇಖರ್, ಎಸ್ಪಿ ಆರ್.ಚೇತನ್, ಎಎಸ್ಪಿ ಆರ್.ಶಿವಕುಮಾರ್, ಕಾನೂನು ಅಧಿಕಾರಿ ಎಂ.ಎಸ್.ಮಂಜುಳಾ, ಸರ್ಕಾರಿ ಅಭಿಯೋಜಕ ಹೆಚ್.ಇ.ಚಿನ್ನಪ್ಪ, ಹಾಗೂ ಇತರರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಸಿದ್ದರಾಮಯ್ಯ ವಿರುದ್ಧ ಪ್ರತಾಪ್‌ಸಿಂಹ ಕಿಡಿ



ಮೈಸೂರು, ಏ.9(ಆರ್‌ಕೆ)– ಎಲ್ಲಿಯವರೆಗೆ ಜಿಹಾದಿಯಂತಹ ಮನಸ್ಥಿತಿ ಉಳ್ಳವರು ಇರುತ್ತಾರೋ ಅಲ್ಲಿವರೆಗೆ ಕೋಲಾರದಲ್ಲಿ ಶೋಭಾಯಾತ್ರೆಯ ಮೇಲೆ ಕಲ್ಲು ತೂರಾಟದಂತಹ ಘಟನೆಗಳು ನಿಲ್ಲುವುದಿಲ್ಲ ಎಂದು ಸಂಸದ ಪ್ರತಾಪ್ ಸಿಂಹ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಸಿದ್ದರಾಮಯ್ಯ ಜಿಹಾದಿ ಮನಸ್ಥಿತಿ ಪ್ರೋತ್ಸಾಹಿಸುವುದನ್ನು ನಿಲ್ಲಿಸಬೇಕು. ರಾಜಕೀಯ ಉದ್ದೇಶಕ್ಕಾಗಿ ಅಂತಹುದನ್ನು ಪ್ರೋತ್ಸಾಹಿಸಿದರೆ ಭಾರತವು ಮತ್ತೆ ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಂತೆ ಪ್ರತ್ಯೇಕವಾಗುವ ಸ್ಥಿತಿ ನಿರ್ಮಾಣವಾಗಬಹುದು ಎಂದರು.

2015ರಲ್ಲಿ ಕೆಲ ಸಂಘಟನೆಗಳ ಮೇಲೆ ಹಾಕಿದ್ದ ಪ್ರಕರಣಗಳನ್ನು ವಾಪಸ್ ಪಡೆದು ಕ್ರಿಮಿನಲ್‌ಗಳನ್ನು ರಾಜಾರೋಷವಾಗಿ ಓಡಾಡಲು ಬಿಟ್ಟರು. ಅವರಿಂದ ಸರಣಿ ಹತ್ಯೆಗಳಾದವು. ಟಿಪ್ಪು ಜಯಂತಿ ಮಾಡಿ ತಾಲಿಬಾನಿ ಮನಸ್ಥಿತಿಗೆ ಪ್ರೋತ್ಸಾಹ ಕೊಟ್ಟು 2023ಕ್ಕೆ ಮತ್ತೆ ಅಧಿಕಾರಕ್ಕೆ ಅವಕಾಶ ಸಿಗುತ್ತದೆ ಎಂದು ನಿರೀಕ್ಷಿಸುತ್ತಿದ್ದಾರೆ ಎಂದ ಸಿಂಹ, ಸಿದ್ದರಾಮಯ್ಯನವರೇ ಅಧಿಕಾರಕ್ಕಾಗಿ ರಾಜ್ಯದ ಶಾಂತಿ ಹಾಳುಮಾಡಬೇಡಿ, ಮೈಸೂರು ಜನರಿಗೆ ಉಪಕೃತರಾಗಬೇಕಾದ ನೀವು ಅದನ್ನು ಮರೆತಿದ್ದೀರಿ ಎಂದು ಛೇಡಿಸಿದರು.

ಮುಸ್ಲಿಂ ವ್ಯಾಪಾರ ನಿರ್ಬಂಧದ ವಿರುದ್ಧ ಪ್ರಶ್ನೆ ಮಾಡುವ ಬದಲು ಅದಕ್ಕೆ ಕಾರಣ ಯಾರು ಎಂಬುದನ್ನು ತಿಳಿದುಕೊಳ್ಳಿ, ಹಿಜಾಬ್ ಸಮಸ್ಯೆ ಬಂದಾಗಲೇ ಅದನ್ನು ತೊರೆದು ಶಾಲೆಗೆ ಹೋಗುವಂತೆ ಮಕ್ಕಳಿಗೆ ಸಿದ್ದರಾಮಯ್ಯ ಬುದ್ಧಿ ಹೇಳಬೇಕಿತ್ತು. ಕಾನೂನಾತ್ಮಕವಾಗಿ ನಡೆದುಕೊಂಡಿದ್ದರೆ ಈ ವಿವಾದವೇ ಸೃಷ್ಟಿಯಾಗುತ್ತಿರಲಿಲ್ಲ ಎಂದು ಕಿಡಿಕಾರಿದರು.

ನಾಳೆ ನೈಪುಣ್ಯದಿಂದ ಬೇಸಿಗೆ ಬಂಡಿ ಬೇಸಿಗೆ ಶಿಬಿರ

ಮೈಸೂರು, ಏ. 9– ಮೈಸೂರಿನ ಆರ್.ಟಿ.ನಗರದಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ವತಿಯಿಂದ ಏ. 11 ರಿಂದ ಬೇಸಿಗೆ ಬಂಡಿ ಬೇಸಿಗೆ ಶಿಬಿರ ಆಯೋಜಿಸಲಾಗಿದ್ದು, ಶಿಬಿರಕ್ಕೆ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಚಾಲನೆ ನೀಡಲಿದ್ದಾರೆ. ಅಂದು ಬೆಳಗ್ಗೆ 9 ಗಂಟೆಗೆ ಕುವೆಂಪುನಗರದ ಕುವೆಂಪು ಪ್ರತಿಮೆ ಬಳಿಯಿಂದ ವಿವಿಧ ಜನಪದ ಮೇಳಗಳೊಂದಿಗೆ ಆರಂಭವಾಗುವ ಮೆರವಣಿಗೆಯು ಕುವೆಂಪುನಗರ, ರಾಮಕೃಷ್ಣನಗರದ ಪ್ರಮುಖ ರಸ್ತೆಯಲ್ಲಿ ಸಾಗಲಿದೆ. ಅಧ್ಯಕ್ಷತೆಯನ್ನು ಸಂಸ್ಥೆ ಅಧ್ಯಕ್ಷ ಆರ್.ರಘು ವಹಿಸಲಿದ್ದಾರೆ.

ಮಕ್ಕಳ ಸ್ಮರಣ ಶಕ್ತಿಯೋಗ ಶಿಬಿರ

ಮೈಸೂರು,ಏ.9–ಮೈಸೂರಿನ ರಿಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಏ.14ರಿಂದ ಬೆಳಗ್ಗೆ 10 ಗಂಟೆಯಿಂದ 10 ದಿನಗಳ ಕಾಲ ಮಕ್ಕಳ ಸ್ಮರಣ ಶಕ್ತಿಯೋಗ ಶಿಬಿರವನ್ನು ಕುವೆಂಪುನಗರ ಆದಿಚುಂಚನಗಿರಿ ರಸ್ತೆಯಲ್ಲಿರುವ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತರು ನೋಂದಣಿಗೆ ಮತ್ತು ವಿವರಗಳಿಗೆ ಹೆಚ್.ಎಸ್.ರಮೇಶ್‌ಚಂದ್ರ ಅವರನ್ನು ಮೊ.94484–58050, 8618762110 ಸಂಪರ್ಕಿಸಲು ಕೋರಲಾಗಿದೆ.



ಮೈಸೂರು ಅಶೋಕಪುರಂನ ಆದಿಕರ್ನಾಟಕ ಮಹಾ ಸಂಸ್ಥೆಯ ವತಿಯಿಂದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿಯಂದು ಏರ್ಪಡಿಸಿರುವ ಭಾರೀ ಮೆರವಣಿಗೆಗೆ ಚಾಲನೆ ನೀಡುವಂತೆ ಸಂಸದರಾದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಶನಿವಾರ ಆಹ್ವಾನಿಸಲಾಯಿತು. ಈ ಸಂದರ್ಭದಲ್ಲಿ ಚಿಕ್ಕಗರಡಿ ಅಧ್ಯಕ್ಷರಾದ ಸಿ.ವಿಜಯ್‌ಕುಮಾರ್, ಕಾರ್ಯದರ್ಶಿ ರವಿಕುಮಾರ್, ದೊಡ್ಡಗರಡಿ ಮಾಜಿ ಅಧ್ಯಕ್ಷರಾದ ಷಣ್ಮುಖಸ್ವಾಮಿ, ಮಾಜಿ ಖಜಾಂಚಿ ಶಿವಸ್ವಾಮಿ, ಮುಖಂಡರಾದ ಭರತ್ ರಾಮಸ್ವಾಮಿ ಡಿ.ವೆಂಕಟರಾಜು, ಜೆ.ರವಿ ಇನ್ನಿತರರು ಉಪಸ್ಥಿತರಿದ್ದರು.

ಜೀವನ್ ನಾಗರಾಜ್ ಪ್ರಥಮ ರ್‍ಯಾಂಕ್




ಮೈಸೂರು, ಏ. 9– ಬೆಂಗಳೂರಿನ ಭಾರತೀಯ ವ್ಯವಸ್ಥಾಪನಾ ಸಂಸ್ಥೆ ಏರ್ಪಡಿಸಿದ್ದ ಬ್ಯುಸಿನೆಸ್ ಅನಾಲಿಟಿಕ್ಸ್ ಸ್ನಾತಕೋತ್ತರ ಘಟಿಕೋತ್ಸವ ಕಾರ್ಯಕ್ರಮದಲ್ಲಿ 2020–22ನೇ ಸಾಲಿನಲ್ಲಿ ಜೀವನ್ ನಾಗರಾಜ್ ಚಿನ್ನದ ಪದಕದೊಂದಿಗೆ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ. ಈತ ಮೈಸೂರಿನ ಕೃಷ್ಣಮೂರ್ತಿಪುರಂ ನಿವಾಸಿ ನೆಸ್ಲೆ ಇಂಡಿಯಾ ಉದ್ಯೋಗಿ ಜಿ.ಕೆ.ವಿಶಾಲಿ ಮತ್ತು ಜೆ.ನಾಗರಾಜ್ ದಂಪತಿ ಪುತ್ರ.

ಇಂದು ಸಾಯಿಶಕ್ತಿ ಸನ್ನಿಧಿಯಲ್ಲಿ ರಾಮನವಮಿ

ಮೈಸೂರು,ಏ.9–ಮೈಸೂರಿನ ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್‌ನಲ್ಲಿರುವ ಶ್ರೀಶಿರಡಿ ಸಾಯಿ ಶಕ್ತಿ ಸನ್ನಿಧಿಯಲ್ಲಿ ನಾಳೆ(ಏ.10) ಶ್ರೀರಾಮ ನವಮಿಯನ್ನು ಆಚರಿಸಲಾಗುವುದು. ಭಾನುವಾರ ಬೆಳಗ್ಗೆ 7 ಗಂಟೆಗೆ ಕಾಕಡಾರತಿಯೊಂದಿಗೆ ಪ್ರಾರಂಭವಾಗುವ ರಾಮ ನವಮಿಯಲ್ಲಿ ಸೀತಾ–ರಾಮರನ್ನು ವಿಶೇಷವಾಗಿ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಗುವುದು. ನಂತರ ಪ್ರಸಾದ ವಿನಿಯೋಗಿಸಲಾಗುವುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.04.2022 ಭಾನುವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ನವಮೀ, ನಕ್ಷತ್ರ: ಪುಷ್ಯ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ:** ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ಬೆಳಗ್ಗೆ 10 ರಿಂದ.

■ **ರಕ್ಷಾ ಫೌಂಡೇಷನ್:** ಬಹುರೂಪಿ ಪ್ರಕಟಿಸಿರುವ ಮಧುರಾಣಿ ಎಚ್.ಎಸ್.ಅವರ ನೀಲಿ ಚುಕ್ಕಿಯ ನೆರಳು ಕೃತಿ ಬಿಡುಗಡೆ, ಸಂವಾದ ಓದು ಕಾರ್ಯಕ್ರಮ, ಪುಸ್ತಕ ಬಿಡುಗಡೆ, ಅಧ್ಯಕ್ಷತೆ: ಕವಯಿತ್ರಿ ಪ್ರತಿಭಾ ನಂದಕುಮಾರ್, ಪುಸ್ತಕ ಕುರಿತು: ಮಂಜುನಾಥ್ ಕೊಳ್ಳೆಗಾಲ, ಉಪಸ್ಥಿತಿ: ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಪ್ರಾಂಶುಪಾಲ ರಘುನಂದನ್, ಹಿರಿತೆರೆ ನಟ ಸತೀಶ್ ಕೃಷ್ಣಸ್ವಾಮಿ, ಅತಿಥಿಗಳು: ರಂಗಕರ್ಮಿ ಕೆ. ವೆಂಕಟರಾಜು ಸ್ಥಳ: ಸುರುಚಿ ರಂಗಮನೆ ಚಿತ್ರಭಾನು ರಸ್ತೆ, ಕುವೆಂಪುನಗರ, ಸಮಯ: ಬೆಳಗ್ಗೆ 10ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಪ್ರಾಚ್ಯವಿದ್ಯಾ ಸಂಶೋಧನಾಲಯ:** ಕೈವಾರ ಸದ್ಗುರು ನಾರೇಯಣ ಯೋಗಿಗಳ ಪರಿಚಯ ಮತ್ತು ಆತ್ಮಬೋಧೆ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಬೆಳಗ್ಗೆ 10ರಿಂದ ಕೃತಿ ಬಿಡುಗಡೆ ಸಮಾರಂಭ, ಪ್ರವಚನ ಮತ್ತು ಪುಷ್ಪಾರ್ಚನೆ: ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತಕುಮಾರ್, ಮುಖ್ಯ ಅತಿಥಿಗಳು: ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಆಶಯ ನುಡಿ: ಪ್ರಾಚ್ಯ ವಿದ್ಯಾ ಸಂಶೋಧನಾಲಯ ವಿಶ್ರಾಂತ ನಿರ್ದೇಶಕ ಡಾ.ಎಸ್.ಶಿವರಾಜಪ್ಪ; ಬೆಳಗ್ಗೆ 11.30ಕ್ಕೆ ಡಾ. ಟಿ.ರಮೇಶ್ ಅವರ ಕೈವಾರ ತಾತಯ್ಯನವರ ಚಿಂತನೆಗಳು ಕೃತಿ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ : ಮಾಜಿ ಸಚಿವ ಎಂ.ಆರ್. ಸೀತಾರಾಮ್, ಅಧ್ಯಕ್ಷತೆ : ಬೆಂಗಳೂರು ಉತ್ತರ ವಿವಿ ಕುಲಪತಿ ಡಾ. ನಿರಂಜನ ವಾನಳ್ಳಿ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ ವ್ಯವಸ್ಥಾಪಕ ನಿರ್ದೇಶಕ ಡಾ. ಎಂ.ಆರ್.ರವಿ, ಸ್ಥಳ: ಲಲಿತ ಕಲೆಗಳ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 13ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 10ಕ್ಕೆ ಸಗ್ರಹಮಖ ನವಚಂಡಿಯಾಗ, ಮಧ್ಯಾಹ್ನ 1ಕ್ಕೆ ಪೂರ್ಣಾಹುತಿ, ಬಲಿಹರಣ, ಕುಮಾರಿ, ಸುವಾಸಿನಿ, ವಟುಕ ಪೂಜಾ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಬಸವ ಸಮಿತಿ :** ಶರಣ ಸಂಗಮ–268, ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಹೆಚ್.ಎಸ್. ಅಂಬಿಕಾ ಅವರಿಂದ ಜಗದ್ಗುರು ಶ್ರೀ ರೇಣುಕಾಚಾರ್ಯರು ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಭಾರತೀಯ ಜೈನ್ ಮಿಲನ್, ವಲಯ–8:** ಜಿನ ಭಜನಾ ರಾಜ್ಯ ಮಟ್ಟದ ಸ್ಪರ್ಧೆ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ವೀರ್ ಧರ್ಮಸ್ಥಳ ಸುರೇಂದ್ರಕುಮಾರ್, ಉಪಸ್ಥಿತರು: ಭಾರತೀಯ ಜೈನ್ ಮಿಲನ್ ಉಪಾಧ್ಯಕ್ಷೆ ವೀರಾಂಗನಾ ಅನಿತಾ ಸುರೇಂದ್ರಕುಮಾರ್, ಭಾರತೀಯ ಜೈನ್ ಮಿಲನ್, ವಲಯ–8 ಬೆಂಗಳೂರು ಪ್ರಧಾನ ಕಾರ್ಯದರ್ಶಿ ವೀರ್ ರಾಜೇಶ್, ಮುಖ್ಯ ಅತಿಥಿಗಳು: ಸಂಸದ ಪ್ರತಾಪ್‌ಸಿಂಹ, ಚಲನಚಿತ್ರ ನಟ ಮುರಳಿ, ನಟಿ ಪ್ರೇಮ ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 4ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜೀ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ವ್ಯವಸ್ಥಾಪಕರು :** ವಿ.ಜಾರ್ಜ್ ಪ್ರಭಾಕರ್ ಅವರಿಂದ ಆರ್ಕೆಸ್ಟ್ರಾ ಮತ್ತು ಗಜಲ್ ಕಾರ್ಯಕ್ರಮ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 6ಕ್ಕೆ

■ **ವೈಜಯಿಕಿ ಆರ್ಟ್ ಅಂಡ್ ಹೆರಿಟೇಜ್ ಫೌಂಡೇಷನ್ :** ವಿದ್ವಾನ್ ಸಂದೀಪ್ ನಾರಾಯಣ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಹೆಚ್.ಎನ್. ಭಾಸ್ಕರ್–ವಯೋಲಿನ್, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಆದಿತ್ಯ ಭವನ ಫಂಕ್ಷನ್ ಹಾಲ್, ಆದಿತ್ಯ ಸರ್ಕಲ್, ಸೋಮನಾಥನಗರ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗಾಯಣದ ಹಿರಿಯ ಕಲಾವಿದರಿಂದ 'ಮಿ. ಬೋಗೀಸ್' ನಾಟಕ ಪ್ರದರ್ಶನ, ನಿರ್ದೇಶನ : ಹೆಚ್.ಕೆ. ದ್ವಾರಕಾನಾಥ್, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

ವಿವಿಧೆಡೆ ಶ್ರೀ ರಾಮನವಮಿ


■ **ಗಾನವಿಶಾರದ ಶ್ರೀಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 106ನೇ ವಾರ್ಷಿಕ ಪಾರಂಪರಿಕ ರಾಮನವಮಿ ಸಂಗೀತೋತ್ಸವ, ಉದ್ಘಾಟನೆ : ಸಂಸ್ಥೆಯ ಅಧ್ಯಕ್ಷ ಆರ್.ಗುರು, ಮೈಸೂರು ವಿ.ಕೃಷ್ಣಮೂರ್ತಿ ಅವರಿಂದ ನಾದಸ್ವರ ವಾದನ, ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 5.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಶೈಲಜಾ ಕುಮಾರ್, 6.20 ಗೀತಾರಾಧನ, 6.35 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ' ಪರಿಚಯಿಸುತ್ತಾರೆ ಡಾ. ಸುಧಾಕರ ಹೊಸಳ್ಳಿ, 6.40 ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಶಾಂತಲಾ ವಟ್ಟಂ, ವ್ಯಾಖ್ಯಾನ– ಡಾ.ಮ.ರಾಮಕೃಷ್ಣ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ', ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.00 ಭವಿಷ್ಯದ ಬೆರಗು–ನವದೆಹಲಿಯ ವಿಜ್ಞಾನ್ ಪ್ರಸಾರ್ ಹಾಗೂ ತಂತ್ರವಿದ್ಯಾ ಮಂಡಲಿಯ ಸಹಯೋಗದಲ್ಲಿ ವಿಜ್ಞಾನ ಸರಣಿ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ, 9.40 ನಮ್ಮ ಆರೋಗ್ಯ–ಪರೀಕ್ಷಾ ಸಿದ್ಧತೆಗೆ ಆಪ್ತ ಸಲಹೆ ಕುರಿತುಡಾ.ಬಿ.ಎನ್. ರವೀಶ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟಾ ನಡೆಸಿಕೊಡುತ್ತಾರೆ ಬಿ.ಆರ್.ನಾಗರತ್ನ, 10.30 ಮಕ್ಕಳಮಂಟಪ, ಬೇಸಿಗೆ ಶಿಬಿರ ಕುರಿತು ಮಕ್ಕಳ ಅಭಿಪ್ರಾಯ ಸಂಗ್ರಹ ಕಾರ್ಯಕ್ರಮ, ಪ್ರಸ್ತುತಿ– ಎಂ.ಎಸ್. ಭಾರತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05ವನಿತಾ ವಿಹಾರ, 12.35 ದೇವರನಾಮ–ವಿದ್ಯಾಭೂಷಣ, 12.45 ಜನಪದ ಸಂಗೀತ–ಸಿ.ಎಂ.ನರಸಿಂಹಮೂರ್ತಿ, 1.20 ಭಾವಗೀತೆ–ಎನ್.ಜ್ಯೋತಿ, 2.35 ಚಲನಚಿತ್ರ ಧ್ವನಿ ವಾಹಿನಿ 'ಎರಡು ಕನಸು', 3.40 ಶ್ರೀ ರಾಮ ಭಕ್ತಿ ನಾದಾಂಜಲಿ. ರೂಪಕ, ಪಂಚವೀಣಾ ಕಾರ್ಯಕ್ರಮ, ಸಂಗೀತ ನಿರ್ದೇಶನ–ಮೈಸೂರು ಎಸ್.ರಾಜಲಕ್ಷ್ಮಿ, ಸಾಹಿತ್ಯ ಮತ್ತು ನಿರೂಪಣೆ–ಡಾ.ವಿ.ರಂಗನಾಥ್, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 5.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ' ಪರಿಚಯಿಸುತ್ತಾರೆ ಡಾ. ಸುಧಾಕರ ಹೊಸಳ್ಳಿ, 7.00 AIR Nxt programme-, 9.00 ಕೃಷಿರಂಗ–ತೋರಣ ಹೂರಣ, ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಪಂಡಿತ್ ಸಮರೇಶ್ ಸೌಧುರಿ – ಗಾಯನ, ಪಂಡಿತ್ ರವಿಕಿರಣ್ ನಾಕೋಡ್ – ತಬಲಾ, 11.00 ಸವಿನೆನಪು



■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ :** 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಪೂಜೆ, ಶ್ರೀ ರಾಮನವಮಿ, ಶ್ರೀ ರಾಮಪಟ್ಟಾಭಿಷೇಕ ಮಹೋತ್ಸವ, ಚೈತನ್ಯ ಭಜನಾ ಮಂಡಳಿಯವರಿಂದ ಶ್ರೀ ರಾಮಸಹಸ್ರ ನಾಮ, ಸಂಜೆ 6ಕ್ಕೆ ವೈಣಿಕ ರತ್ನ ವಿದ್ವಾನ್ ಆರ್.ಕೆ. ಪದ್ಮನಾಭ ಮತ್ತು ವೃಂದದವರಿಂದ ವೀಣಾವಾದನ, ಸ್ಥಳ: ಶ್ರೀರಾಮ ಮಂದಿರ, ಕೃಷ್ಣಮೂರ್ತಿಪುರಂ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ:** ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ, ಸಂಜೆ 5.15ಕ್ಕೆ ವಿದುಷಿ ಸಂಧ್ಯಾ ಭಟ್ ಅವರಿಂದ ಹಿಂದೂಸ್ಥಾನಿ ಗಾಯನ, ವಿಘ್ನೇಶ್ ಭಾಗವತ್–ಹಾರ್ಮೋನಿಯಂ, ಅರ್ಜುನ್ ಕಾಳಿ ಪ್ರಸಾದ್–ತಬಲ, ಸಂಜೆ 6.15ಕ್ಕೆ ವಿದುಷಿ ಐಶ್ವರ್ಯ ವಿದ್ಯಾರಘುನಾಥ್ ಅವರಿಂದ ಗಾಯನ, ಡಾ. ಜ್ಯೋತ್ಸ್ನ ಶ್ರೀಕಾಂತ್–ಪಿಟೀಲು, ಬಿ.ಎಸ್. ಪ್ರಶಾಂತ್–ಮೃದಂಗ, ಶ್ರೀನಿಧಿ ಆರ್–ಘಟಂ, ಸ್ಥಳ : ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಮೈಸೂರು.

■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀರಾಮನವಮಿ ಕಾರ್ಯಕ್ರಮಗಳು, ಸಂಜೆ 5 ರಿಂದ ಶ್ರೀ ಶಂಕರ ಭಜನಾ ಮಂಡಳಿ ಅವರಿಂದ ಭಕ್ತಿಗೀತೆ, ಸಂಜೆ 6 ರಿಂದ ಕರ್ನಾಟಕ ಕಲಾಶ್ರೀ ವಿದುಷಿ ಶ್ರೀಮತಿ ರಾಜಲಕ್ಷ್ಮಿ ಶ್ರೀಧರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಸಮುದಾಯ ಭವನ, ತೆಂಗಿನತೋಪು, ಸರಸ್ವತಿಪುರಂ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ರಾಮೋತ್ಸವ ಕಾರ್ಯಕ್ರಮಗಳು, ಬೆಳಗ್ಗೆ 10ಗಂಟೆಗೆ ಶ್ರೀ ರಾಮಪಟ್ಟಾಭಿಷೇಕ ಪೂಜಾ ಮಹೋತ್ಸವ, ವಿದುಷಿ ರೇಖಾ ರವಿಶಂಕರ ಶಿಷ್ಯ ವೃಂದದವರಿಂದ ದೇವರನಾಮ, ವಿದ್ವಾನ್ ಡಾ.ರಾ.ಸ.ನಂದಕುಮಾರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ : ಗಣಪತಿ ದೇವಸ್ಥಾನ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6.30ಕ್ಕೆ

■ **ಶ್ರೀ ಶಿರಡಿ ಶಕ್ತಿಸಾಯಿಬಾಬಾ ಸನ್ನಿಧಿ :** ಶ್ರೀರಾಮನವಮಿ ಆಚರಣೆ, ಬೆಳಗ್ಗೆ 7 ಗಂಟೆಗೆ ಕಾಕಡಾರತಿ, ಸ್ಥಳ: ಸಾಯಿ ಮಂದಿರ, ರಾಮಕೃಷ್ಣನಗರ.

■ **ಶ್ರೀ ಜಾನಕೀ ರಾಮ ಮಂದಿರ :** ಶ್ರೀ ರಾಮನವಮಿ ಕಾರ್ಯಕ್ರಮ, ಬೆಳಗ್ಗೆ 11 ಗಂಟೆಗೆ ಭಜನಾ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6 ಗಂಟೆಗೆ ಭಜನಾ ಕಾರ್ಯಕ್ರಮ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಮಂದಿರದ ಆವರಣ, ಗೊಲ್ಲಗೇರಿ, ಚಾಮರಾಜ ಮೊಹಲ್ಲಾ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** ಶ್ರೀ ರಾಮೋತ್ಸವ ಕಾರ್ಯಕ್ರಮ, ವಿದುಷಿ ಸುಧಾ ರಘುನಾಥನ್ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30ರಿಂದ.

■ **ಶ್ರೀ ರಾಮ ಸೇವಾ ಮಂಡಲಿ:** ಶ್ರೀ ರಾಮೋತ್ಸವ ಕಾರ್ಯಕ್ರಮ, ಬೆಳಗ್ಗೆ 10.30ಕ್ಕೆ ಸೀತಾರಾಮ ಭಜನಾ ಮಂಡಳಿಯಿಂದ ಭಜನೆ, ಸಂಜೆ 6.30ರಿಂದ ಚಿನ್ಮಯಿ ಮಿಷನ್‌ನ ಸ್ವಾಮಿ ದತ್ತಪಾದಾನಂದ ಅವರಿಂದ ಪುರಜನ ಗೀತೆ (ತುಳಸಿ ರಾಮಾಯಣ ಆಧಾರಿತ) ಕುರಿತು ಉಪನ್ಯಾಸ, ಸಂಜೆ 7.45 ರಿಂದ ಕು. ಜಿ. ಶ್ರೀಲಕ್ಷ್ಮಿ ಮತ್ತು ವೃಂದದವರಿಂದ ವೀಣಾವಾದನ, ಸ್ಥಳ: ಶ್ರೀ ಶಂಕರನಾರಾಯಣಸ್ವಾಮಿ ದೇವಸ್ಥಾನ, ಚಾಮುಂಡಿಪುರಂ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 10 ಭಾನುವಾರ 2022

ಸಂಪುಟ: 43 | ಸಂಚಿಕೆ: 350 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮನೆ ಮನೆಗೆ ಗಂಗೆ

ವಿಧಾನಸಭೆ ಚುನಾವಣೆಯೊಳಗೆ ರಾಜ್ಯದ 97 ಲಕ್ಷ ಮನೆಗಳಿಗೆ ನಲ್ಲಿ ನೀರು

- ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಘೋಷಣೆ
- 50 ಸಾವಿರ ಗ್ರಾಮಗಳಲ್ಲಿ 2020ರಲ್ಲಿ ಯೋಜನೆಗೆ ಚಾಲನೆ; ಈಗಾಗಲೇ ಮೂರು ಸಾವಿರ ಗ್ರಾಮಗಳ ಮನೆಗಳಿಗೆ ನಲ್ಲಿ ನೀರು ಪೂರೈಕೆ
- ಮನ್‌ರೇಗಾದಲ್ಲಿ ದಾಖಲೆ ಪ್ರಗತಿ; 32 ಲಕ್ಷ ಕುಟುಂಬಗಳಿಗೆ ಆಧಾರ



ಬೆಂಗಳೂರು,ಏ.9(ಕೆಎಂಶಿ)–ಮುಂಬರುವ ವಿಧಾನಸಭಾ ಚುನಾವಣೆಗೆ ಮುನ್ನವೇ ಗ್ರಾಮೀಣ ಭಾಗದ ಎಲ್ಲ ಮನೆಗಳಿಗೂ ನಲ್ಲಿ ನೀರು ಪೂರೈಸಲಾಗುವುದು ಎಂದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 97 ಲಕ್ಷ ಮನೆಗಳಿಗೆ ಮನೆಮನೆಗೆ ಗಂಗೆ ಯೋಜನೆಯಡಿಯಲ್ಲಿ ನೀರು ಸರಬರಾಜು ಮಾಡಲಾಗುವುದು ಎಂದರು. ಮನೆ ಮನೆಗೆ ನಲ್ಲಿ ನೀರು ನೀಡುವ ಕೆಲಸ ವೇಗವಾಗಿ ಸಾಗುತ್ತಿದೆ. ರಾಜ್ಯದ ಕಾಮಗಾರಿ ಸಂಬಂಧ ಕೇಂದ್ರ ಸರಕಾರದಿಂದ ಈ ವಿಚಾರದಲ್ಲಿ ಮೆಚ್ಚುಗೆ ವ್ಯಕ್ತವಾಗುತ್ತಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಮನೆ ಮನೆಗೆ ಗಂಗೆ ಯೋಜನೆ 2020 ರಲ್ಲಿ ಆರಂಭವಾಗಿದೆ. 50 ಸಾವಿರಕ್ಕೂ ಹೆಚ್ಚು ಗ್ರಾಮಗಳಲ್ಲಿ ಯೋಜನೆಗೆ ಚಾಲನೆ ಕೊಟ್ಟಿದ್ದೇವೆ. ಈಗಾಗಲೇ 3 ಸಾವಿರ ಗ್ರಾಮಗಳ ಪ್ರತಿ ಮನೆಗೆ ಕೊಳಾಯಿ ಮೂಲಕ ನೀರು ಸರಬರಾಜು ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ● 9ನೇ ಪುಟಕ್ಕೆ



ಕೆ.ಎಸ್.ಈಶ್ವರಪ್ಪ

ಕೋವ್ಯಾಕ್ಸಿನ್, ಕೋವಿಶೀಲ್ಡ್ ಡೋಸ್‌ಗೆ 800 ರೂ. ದರ ನಿಗದಿ

ಮೈಸೂರು,ಏ.9(ಆರ್‌ಕೆ)–ಖಾಸಗಿ ಆಸ್ಪತ್ರೆಗಳಲ್ಲಿ ನಾಳೆ (ಏ.10)ಯಿಂದ 18 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್ ಲಸಿಕೆ ನೀಡಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ತಿಳಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು ಕೋವ್ಯಾಕ್ಸಿನ್, ಕೋವಿಶೀಲ್ಡ್ ಲಸಿಕೆಗೆ 800 ರೂ. ದರ ನಿಗದಿಪಡಿಸಲಾಗಿದೆ. ಅರ್ಹ ಫಲಾನುಭವಿಗಳು ಖಾಸಗಿ ಆಸ್ಪತ್ರೆಗಳಲ್ಲಿ ಭಾನುವಾರದಿಂದ ಬೂಸ್ಟರ್ ಡೋಸ್ ಪಡೆಯಬಹುದು. ಆದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಮಕ್ಕಳಿಗೆ ಕಾರ್ಬೆವ್ಯಾಕ್ಸ್, ಆರೋಗ್ಯ ಕಾರ್ಯಕರ್ತರಿಗೆ ಉಚಿತವಾಗಿ ಲಸಿಕೆ ನೀಡಲಾಗುವುದು ಎಂದರು.

ಇಂದಿನಿಂದ 18 ವರ್ಷ ಮೇಲ್ಪಟ್ಟವರಿಗೆ

ಬೂಸ್ಟರ್ ಡೋಸ್

- 2 ಡೋಸ್ ಪಡೆದು 9 ತಿಂಗಳಾದವರು ಈ ಡೋಸ್ ಪಡೆಯಬಹುದು
- ಖಾಸಗಿ ಲಸಿಕಾ ಕೇಂದ್ರಗಳಲ್ಲಿ ನಿಗದಿತ ದರಕ್ಕೆ ಲಸಿಕೆ ಲಭ್ಯ
- ಕೊರೊನಾ ವಿರುದ್ಧ ಹೋರಾಟಕ್ಕೆ ವೇಗ ನೀಡಲು ನಿರ್ಧಾರ
- ರಾಜ್ಯದಲ್ಲಿ 12–14 ವಯೋಮಾನದವರಿಗೆ ಶೇ.65.6ರಷ್ಟು ಮೊದಲ ಡೋಸ್ ಲಸಿಕೆ

ಬೆಂಗಳೂರು,ಏ.9(ಕೆಎಂಶಿ)–ಹದಿನೆಂಟು ವರ್ಷ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆಯಾಗಿ ಬೂಸ್ಟರ್ ಡೋಸ್ ನಾಳೆಯಿಂದ ಲಭ್ಯವಾಗಲಿದೆ. ವಯಸ್ಕರು 2 ಡೋಸ್ ಪಡೆದು 9 ತಿಂಗಳು ಪೂರ್ಣವಾಗಿದ್ದಲ್ಲಿ, ಬೂಸ್ಟರ್ ಡೋಸ್ ಪಡೆಯಬಹುದಾಗಿದೆ.




ಖಾಸಗಿ ಲಸಿಕಾ ಕೇಂದ್ರಗಳಲ್ಲಿ ಈ ಬೂಸ್ಟರ್ ಡೋಸ್ ಲಭ್ಯವಾಗಲಿದೆ. ಪ್ರಾಥಮಿಕ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಈ ಡೋಸ್ ಲಭ್ಯವಾಗುವುದಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಸುಧಾಕರ್ ಸ್ಪಷ್ಟಪಡಿಸಿದ್ದಾರೆ. ಕೊರೊನಾ ವಿರುದ್ಧದ ಹೋರಾಟಕ್ಕೆ ಇನ್ನಷ್ಟು ವೇಗ ನೀಡಲು ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಇಂತಹ ಕ್ರಮ ಕೈಗೊಂಡಿದ್ದು, ಖಾಸಗಿ ಲಸಿಕಾ ಕೇಂದ್ರಗಳಲ್ಲಿ ಈ ಡೋಸ್ ● 9ನೇ ಪುಟಕ್ಕೆ

ಬಿಟ್ ಕಾಯಿನ್ ಕುರಿತು ಅಮೆರಿಕಾ ತನಿಖೆ

ಬೊಮ್ಮಾಯಿ ಸರ್ಕಾರಕ್ಕೆ ಮತ್ತೆ ತಲೆ ನೋವು

ಬೆಂಗಳೂರು,ಏ.9(ಕೆಎಂಶಿ)–ಬಿಟ್‌ಕಾಯಿನ್ ಹಗರಣ ಮತ್ತೆ ಪ್ರತಿಧ್ವನಿಸಿದ್ದು, ಬೊಮ್ಮಾಯಿ ನೇತೃತ್ವದ ಸರ್ಕಾರ ಇಕ್ಕಟ್ಟಿಗೆ ಸಿಲುಕುವ ಸಾಧ್ಯತೆ ಹೆಚ್ಚಾಗಿದೆ. ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ಹಾಗೂ ಇಡಿ ನೀಡಿರುವ ವರದಿಯನ್ನು ಆಧರಿಸಿ, ಅಮೆರಿಕಾ ತನಿಖಾ ಸಂಸ್ಥೆ ಎಫ್‌ಬಿಐ (ಫೆಡರಲ್ ಬ್ಯುರೋ ಆಫ್ ಇನ್ವೆಸ್ಟಿಗೇಷನ್) ಇದೀಗ ತನ್ನದೇ ಆದ ಧಾಟಿಯಲ್ಲಿ ತನಿಖೆ ಆರಂಭಿಸಿದೆ. ಏಪ್ರಿಲ್ ಮೊದಲ ವಾರದಲ್ಲಿ ಈ ತನಿಖಾ ಸಂಸ್ಥೆ ಅಧಿಕಾರಿಗಳು ದೆಹಲಿಗೆ ಬಂದು ಒಂದಷ್ಟು ಮಾಹಿತಿ ಸಂಗ್ರಹಿಸಿ, ಹಿಂತಿರುಗಿದ್ದಾರೆ.



ಏಪ್ರಿಲ್ 3ನೇ ಇಲ್ಲವೆ 4ನೇ ವಾರದಲ್ಲಿ ಮತ್ತೆ ಬೆಂಗಳೂರಿಗೆ ಧಾವಿಸಿ, ಬಿಟ್ ಕಾಯಿನ್ ಹಗರಣದ ತನಿಖೆ ನಡೆಸುತ್ತಾರೆ ಎಂಬ ಸುದ್ದಿಗಳು ಕೇಳಿ ಬಂದಿವೆ. ಈ ಮಧ್ಯೆ ಕಾಂಗ್ರೆಸ್‌ನ ಎಐಸಿಸಿಯ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕದ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೆವಾಲ ಮತ್ತು ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಸಿಎಂ ● 9ನೇ ಪುಟಕ್ಕೆ

ನವಜಾತ ಹೆಣ್ಣು ಮಗು ಮಾರಾಟ

ಐವರ ವಿರುದ್ಧ ಪ್ರಕರಣ ದಾಖಲು

ಹೆಚ್.ಡಿ.ಕೋಟೆ,ಏ.9(ಮಂಜು)–ಜನಿಸಿದ ಒಂದೇ ದಿನದಲ್ಲಿ ಮಹಿಳೆಯೋರ್ವಳು ತನ್ನ ಹೆಣ್ಣು ಮಗುವನ್ನು ಮಧ್ಯವರ್ತಿ ಮೂಲಕ ಮಾರಾಟ ಮಾಡಿದ ಬಗ್ಗೆ ವರದಿಯಾಗಿದ್ದು, ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆ ಪೊಲೀಸರು ಐವರ ವಿರುದ್ಧ ಮಗು ಮಾರಾಟ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವಿವರ: ಹೆಚ್.ಡಿ.ಕೋಟೆ ಪಟ್ಟಣದ ವಿಶ್ವನಾಥ ಕಾಲೋನಿಯ ಮಹಿಳೆಗೆ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಏ.5ರಂದು ಹೆಣ್ಣು ಮಗು ಜನನವಾಗಿತ್ತು. ಆದರೆ ಈ ಮಹಿಳೆ ಮರುದಿನವೇ ಪಟ್ಟಣದ ಬಸ್ ನಿಲ್ದಾಣದ ಬಳಿ ಮಧ್ಯವರ್ತಿ ಮಹಿಳೆಯೊಬ್ಬರಿಗೆ ಮಗುವನ್ನು ಹಸ್ತಾಂತರಿಸಿದ್ದು, ಆಕೆ ನಂಜನಗೂಡು ತಾಲೂಕು ಚನ್ನಪಟ್ಟಣ ಗ್ರಾಮದಲ್ಲಿನ ಮಕ್ಕಳಿಲ್ಲದ ದಂಪತಿಗೆ ಮಗುವನ್ನು ಮಾರಾಟ ಮಾಡಿದ್ದಾಳೆ ಎಂದು ಹೇಳಲಾಗಿದೆ. ಜನಿಸಿದ ಒಂದೇ ದಿನಕ್ಕೆ ತಾಯಿಯೇ ● 9ನೇ ಪುಟಕ್ಕೆ

ಹುಬ್ಬಳ್ಳಿಯಿಂದ ಮೈಸೂರಿಗೆ ಮೇ 3ರಿಂದ ವಾರದಲ್ಲಿ 3 ದಿನ ಇಂಡಿಗೋ ವಿಮಾನ ಸೇವೆ



ಹುಬ್ಬಳ್ಳಿ,ಏ.9– ಹುಬ್ಬಳ್ಳಿಯಿಂದ ಮೈಸೂರಿಗೆ ಮೇ 3ರಿಂದ ವಿಮಾನ ಸೇವೆ ಆರಂಭವಾಗಲಿದೆ. ಕೇಂದ್ರ ಸಂಸದೀಯ ವ್ಯವಹಾರ, ಗಣಿ ಮತ್ತು ಕಲ್ಲಿದ್ದಲು ಖಾತೆ ಸಚಿವ ಪ್ರಹ್ಲಾದ ಜೋಶಿಯವರು ಇಂಡಿಗೋ ವಿಮಾನಯಾನ ಸಂಸ್ಥೆಗೆ ಮನವಿ ಮಾಡಿದ್ದರು. ಸಚಿವರ ಮನವಿಗೆ ಸ್ಪಂದಿಸಿದ ಇಂಡಿಗೋ ಸಂಸ್ಥೆ ಮೇ 3ರಿಂದ ವಾರದಲ್ಲಿ 3 ದಿನ ಮೈಸೂರಿಗೆ ವಿಮಾನ ಹಾರಾಟ ಪ್ರಾರಂಭಿಸಲಿದೆ.

ಕೇಂದ್ರ ಸರ್ಕಾರ ಹುಬ್ಬಳ್ಳಿ ವಿಮಾನ ನಿಲ್ದಾಣವನ್ನು ಸುಸಜ್ಜಿತ ನಿಲ್ದಾಣವನ್ನಾಗಿ ಮಾರ್ಪಡಿಸಿದೆ. ಹುಬ್ಬಳ್ಳಿಯಿಂದ ಮೈಸೂರು, ಮಂಗಳೂರು ನಗರಗಳಿಗೆ ವಿಮಾನ ಯಾನ ಸೇವೆ ಅವಶ್ಯಕತೆ ಇತ್ತು. ಬಹುದಿನ ಬೇಡಿಕೆಗೆ ಇಂದು ಚಾಲನೆ ನೀಡಲಾಗುತ್ತಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳು, ಗಣಿ ಮತ್ತು ಕಲ್ಲಿದ್ದಲು ಸಚಿವ ಪ್ರಹ್ಲಾದ್ ಜೋಶಿ ಹೇಳಿದ್ದಾರೆ.

ಇದನ್ನು ಸಾಧ್ಯವಾಗಿಸಿದ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ ಮತ್ತು ಇಂಡಿಗೋದ ಆಡಳಿತ ವರ್ಗಕ್ಕೆ ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಅವರು : (ಬುಕ್ ಸ್ಟಾಲ್‌ನಲ್ಲಿ) "ಸ್ವಾಮಿ 'ಗಂಡನೇ ಯಜಮಾನ' ಎನ್ನುವ ಸಾಮಾಜಿಕ ಕಾದಂಬರಿ ಇದೆಯಾ?"

ಮಾಲೀಕರು : "ಇದೆ ಸಾರ್. ಆದರೆ ಅದು ಸಾಮಾಜಿಕ ಕಾದಂಬರಿ ಅಲ್ಲ. ಕಾಲ್ಪನಿಕ ಕಾದಂಬರಿ!"

ಮೈಸೂರು ಮಿತ್ರ

ಭಾನುವಾರ, 10 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ವಿನಯವು ಸಕಲ ಸದ್ಗುಣಗಳ ಮೂಲ – ಕನ್‌ಫ್ಯೂಷಿಯಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹಂಗಿನ ಹೋಳಿಗೆಗಿಂತ ತಂಗಳನ್ನವೇ ಲೇಸು

ನಿಮ್ಮ ಪತ್ರಗಳು

ಸರ್ಕಾರ ಬೆಲೆ ಏರಿಕೆಗೆ ಕಡಿವಾಣ ಹಾಕಲಿ

ಮಾನ್ಯರೆ,

ದಿನದಿಂದ ದಿನಕ್ಕೆ ಏರುತ್ತಲಿರುವ ಪೆಟ್ರೋಲ್, ಡೀಸೆಲ್ ಬೆಲೆ ಈಗ ಶತಕದ ಗಡಿ ದಾಟಿ ಯಾವುದೇ ಎಗ್ಗಿಲ್ಲದೆ ಮುನ್ನುಗ್ಗುತ್ತಿದೆ!. ಇದರ ಜೊತೆ ಜೊತೆಗೆ ವಿದ್ಯುತ್ ದರ ಏರಿಕೆಯ ಶಾಕ್ ಒಂದು ಕಡೆಯಾದರೆ ಮತ್ತೊಂದು ಕಡೆ ಸಿಲಿಂಡರ್ ಬೆಲೆ ಏರಿಕೆಯ ಬಿಸಿಯಂತೂ ಈ ಬಿರುಬೇಸಿಗೆಯ ಬಿಸಿಲ ಶಾಖಕ್ಕಿಂತಲೂ ತುಸು ಜಾಸ್ತಿಯೇ ಆಗಿದೆ. ಇದರಿಂದಾಗಿ ಶ್ರೀಸಾಮಾನ್ಯ ತತ್ತರಿಸಿ ಹೋಗುತ್ತಿದ್ದಾನೆ.

ಹೀಗೆ ಶ್ರೀಸಾಮಾನ್ಯನ ನಿತ್ಯ ಬಳಕೆಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿರುವ ಸಂಕಷ್ಟದ ಸಮಯದಲ್ಲಿ ಶ್ರೀಸಾಮಾನ್ಯನ ಪರ ನಿಲ್ಲಬೇಕಾಗಿದ್ದ ಸರ್ಕಾರ ಹಿಜಾಬ್, ಹಲಾಲ್ ಕಟ್, ಆಜಾನ್ ಹೀಗೆ ದಿನಕ್ಕೊಂದು ಹೊಸ ಹೊಸ ಬಗೆಯ ಗುಮ್ಮಗಳನ್ನು ಜನಗಳ ಮಧ್ಯೆ ತಂದು ಜನರ ಗಮನವನ್ನು "ಬೆಲೆ ಏರಿಕೆ" ಕಡೆಯಿಂದ ಬೇರೆಡೆಗೆ ಸೆಳೆಯುತ್ತಾ ಧರ್ಮ ಧರ್ಮಗಳ ನಡುವೆ, ಜಾತಿ ಜಾತಿಗಳ ನಡುವೆ ಕೋಮು ಸಂಘರ್ಷ ತಂದಿಟ್ಟು ನಾಡಿನಲ್ಲಿ ಶಾಂತಿ ಕದಡಲು ಪೈಪೋಟಿಗೆ ಬಿದ್ದವರಂತೆ ನಿಂತಿರುವುದು ನಾಚಿಕೆಗೇಡಿನ ಸಂಗತಿ..! ಸಂಕಷ್ಟದ ಸಮಯದಲ್ಲಿ ನೊಂದ ಜನರ ಪರ ನಿಂತು ಜನತೆಯ ಹಿತ ಕಾಯಬೇಕಾದ ಸರ್ಕಾರ ಸದ್ದಿಲ್ಲದೆ ಒಳಗೊಳಗೆ ಅದಾನಿ, ಅಂಬಾನಿ ಅಂತಹ ಉಳ್ಳವರ ಪರ ನಿಂತು ಮತ ಕೊಟ್ಟು ಅಧಿಕಾರಕ್ಕೇರಿಸಿದವರ ಬದುಕನ್ನೇ ಬೀದಿಗೆ ತಂದು ನಿಲ್ಲಿಸಿ ಬಿಟ್ಟಿವೆ. ಇದಕ್ಕೆ ಏನನ್ನಬೇಕೋ ಒಂದೂ ತಿಳಿಯದಾಗಿದೆ....! ಇದು ಹೀಗೆ ಮುಂದುವರಿದರೆ ಶ್ರೀಸಾಮಾನ್ಯರ ಪಾಡೇನು?

ಇನ್ನಾದರೂ ಸರ್ಕಾರಗಳು ಆದಷ್ಟು ಬೇಗ ಎಚ್ಚೆತ್ತುಕೊಂಡು ಬೆಲೆ ಏರಿಕೆಯ ಸಂಕಷ್ಟದ ಸುಳಿಯಲ್ಲಿ ಸಿಲುಕಿ ನಲುಗಿರುವ ಬಡಜನರ ಪರ ನಿಂತು, ಏರುತ್ತಲಿರುವ ಬೆಲೆ ಏರಿಕೆಗೆ ಕಡಿವಾಣ ಹಾಕಬೇಕಿದೆ. ಇಲ್ಲವಾದಲ್ಲಿ ಜನರು ರೊಚ್ಚಿಗೆದ್ದು ಸರ್ಕಾರದ ವಿರುದ್ಧ ದಂಗೆ ಎದ್ದಾರೂ ಎಚ್ಚರ..!

–ರಾಜೇಂದ್ರ ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ.

ತೆರಿಗೆ ಪಾವತಿದಾರರ ಹಣದಲ್ಲಿ ಪ್ರಚಾರವೇ!?

ಮಾನ್ಯರೆ,

ಸಹಜವಾಗಿ ಯಾವುದಾದರೂ ಮೂಲ ಸೌಕರ್ಯ/ಅಭಿವೃದ್ಧಿ ಕಾಮಗಾರಿ ಒಳಗೊಂಡ ಸರ್ಕಾರಿ ಕೆಲಸ ಮುಗಿದ ನಂತರ ಕಾಮಗಾರಿಯ ವಿವರಗಳನ್ನೊಳಗೊಂಡ ನಾಮ ಫಲಕ ಹಾಕುವುದು ಸರ್ವೇ ಸಾಮಾನ್ಯ. ಆದರೆ ವಿಪರ್ಯಾಸ ನೋಡಿ ಸ್ವಾಮಿ, ಇತ್ತೀಚೆಗೆ ಗಮನಿಸಿದ ಹಾಗೆ ಸ್ಟರ್ಲಿಂಗ್ ಟಾಕೀಸ್‌ನಿಂದ ರಿಂಗ್ ರೋಡ್‌ವರೆಗಿನ ಅಕ್ಕಮಹಾದೇವಿ ರಸ್ತೆ ಹಾಗೂ ನಂಜನಗೂಡು–ಹೆಚ್.ಡಿ.ಕೋಟೆ ಲಿಂಕ್ ರಸ್ತೆಗಳಲ್ಲಿ ಕೆಲವು ಸರ್ಕಾರಿ ನಾಮ ಫಲಕಗಳು ರಾರಾಜಿಸುತ್ತಿವೆ. ಈ ನಾಮಫಲಕಗಳ ವಿಶೇಷತೆ ಏನೆಂದರೆ, ಇದರಲ್ಲಿ ಕಾಮಗಾರಿಯ ವಿವರಕ್ಕಿಂತಲೂ ಹೆಚ್ಚಾಗಿ ಅದರಲ್ಲಿರುವ ಶಾಸಕರ ಭಾವಚಿತ್ರ ಬಹಳ ಜೋರಾಗಿದೆ! ಈ ರೀತಿ ಸರ್ಕಾರಿ ನಾಮ ಫಲಕದಲ್ಲಿ ಭಾವಚಿತ್ರ ಹಾಕಿಕೊಳ್ಳುವುದು ಎಷ್ಟು ಸರಿ. ಅದಿರಲಿ, ಇಷ್ಟಕ್ಕೂ ಇವರೇನು ಇವರ ಸ್ವಂತ ದುಡ್ಡಿನಲ್ಲಿ ಕಾಮಗಾರಿ ನಡೆಸಿದ್ದಾರೆಯೇ? ಕ್ಷೇತ್ರದ ಪ್ರತಿಯೊಂದು ಕಾಮಗಾರಿ ಮಾಡಿಸುವುದು ಇವರ ಕರ್ತವ್ಯ. ಅದನ್ನು ಬಿಟ್ಟು ಈ ರೀತಿ ಪ್ರಚಾರಕ್ಕಾಗಿ ದೊಡ್ಡ ಭಾವಚಿತ್ರದೊಂದಿಗೆ ನಾಮಫಲಕ ಬಿಂಬಿಸುವುದು ನಿಜವಾಗಿಯೂ ತೆರಿಗೆ ಪಾವತಿದಾರರ ಹಣದಲ್ಲಿ ಬಿಟ್ಟಿ ಪ್ರಚಾರವೇ ಹೊರತು ಇನ್ನೇನೂ ಅಲ್ಲ (ಯಾರದ್ದೋ ದುಡ್ಡು, ಎಲ್ಲಮ್ಮನ ಜಾತ್ರೆ). ಇದನ್ನೆಲ್ಲಾ ಬಿಟ್ಟು ಶಾಸಕರು ಮಾಡಬೇಕಾದ ಕೆಲಸ ಬಹಳ ಇದೆ. ಉದಾ: ಅಕ್ಕಮಹಾದೇವಿ ಪ್ರತಿಮೆ ಬಳಿ ಇರುವ ಮಳೆ ನೀರಿನ ಚರಂಡಿ ಕಾಮಗಾರಿ, ಸಂತ ಥಾಮಸ್ ಶಾಲೆ ರಸ್ತೆ ಡಾಂಬರೀಕರಣ, ರಿಂಗ್ ರಸ್ತೆಯುದ್ದಕ್ಕೂ ಕಸದ ರಾಶಿ ವಿಲೇವಾರಿ, ಎನ್‌ಐಇ ಕಾಲೇಜಿನ ಸ್ಪೋರ್ಟ್ಸ್ ಗ್ರೌಂಡ್ ಗೇಟ್ ಎದುರು ರಸ್ತೆಯಲ್ಲಿ 2 ವರ್ಷಕ್ಕೂ ಅಧಿಕ ಅವಧಿಯಿಂದ ಪೋಲಾಗುತ್ತಿರುವ ನೀರು ಹಾಗೂ ಅದೇ ಜಾಗದಲ್ಲಿ ಸಿಗ್ನಲ್ ಅವಶ್ಯಕತೆ (ಅಪಘಾತ ಸ್ಥಳ), ಹೆಚ್.ಡಿ. ಕೋಟೆ ಲಿಂಕ್ ರಸ್ತೆ – ನಾಚನಹಳ್ಳಿ ಪಾಳ್ಯ ಪೆಟ್ರೋಲ್ ಬಂಕ್ ಬಳಿ ಸಿಗ್ನಲ್ ಅಳವಡಿಕೆ (ಅಪಘಾತ ಸ್ಥಳ), ಇನ್ನೂ ಹಲವಾರು. ಪ್ರಜ್ಞಾವಂತ ಜನರು ಈಗಲಾದರೂ ಎಚ್ಚೆತ್ತು ಈ ರೀತಿಯ ಬೆಳವಣಿಗೆಗಳನ್ನೂ ತಿರಸ್ಕರಿಸದ್ದಿದರೆ, ಮುಂದೆ ಚುನಾವಣೆ ಹತ್ತಿರವಾದಂತೆ ಈ ರಾಜಕಾರಣಿಗಳ ಹುಚ್ಚಾಟ ಇನ್ನೂ ಹೆಚ್ಚಾದೀತು ಎಚ್ಚರ!!

–ಪ್ರಜ್ಞಾವಂತ ಮತದಾರ, ವಿಶ್ವೇಶ್ವರನಗರ, ಮೈಸೂರು.

ಪಾಕಿಸ್ತಾನದ ಸುಪ್ರೀಂ ಕೋರ್ಟ್ ತೀರ್ಪು ಚಾರಿತ್ರಿಕ

ಮಾನ್ಯರೆ,

ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಯ ಉಪಾಧ್ಯಕ್ಷ ಖಾಸೀಮ್ ಸೂರಿಯವರು, ಪ್ರಧಾನ ಮಂತ್ರಿ ಇಮ್ರಾನ್ ಖಾನ್ ವಿರುದ್ಧ ಪ್ರಮುಖ ವಿರೋಧ ಪಕ್ಷಗಳು ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನು ವಜಾಗೊಳಿಸಿರುವುದನ್ನು ರದ್ದು ಮಾಡಿ, ಸಂಸತ್ ಅನ್ನು ಮರು ಸ್ಥಾಪಿಸಲು ಪಾಕಿಸ್ತಾನದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಬಂಡಿಯಾಲ್ ನೇತೃತ್ವದ ಪಂಚಪೀಠ ಆದೇಶ ಹೊರಡಿಸಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ಅದೇ ರೀತಿ ಅವಿಶ್ವಾಸ ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳಲು ರಾಷ್ಟ್ರೀಯ ಅಸೆಂಬ್ಲಿಯ ಅಧಿವೇಶನವನ್ನು ಕರೆಯುವಂತೆ ಆದೇಶಿಸಿದ್ದು, ಅತ್ಯಂತ ಕುತೂಹಲಕಾರಿ ಸಂಗತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ತೀವ್ರ ರೀತಿಯ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ಪಾಕಿಸ್ತಾನ ಇದೀಗ ರಾಜಕೀಯ ಬಿಕ್ಕಟ್ಟನ್ನು ಸಹ ಎದುರಿಸುತ್ತಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಪ್ರೀತಿಯ ವಿದ್ಯಾರ್ಥಿಗಳಿಗೆ ಮೌಲ್ಯಯುತ ಸಲಹೆ

ಮಾನ್ಯರೆ,

ವಿದ್ಯಾರ್ಥಿಯ ಜೀವನವು ವ್ಯಕ್ತಿಯ ಜೀವಿತಾವಧಿಯಲ್ಲಿ ಬಹುಮುಖ್ಯವಾದುದು. ಒಮ್ಮೆ ಕಳೆದರೆ ಮತ್ತೆಂದೂ ಸಿಗದು. ಹಾಗಾಗಿ ಇರುವಾಗಲೇ ಅದನ್ನು ಒಂದು ಕ್ಷಣವೂ ವ್ಯರ್ಥವಾಗದಂತೆ ಕಳೆಯಬೇಕು. ಕಳೆದಾದ ಮೇಲೆ ಆನಂತರ ಕೊರಗಿ ಪ್ರಯೋಜನವಿಲ್ಲ.

ಈಗಾಗಲೇ ಪದವಿಪೂರ್ವ ಶಿಕ್ಷಣ ಇಲಾಖೆಯು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ –2022ರ ಪರಿಷ್ಕೃತ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಅದರಂತೆ ಏಪ್ರಿಲ್ 22 ರಿಂದ ಮೇ 18 ರವರೆಗೆ ಪರೀಕ್ಷೆಗಳು ನಡೆಯಲಿವೆ. ಈ ಮಧ್ಯೆ ಚುಟುಕು ಕ್ರಿಕೆಟ್ ಟಾಟಾ ಸಂಸ್ಥೆ ಪ್ರಾಯೋಜಿತ ಐಪಿಎಲ್ 2022 ಶುರುವಾಗಿದೆ. ಅದು ಮೇ 29ರ ಫೈನಲ್‌ನಲ್ಲಿ ಕೊನೆಯಾಗಲಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಕ್ರಿಕೆಟ್ ವೀಕ್ಷಣೆಗಾಗಿ ಸಮಯ ವ್ಯರ್ಥ ಮಾಡಬೇಡಿ. ಈ ಐಪಿಎಲ್ ಮುಗಿದರೂ ಮತ್ತೊಂದು ಐಪಿಎಲ್ ಬರುತ್ತದೆ. ಈ ಸಮಯ ಕಳೆದರೆ ಮತ್ತೆಂದೂ ನಿಮಗೆ ಲಭಿಸದು. ಈ ಬಗ್ಗೆ ಪೋಷಕರು ಸಹ ಜವಾಬ್ದಾರಿಯುತ ನಡೆಯಿಂದ ತಮ್ಮ ಮಕ್ಕಳಲ್ಲಿ ಅರಿವು ಮೂಡಿಸಬೇಕಾಗಿದೆ. ಏಕಾಗ್ರತೆಯಿಂದ ಓದಿ ಸಮಯ ಪೋಲು ಮಾಡದೇ ಅಭ್ಯಸಿಸಿದಾಗ ಉತ್ತಮ ಭವಿಷ್ಯ ನಿಮ್ಮದಾಗಬಹುದು. ಅದರ ಬಗ್ಗೆ ಒಂದು ಎಚ್ಚರಿಕೆಯ ನಡೆ–ಹೆಜ್ಜೆ ಇಡಿ. ನಿಮಗೆ ನೀವೇ ಶಿಲ್ಪಿ.

–ಎ.ಎಸ್. ಗೋವಿಂದೇಗೌಡ, ಬೋಗಾದಿ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ನಮ್ಮದು ಶಿಕ್ಷಣವೋ? ಸರ್ಟಿಫಿಕೇಟೋ?

> "ಈ ಹಿಂದಿನ ನಮ್ಮ ಶಿಕ್ಷಣ ಪದ್ಧತಿಯೂ ಇದನ್ನೇ ಹೇಳುತ್ತಿತ್ತು. ಒಬ್ಬ ವಿದ್ಯಾರ್ಥಿ ಯಾವುದಾದರೂ ಕರಕುಶಲ ಕಲೆಯಲ್ಲಿ ಅಥವಾ ಜೀವನಕ್ಕೆ ಅಗತ್ಯವೆನಿಸುವ ತಾಂತ್ರಿಕ ಶಿಕ್ಷಣ ಪಡೆಯಬೇಕು. ಈ ಶಿಕ್ಷಣದಿಂದ ಅವನು ಸ್ವತಂತ್ರವಾಗಿ ಜೀವನ ನಡೆಸುವಂತೆ ಆಗಬೇಕು ಎಂಬುದಾಗಿತ್ತು. ಹಾಗಾಗಿ ಹಿಂದಿನ 64 ವಿದ್ಯೆಗಳಲ್ಲಿ ಇಂತಹ ಜೀವನಕ್ಕೆ ಅಗತ್ಯವೆನಿಸುವ ಶಿಕ್ಷಣ ನೀಡಲಾಗುತ್ತಿತ್ತು. ಅದು ಜೀವನಕ್ಕೆ ದಾರಿ ತೋರಿಸುತ್ತಿತ್ತು. ಅಂತಹ ಶಿಕ್ಷಣ ಪಡೆದು ನಿಷ್ಠೆಯಿಂದ ಜೀವನ ನಡೆಸಿದಲ್ಲಿ ಅವರಿಗೆ ಹಣವು ತಾನಾಗೇ ಹುಡುಕಿಕೊಂಡು ಬರುತ್ತಿತ್ತು. ಅಂತಹ ಶಿಕ್ಷಣ ವ್ಯವಸ್ಥೆ ಇಲ್ಲಿತ್ತು. ಆದರೆ ಪಾಶ್ಚಾತ್ಯದ ಪ್ರಭಾವ ನಮ್ಮನ್ನು ನಮ್ಮ ಶಿಕ್ಷಣ ವ್ಯವಸ್ಥೆಯಿಂದ ದೂರ ಸರಿಯುವಂತೆ ಮಾಡಿಬಿಟ್ಟಿತು. ಈಗ ಮತ್ತೆ ಅದನ್ನು ನೆನಪು ಮಾಡಿಕೊಳ್ಳುವ ಸಂದರ್ಭ ಬಂದಂತೆ ಕಂಡು ಬರುತ್ತಿದೆ. ಸರ್ಕಾರಗಳು ಈಗ ಕೌಶಲ ವಿದ್ಯೆ, ತರಬೇತಿಗೆ ಹೆಚ್ಚು ಮನ್ನಣೆ ನೀಡುತ್ತಿವೆ. ಇಂತಹ ತರಬೇತಿ ಪಡೆದವರು ಸ್ವತಂತ್ರ ವಾಗಿ ತಮ್ಮ ಜೀವನ ಕಟ್ಟಿಕೊಳ್ಳಬಹುದು ಎಂಬುದು ಸರ್ಕಾರಗಳ ನಿರೀಕ್ಷೆಯಾಗಿದೆ.

ಬಹಳ ಹಿಂದಿನಿಂದಲೂ ಭಾರತೀಯ ಶಿಕ್ಷಣಕ್ಕೆ ಬಹಳ ಗೌರವ, ಘನತೆ ಇತ್ತು. ಭಾರತದ ಪುರಾತನ ಉನ್ನತ ಶಿಕ್ಷಣ ಕೇಂದ್ರಗಳಲ್ಲಿ ತಕ್ಷಶಿಲಾ ಮೊದಲ ಸ್ಥಾನದಲ್ಲಿದೆ. ಪ್ರಪಂಚದ ಹಳೆಯ ವಿಶ್ವವಿದ್ಯಾನಿಲಯ ಎಂದರೆ ನಳಂದ ವಿಶ್ವವಿದ್ಯಾಲಯ ಎಂದು ಹೇಳಲಾಗುತ್ತದೆ. ಆದರೆ ಬ್ರಿಟಿಷ್ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ನಮ್ಮ ಶಿಕ್ಷಣ ಪದ್ಧತಿ ಮಾಯವಾಗಿ ಪಾಶ್ಚಾತ್ಯ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂತು. ಆಗ ಬ್ರಿಟಿಷರ ಆಳ್ವಿಕೆ ಇದ್ದುದರಿಂದ ಈ ಶಿಕ್ಷಣ ವ್ಯವಸ್ಥೆಯನ್ನು ಭಾರತೀಯರು ಅನಿವಾರ್ಯವಾಗಿ ಒಪ್ಪಬೇಕಾಯಿತು. ಅವರು ದೇಶದ ಚುಕ್ಕಾಣಿ ಹಿಡಿಯಲು ನೀಡಿದ ಆದ್ಯತೆಗಳಲ್ಲಿ ನಮ್ಮ ವಿದ್ಯಾ ಪರಂಪರೆ ನಾಶವಾಗಬೇಕು ಎಂಬುದು ಮುಖ್ಯವಾಗಿತ್ತು. ಹಾಗೆಂದು ಅವರ ಶಿಕ್ಷಣ ಪದ್ಧತಿ ಸರಿ ಇಲ್ಲ ಎಂದಲ್ಲ ಆದರೆ ಅದಕ್ಕಿಂತ ಉನ್ನತವಾದ ಶಿಕ್ಷಣ ಪದ್ಧತಿ ಇಲ್ಲಿದ್ದಾಗ ಅದನ್ನು ಬದಿಗೆ ಸರಿಸಿದ ಅವರ ಕ್ರಮವನ್ನು ಈಗಲೂ ನಮ್ಮಲ್ಲಿ ಕೆಲವರು ಪುಷ್ಟೀಕರಿಸುವುದು ಸರಿ ಎನಿಸುವುದಿಲ್ಲ. ಈ ಹಿಂದೆ ಪಾಶ್ಚಾತ್ಯರೂ ಇಲ್ಲಿಗೆ ವಿದ್ಯಾಭ್ಯಾಸಕ್ಕೆ ಬರುತ್ತಿದ್ದರು ಎಂದರೆ ನಮ್ಮ ಶಿಕ್ಷಣ ವ್ಯವಸ್ಥೆ ಪುರಾತನವೂ, ಶ್ರೇಷ್ಠವೂ ಆಗಿತ್ತು ಎಂಬುದು ಸಾಬೀತಾಗುತ್ತದೆ. ದುರ್ಭಾಗ್ಯ ಎಂದರೆ ಭಾರತ ಸ್ವಾತಂತ್ರ್ಯ ಕಂಡುಕೊಂಡ ನಂತರವೂ ನಮ್ಮ ಶಿಕ್ಷಣ ಪದ್ಧತಿಯನ್ನು ಮರು ಸ್ಥಾಪಿಸಲಾಗದಿರುವುದು. ಹಾಗೆಂದು ನಮ್ಮ ಶಿಕ್ಷಣ ಪದ್ಧತಿ ಮೌಢ್ಯ ಹೇಳಿಕೊಡುತ್ತದೆ ಎನ್ನಲಾಗದು. ಎಲ್ಲವೂ ಬದಲಾದಂತೆ ನಮ್ಮ ಹಿಂದಿನ ಪದ್ಧತಿ ಮುಂದುವರೆದಿದ್ದರೆ ಕಾಲಕ್ಕೆ ತಕ್ಕಂತೆ ನಮ್ಮ ಶಿಕ್ಷಣ ಪದ್ಧತಿಯೂ ಬದಲಾಗುತ್ತಿತ್ತು ಎಂದು ಊಹಿಸಬಹುದು.

ನಮ್ಮ ಮಕ್ಕಳಿಗೆ ಯಾವ ರೀತಿಯ ಶಿಕ್ಷಣ ಬೇಕು ಎಂಬುದು ಎಂದಿಗೂ ಚರ್ಚಾ ವಿಷಯವಾಗಿದೆ. ಅವರಿಗೆ ಪುಸ್ತಕ ಜ್ಞಾನ ಸಾಕೆ? ಅಥವಾ ಅದಕ್ಕಿಂತ ಭಿನ್ನವಾದದ್ದು ಬೇಕೆ? ಎಂಬ ಪ್ರಶ್ನೆ ಈಗಲೂ ಮೂಡುತ್ತದೆ. ಇಂದಿನ ಪ್ರಪಂಚದಲ್ಲಿ ತಾಂತ್ರಿಕ ವಿಷಯಕ್ಕೆ ಆದ್ಯತೆ ಇದೆ. ನಮ್ಮ ಸಾಮಾನ್ಯ ಶಿಕ್ಷಣಕ್ಕಿಂತ ಉದ್ಯೋಗಕ್ಕೆ ಆದ್ಯತೆ ನೀಡುವ ಶಿಕ್ಷಣ ಬೇಕೆನಿಸುತ್ತದೆ. ಇಂದು ವಿಶ್ವವಿದ್ಯಾನಿಲಯಗಳಲ್ಲಿ ದೊರಕುವ ಸಾಮಾನ್ಯ ಶಿಕ್ಷಣಕ್ಕಿಂತ ತಾಂತ್ರಿಕ ಶಿಕ್ಷಣ ಪಡೆದವರು ದಾಪುಗಾಲು ಇಟ್ಟು ಮುಂದೆ ಹೋಗುತ್ತಿದ್ದಾರೆ. ಅಂದರೆ ಇಂದು ನಮಗೆ ತಾಂತ್ರಿಕ ಶಿಕ್ಷಣ ಅಗತ್ಯವೆನಿಸುತ್ತಿದೆ.

ಈ ಹಿಂದಿನ ನಮ್ಮ ಶಿಕ್ಷಣ ಪದ್ಧತಿಯೂ ಇದನ್ನೇ ಹೇಳುತ್ತಿತ್ತು. ಒಬ್ಬ ವಿದ್ಯಾರ್ಥಿ ಯಾವುದಾದರೂ ಕರಕುಶಲ ಕಲೆಯಲ್ಲಿ ಅಥವಾ ಜೀವನಕ್ಕೆ ಅಗತ್ಯವೆನಿಸುವ ತಾಂತ್ರಿಕ ಶಿಕ್ಷಣ ಪಡೆಯಬೇಕು. ಈ ಶಿಕ್ಷಣದಿಂದ ಅವನು ಸ್ವತಂತ್ರವಾಗಿ ಜೀವನ ನಡೆಸುವಂತೆ ಆಗಬೇಕು ಎಂಬುದಾಗಿತ್ತು. ಹಾಗಾಗಿ ಹಿಂದಿನ 64 ವಿದ್ಯೆಗಳಲ್ಲಿ ಇಂತಹ ಜೀವನಕ್ಕೆ ಅಗತ್ಯವೆನಿಸುವ ಶಿಕ್ಷಣ ನೀಡಲಾಗುತ್ತಿತ್ತು. ಅದು ಜೀವನಕ್ಕೆ ದಾರಿ ತೋರಿಸುತ್ತಿತ್ತು. ಅಂತಹ ಶಿಕ್ಷಣ ಪಡೆದು ನಿಷ್ಠೆಯಿಂದ ಜೀವನ ನಡೆಸಿದಲ್ಲಿ ಅವರಿಗೆ ಹಣವು ತಾನಾಗೇ ಹುಡುಕಿಕೊಂಡು ಬರುತ್ತಿತ್ತು. ಅಂತಹ ಶಿಕ್ಷಣ ವ್ಯವಸ್ಥೆ ಇಲ್ಲಿತ್ತು. ಆದರೆ ಪಾಶ್ಚಾತ್ಯದ ಪ್ರಭಾವ ನಮ್ಮನ್ನು ನಮ್ಮ ಶಿಕ್ಷಣ ವ್ಯವಸ್ಥೆಯಿಂದ ದೂರ ಸರಿಯುವಂತೆ ಮಾಡಿಬಿಟ್ಟಿತು. ಈಗ ಮತ್ತೆ ಅದನ್ನು ನೆನಪು ಮಾಡಿಕೊಳ್ಳುವ ಸಂದರ್ಭ ಬಂದಂತೆ ಕಂಡು ಬರುತ್ತಿದೆ. ಸರ್ಕಾರಗಳು ಈಗ ಕೌಶಲ ವಿದ್ಯೆ, ತರಬೇತಿಗೆ ಹೆಚ್ಚು ಮನ್ನಣೆ ನೀಡುತ್ತಿವೆ. ಇಂತಹ ತರಬೇತಿ ಪಡೆದವರು ಸ್ವತಂತ್ರವಾಗಿ ತಮ್ಮ ಜೀವನ ಕಟ್ಟಿಕೊಳ್ಳಬಹುದು ಎಂಬುದು ಸರ್ಕಾರಗಳ ನಿರೀಕ್ಷೆಯಾಗಿದೆ.

ನಮ್ಮ ಸ್ವತಂತ್ರ ಭಾರತದಲ್ಲಿ ಶಿಕ್ಷಣಕ್ಕೆ ಆದ್ಯತೆ ಎಂದು ಹೇಳಿಕೊಂಡು ಬರಲಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಪ್ರತಿ ವರ್ಷ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಇಂದು ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ತಮ್ಮದೇ ಆದ ವಿಧಾನಗಳನ್ನು ರೂಪಿಸಿವೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವೊಂದು ಜವಾಬ್ದಾರಿಯನ್ನು ಕೇಂದ್ರ ವಹಿಸಿಕೊಂಡರೆ, ಕೆಲವು ವಿಷಯಗಳು ರಾಜ್ಯ ಸರ್ಕಾರಗಳ ಜವಾಬ್ದಾರಿಗೆ ಬಿಡಲಾಗಿದೆ. ಭಾರತದ ಸಂವಿಧಾನವೂ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ. ಭಾರತದ ವಿಶ್ವವಿದ್ಯಾನಿಲಯಗಳು ಕೇಂದ್ರ ಹಾಗೂ ರಾಜ್ಯದ ಪರಿಧಿಗೆ ಬರುತ್ತದೆ. ಇಂದು ಉನ್ನತ ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣದ ಬಗ್ಗೆ ಸಕಾರಗಳು ಗಮನ ಹರಿಸುತ್ತಿವೆ. ಆದರೆ ಇಂದು ಶಿಕ್ಷಣ ಲಾಭದಾಯಕವಾಗಿರದೆ ಶಿಕ್ಷಣ ಸಂಸ್ಥೆಗಳಿಗೆ ಲಾಭ ತಂದುಕೊಡುತ್ತಿದೆ ಎಂಬುದು ಮೇಲು ನೋಟಕ್ಕೆ ಕಾಣುತ್ತದೆ. ಆದರೂ ಶಿಕ್ಷಣ ನಮ್ಮ ಹಕ್ಕು ಎಂದೂ ಹೇಳಲಾಗುತ್ತದೆ. ಬೆಂಗಳೂರು ಸೇರಿದಂತೆ ಹಲವು ನಗರಗಳಲ್ಲಿ ಜನರು ಉನ್ನತ ಶಿಕ್ಷಣವನ್ನಾದರೂ ಹೇಗಾದರೂ ನಿಭಾಯಿಸಬಹುದು, ಆದರೆ ಪ್ರಾಥಮಿಕ ಶಿಕ್ಷಣ ನಿಭಾಯಿಸುವುದು ಕಷ್ಟ ಎಂದು ಹೇಳುತ್ತಾರೆ. ಎಲ್‌ಕೆಜಿಯಿಂದ ಹಿಡಿದು ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ಲಕ್ಷಾತರ ಫೀಸನ್ನು ವಸೂಲು ಪಾವತಿಸಬೇಕಾಗುತ್ತಿದೆ. ಒಂದು ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಓದುವ ಮಕ್ಕಳಿದ್ದರೆ ಓದಿಸುವುದೇ ನಮ್ಮ ಜೀವನ ಎಂಬಂತಾಗಿಬಿಟ್ಟಿದೆ. ಇದಕ್ಕಾಗಿ ಗಂಡಹೆಂಡಿರು ಹಗಲಿರುಳು ದುಡಿಯಬೇಕಾಗಿದೆ ಎಂಬುದನ್ನು ನಾವು ಕೇಳುತ್ತೇವೆ.

ಇತ್ತೀಚೆಗೆ ಒಬ್ಬರು ಪ್ರಭಾವಿ ವ್ಯಕ್ತಿ ಒಂದು ವಿಷಯವನ್ನು ಪ್ರಸ್ತಾಪಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಒಮ್ಮೆ ಅವರ ಸ್ನೇಹಿತರೊಬ್ಬರು ಅವರಿಗೆ ಕರೆ ಮಾಡಿ ತಮ್ಮ ಮಗನ ಶಾಲೆಯ ಪ್ರವೇಶದ ಸಂಬಂಧ ಮಾತನಾಡಿದರು. ಅವರ ಮಗನಿಗೆ ಕೇಂದ್ರೀಯ ವಿದ್ಯಾಲಯದಲ್ಲಿ ಪ್ರವೇಶ ಬೇಕಾಗಿತ್ತು. ಇದಕ್ಕಾಗಿ ಅವರು ಕರೆ ಮಾಡಿದ್ದರು. ಅದಕ್ಕೆ ಉತ್ತರಿಸಿದ ಇವರು ಯಾವ ಶಾಲೆ ಎಂಬ ಬಗ್ಗೆ ವಿವರ ಕೇಳಿಕೊಂಡರು. ಅಲ್ಲದೆ ನಿಮಗೆ ಕೇಂದ್ರದ ಮಂತ್ರಿಯೊಬ್ಬರ ಪರಿಚಯವಿರುವುದರಿಂದ ಅವರಿಂದಲೂ ಒಂದು ಮಾತು ಹೇಳಿಸುವಂತೆ ಕರೆ ಮಾಡಿದ್ದವರು ಕೋರಿಕೊಂಡರು. ಇವರು ಅದಕ್ಕೆ ಆಯಿತು, ಪ್ರಯತ್ನಿಸೋಣ ಎಂದರು. ಅವರಿಗೆ ಪ್ರವೇಶ ಕೇಳುತ್ತಿರುವುದು ಬಹುಷಃ ಎಂಟು ಅಥವಾ ಹತ್ತನೇ ತರಗತಿಗೆ ಎಂದುಕೊಂಡಿದ್ದರು. ಮಾತು ಮುಗಿಸುವಾಗ 'ಆಯಿತು ನಿಮ್ಮ ಮಗನಿಗೆ ಯಾವ ತರಗತಿಗೆ ಪ್ರವೇಶ ಬೇಕಾಗಿದೆ?' ಎಂದು ಕೇಳಿದಾಗ ಅವರು ಒಂದನೇ ತರಗತಿಗೆ ಎಂದರಂತೆ. ಅವರು ಹೇಳುತ್ತಾರೆ, ಆ ರಾತ್ರಿ ನನಗೆ ನಿದ್ರೆಯೇ ಬರಲಿಲ್ಲ, ರಾತ್ರಿಯೆಲ್ಲಾ ತಲೆಯಲ್ಲಿ ಏನೇನೋ ಯೋಚನೆಗಳು ಬಂದವು. ಒಂದನೇ ತರಗತಿಯ ಪ್ರವೇಶಕ್ಕೆ ಕೇಂದ್ರದ ಮಂತ್ರಿಗಳ ಶಿಫಾರಸು ಬಯಸುವುದು ಎಂದರೆ ಎಂತಹ ಕಾಲ ಬಂದಿತು? ಇಷ್ಟೆಲ್ಲಾ ಕಷ್ಟಪಟ್ಟು ಪ್ರವೇಶ ಪಡೆದು ಶಿಕ್ಷಣ ಪೂರೈಸಿದರೆ ಅಂತಹವರಿಗೆ ನಿಶ್ಚಿತ ಭವಿಷ್ಯವಿದೆಯೇ? ಎಂದು ಯೋಚಿಸುವಂತೆ ಮಾಡಿತು ಎಂದಿದ್ದರು.

ಇದು ಮೇಲು ನೋಟಕ್ಕೆ ಹಾಸ್ಯ ಎನಿಸುವಂತೆ ಕಂಡುಬಂದರೂ ವಾಸ್ತವವಾಗಿದೆ. ಬೇಕಿದ್ದರೆ ಇಂಜಿನಿಯರಿಂಗ್ ಸೀಟು ಪಡೆಯಬಹುದು, ಆದರೆ ಒಂದನೇ ತರಗತಿಗೆ ಸೀಟು ಪಡೆಯುವುದು ಕಷ್ಟದ ಕೆಲಸ ಎಂಬಂತಾಗಿದೆ.

ಇಂದು ಜನರು ತಮ್ಮ ಮಕ್ಕಳನ್ನು ಸಾಮಾನ್ಯ ಶಿಕ್ಷಣಕ್ಕೆ ಸೇರಿಸುವ ಬದಲು ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಪದವಿ ಪಡೆಯುವುದು ಸೂಕ್ತ ಎಂದು, ಬಹುತೇಕ ಮಧ್ಯಮ ವರ್ಗದ ಜನರು ಬಯಸುತ್ತಾರೆ. ಅವರಿಗೆ ಯಾರೋ ಇಂಜಿನಿಯರ್‌ಗೆ ತಿಂಗಳಿಗೆ ಹತ್ತು ಲಕ್ಷ ಸಂಬಳ ಇದೆ, ಯಾರೋ ಒಬ್ಬ ಡಾಕ್ಟರ್ ತಿಂಗಳಿಗೆ ಇಪ್ಪತ್ತು ಲಕ್ಷ ಸಂಪಾದಿಸುತ್ತಾನೆ. ಹಾಗೆ ನಮ್ಮ ಮಕ್ಕಳು ಲಕ್ಷಾಂತರ ರೂಪಾಯಿ ಸಂಪಾದಿಸಬೇಕು, ಹಾಗಾಗಿ ಅವರು ಇಂಜಿನಿಯರ್ ಅಥವಾ ಡಾಕ್ಟರ್ ಆಗಬೇಕು ಎಂದು ಬಯಸುತ್ತಾರೆ. ಇದಕ್ಕೆ ತಕ್ಕಂತೆ ಇಂದು ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣ ನೀಡುವ ಕಾಲೇಜುಗಳು ನಮ್ಮಲ್ಲಿ ಹೇರಳವಾಗಿ ಕಂಡು ಬರುತ್ತದೆ. ಒಂದು ಮಾಹಿತಿಯ ಪ್ರಕಾರ ನಮ್ಮ ರಾಜ್ಯದಲ್ಲಿ 542 ಇಂಜಿನಿಯರಿಂಗ್ ಕಾಲೇಜುಗಳಿವೆ. ಈ ಪೈಕಿ 134 ಸರ್ಕಾರಿ ಕಾಲೇಜುಗಳು, ಉಳಿಕೆ ಖಾಸಗಿ ಕಾಲೇಜುಗಳು. ಈ ಕಾಲೇಜುಗಳಲ್ಲಿ ಪ್ರತಿ ವರ್ಷ ಸುಮಾರು ಅರವತ್ತು ಸಾವಿರ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿದೆ. ಹಾಗೆಯೇ ನಮ್ಮ ರಾಜ್ಯದಲ್ಲಿ 60 ಮೆಡಿಕಲ್ ಕಾಲೇಜುಗಳಿವೆ. ಅಲ್ಲಿ ಸುಮಾರು ಒಂಭತ್ತು ಸಾವಿರ ಸೀಟುಗಳು ಲಭ್ಯವಿದೆ. ಸರಿ, ನಮ್ಮಲ್ಲಿ ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳು ಹೆಚ್ಚಾಗಿರುವುದು ಜನರ ಬೇಡಿಕೆಗೆ ಅನುಸಾರವಾಗಿ ಎಂದುಕೊಳ್ಳಬಹುದು. ಆದರೆ ಪ್ರವೇಶ ಪಡೆದ ಶೇಕಡ 75 ರಷ್ಟು ವಿದ್ಯಾರ್ಥಿಗಳು ಪ್ರತಿ ವರ್ಷ ಪಾಸಾಗಿ ಹೊರಗೆ ಬಂದರೆ ಅವರಿಗೆ ಕೆಲಸ ನೀಡುವಷ್ಟು ಉದ್ಯೋಗಗಳು ಲಭ್ಯವಿದೆಯೇ? ಎಂದು ಗಮನಿಸಬೇಕಾಗುತ್ತದೆ. ಹತ್ತಾರು ವರ್ಷ ಕಷ್ಟಪಟ್ಟು ಓದಿದ ವಿದ್ಯಾರ್ಥಿಗಳಲ್ಲಿ ಎಷ್ಟು ಜನರಿಗೆ ಸಲೀಸಾಗಿ ಕೆಲಸ ಸಿಗುತ್ತಿದೆ? ಎಂಬುದನ್ನು ಗಮನಿಸಬೇಕು.

ಈ ಬಗ್ಗೆ ಸ್ವಲ್ಪ ವಯಸ್ಸಾದವರನ್ನು ಕೇಳಿದರೆ ನಮ್ಮ ಕಾಲದಲ್ಲಿ ಹೀಗಿರಲಿಲ್ಲ. ಮಕ್ಕಳನ್ನು ಕರೆದು ಕರೆದು ಶಾಲೆಗೆ ಸೇರಿಸಿಕೊಳ್ಳುತ್ತಿದ್ದರು. ಕನ್ನಡ ಮಾಧ್ಯಮದಲ್ಲಿ, ಅದೂ ಸಣ್ಣ ಶಾಲೆಯಲ್ಲಿ ಓದಿದ ನಾವು ದೊಡ್ಡ ಹುದ್ದೆಗೆ ಏರಿದ್ದೆವು. ಕನ್ನಡ ಮಾಧ್ಯಮದಲ್ಲಿ ಓದಿದವರು ಚಾರ್ಟರ್ಡ್ ಅಕೌಂಟೆಂಟ್ ಸಹಾ ಆಗಿದ್ದಾರೆ. ನಾವು ಆಗ ಓದಿದ್ದನ್ನು ಬಿಟ್ಟು ಈಗಿನ ಶಾಲೆಯಲ್ಲಿ ಏನು ಕಲಿಸುತ್ತಾರೆ? ಎಂದು ಕೇಳುತ್ತಾರೆ.

ಇಂದು ಇಂಜಿನಿಯರಿಂಗ್ ಕಲಿತ ವಿದ್ಯಾರ್ಥಿಗೆ ಎಲ್ಲೂ ಕೆಲಸ ಸಿಗಲಿಲ್ಲ ಎಂದಾದರೆ ಆತನು ಸ್ವತಂತ್ರವಾಗಿ ತನ್ನದೇ ಒಂದು ಉದ್ಯಮ ತೆರೆಯುವಷ್ಟು ಸಾಮರ್ಥ್ಯ ಎಷ್ಟು ಜನರಿಗೆ ಇದೆ? ಯಾರೋ ಹತ್ತಾರು ಲಕ್ಷ ಸಂಪಾದಿಸುತ್ತಾರೆ ಎಂದು ಇಂಜಿನಿಯರಿಂಗ್ ಓದಿ ಪಡೆದ ಸರ್ಟಿಫಿಕೇಟ್ ಇಂದು ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗಿದೆಯೇ? ತನ್ನೊಡನೆ ಓದಿದ ಒಂದಿಬ್ಬರಿಗೆ ದೊಡ್ಡ ಮೊತ್ತದ ಸಂಬಳದ ಕೆಲಸ ದೊರಕಿದ್ದರೂ ತನಗೆ ದೊರಕಲಿಲ್ಲವಲ್ಲ ಎಂದು ಮಕ್ಕಳು ಕೀಳರಿಮೆ ಬೆಳೆಸಿಕೊಳ್ಳುತ್ತಿರುವುದು ಕಂಡುಬರುತ್ತದೆ.

ಹಿಂದೆ ಶಾಲೆಗಳಲ್ಲಿ ಉಪಕಸುಬಿಗೆ ಸಂಬಂಧಿಸಿದ ಶಿಕ್ಷಣ ನೀಡಲಾಗುತ್ತಿತ್ತು. ಅದು ಮರಗೆಲಸ ಇರಬಹುದು, ಬೇಸಾಯ ಪದ್ಧತಿಯ ಬಗ್ಗೆ ಇರಬಹುದು, ನೂಲುವುದು, ನೇಯ್ಗೆ ಮಾಡುವುದು ಮೊದಲಾದವನ್ನು ಕಲಿಸಲಾಗುತ್ತಿತ್ತು, ಅದೂ ಪ್ರೌಢಶಾಲೆಯ ಹಂತದಲ್ಲಿ. ತನಗೆ ಮುಂದೆ ಎಲ್ಲೂ ಕೆಲಸ ಸಿಗದಿದ್ದರೆ ತಾನು ಶಾಲೆಯಲ್ಲಿ ಕಲಿತ ಇಂತಹ ಕೆಲಸದಿಂದ ಜೀವನ ಮಾಡಿಕೊಳ್ಳುತ್ತೇನೆ ಎಂಬ ಆತ್ಮ ವಿಶ್ವಾಸವಿರುತ್ತಿತ್ತು. ಆದರೆ ಇಂದು ಮಕ್ಕಳ ಕೈಯಲ್ಲಿ ಕೇವಲ ಪದವಿ ಸರ್ಟಿಫಿಕೇಟ್‌ಗಳಿವೆ, ಆದರೆ ಸ್ವಂತ ಯಾವುದೇ ಕೆಲಸ ಮಾಡಲು ಅವರಿಗೆ ತಿಳಿದಿಲ್ಲ. ಶಿಕ್ಷಣ ಎಂದರೆ ಕೇವಲ ಸರ್ಟಿಫಿಕೇಟ್ ಪಡೆಯುವುದಲ್ಲ ಅಲ್ಲದೇ ಸರ್ಟಿಫಿಕೇಟೇ ಶಿಕ್ಷಣವೂ ಅಲ್ಲ. ಜೀವನ ಮಾಡಬಲ್ಲೆ ಎಂಬ ಆತ್ಮವಿಶ್ವಾಸ ಮೂಡಿಸುವುದೇ ಶಿಕ್ಷಣ. ಈ ದಿಸೆಯಲ್ಲಿ ಆಲೋಚಿಸುವುದು ಸೂಕ್ತ ಎನಿಸುತ್ತದೆ.

ಮುಂಬೈಗೆ ಮುಖಭಂಗ: ಜಯದ ಓಟ ಮುಂದುವರೆಸಿದ ಆರ್‌ಸಿಬಿ



ಪುಣೆ, ಏ.9– ಅನುಜ್ ರಾವತ್ ಅವರ ಬಿರುಸಿನ ಅರ್ಧಶತಕದ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮುಂಬೈ ಇಂಡಿಯನ್ಸ್ ವಿರುದ್ಧ 7 ವಿಕೆಟ್‌ಗಳ ಜಯ ಸಾಧಿಸಿದೆ.

ಈ ಮೂಲಕ ಆರ್‌ಸಿಬಿ ಪ್ರಸಕ್ತ ಟೂರ್ನಿಯಲ್ಲಿ ಹ್ಯಾಟ್ರಿಕ್ ಜಯ ಸಾಧಿಸುವ ಮೂಲಕ ಅಂಕಪಟ್ಟಿಯಲ್ಲಿ 3ನೇ ಸ್ಥಾನಕ್ಕೇರಿದರೆ, ಅತ್ತ ಮುಂಬೈ ಸತತ 4ನೇ ಸೋಲು ಅನುಭವಿಸುವ ಮೂಲಕ ತೀವ್ರ ಮುಖಭಂಗ ಅನುಭವಿಸಿದೆ.

ಇಲ್ಲಿನ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಮತ್ತೊಂದು ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈಗೆ ನಾಯಕ ರೋಹಿತ್ ಶರ್ಮಾ ಹಾಗೂ ಇಶನ್ ಕಿಶನ್ ಮೊದಲ ವಿಕೆಟ್‌ಗೆ 50 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ ಈ ವೇಳೆ 26 ರನ್ ಗಳಿಸಿದ್ದ ರೋಹಿತ್ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ಮತ್ತೊಬ್ಬ ಆರಂಭಿಕ ಇಶನ್ ಕಿಶನ್ 26 ಹಾಗೂ ಡೇವಾಲ್ಡ್ ಬ್ರೇವಿಸ್ 8 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ತಿಲಕ್ ವರ್ಮಾ ಶೂನ್ಯಕ್ಕೆ ರನೌಟ್ ಆದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ, ಬಿರುಸಿನ ಹಾಗೂ ಜವಾಬ್ದಾರಿಯುತ ಆಟ ಪ್ರದರ್ಶಿಸಿದ ಸೂರ್ಯ ಕುಮಾರ್ ಯಾದವ್ 37 ಎಸೆತಗಳಲ್ಲಿ 5 ಬೌಂಡರಿ, 6 ಸಿಕ್ಸರ್ ಒಳಗೊಂಡ 68 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ಮುಂಬೈ ನಿಗದಿತ 20 ಓವರ್ ಗಳಲ್ಲಿ 6 ವಿಕೆಟ್ ನಷ್ಟಕ್ಕೆ 151 ರನ್ ಗಳಿಸಲಷ್ಟೇ ಶಕ್ತವಾಯಿತು. ಉಳಿದಂತೆ ಜಯದೇವ್ ಉನಾದ್ಕಟ್ 13, ರಮಣ್‌ದೇವ್ ಸಿಂಗ್ 6 ರನ್ ಗಳಿಸಿದರು. ಆರ್‌ಸಿಬಿ ಪರ ಹರ್ಷಲ್ ಪಟೇಲ್, ವಾನಿಂದು ಹಸರಂಗ ತಲಾ 2, ಆಕಾಶ್ ದೀಪ್ ಒಂದು ವಿಕೆಟ್ ಪಡೆದರು.

ಮುಂಬೈ ನೀಡಿದ 152 ರನ್‌ಗಳ ಗೆಲುವಿನ ಗುಡಿ ಬೆನ್ನತ್ತಿದ ಆರ್‌ಸಿಬಿ 18.3 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ ಗೆಲುವಿನ ದಡ ಸೇರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಫಾಫ್ ಡುಪ್ಲೆಸಿಸ್ ಕೇವಲ 16 ರನ್ ಗಳಿಸಿ ನಿರ್ಗಮಿಸಿದರೆ, ಮತ್ತೊಂದೆಡೆ ಮುಂಬೈ ಬೌಲರ್‌ಗಳನ್ನು ಬೆಂಡೆತ್ತಿದ ಅನುಜ್ ರಾವತ್ 47 ಎಸೆತಗಳಲ್ಲಿ 2 ಬೌಂಡರಿ, 6 ಸಿಕ್ಸರ್ ಒಳಗೊಂಡ 66 ರನ್ ಗಳಿಸಿ ರನೌಟ್ ಬಲೆಗೆ ಬಿದ್ದರು. ನಂತರ ಬಂದ ವಿರಾಟ್ ಕೊಹ್ಲಿ ಸಹ ಬಿರುಸಿನ ಬ್ಯಾಟಿಂಗ್ ನಡೆಸಿದರು. ಅವರು 5 ಬೌಂಡರಿ ಒಳಗೊಂಡ 48 ರನ್ ಗಳಿಸಿ ಔಟಾಗುವ ಮೂಲಕ 2 ರನ್‌ನಿಂದ ಅರ್ಧಶತಕ ವಂಚಿತರಾದರು. ಉಳಿದಂತೆ ಗ್ಲೆನ್ ಮ್ಯಾಕ್ಸ್‌ವೆಲ್ 8, ದಿನೇಶ್ ಕಾರ್ತಿಕ್ 7 ರನ್ ಗಳಿಸಿದರು. ಮುಂಬೈ ಪರ ಜಯದೇವ್ ಉನಾದ್ಕಟ್, ಡೇವಾಲ್ಡ್ ಬ್ರೇವಿಸ್ ತಲಾ ಒಂದೊಂದು ವಿಕೆಟ್ ಪಡೆದರು. ಅನುಜ್ ರಾವತ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಐಪಿಎಲ್: ಮತ್ತೆ ಮುಗ್ಗರಿಸಿದ ಚೆನ್ನೈ, ಎಸ್‌ಆರ್‌ಹೆಚ್‌ಗೆ ಮೊದಲ ಜಯ



ಮುಂಬೈ, ಏ.9– ಅಭಿಷೇಕ್ ಶರ್ಮಾ ಅವರ ಅರ್ಧಶತಕ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್, ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಮೂಲಕ ಹೈದರಾಬಾದ್ ಐಪಿಎಲ್ 15ನೇ ಆವೃತ್ತಿಯಲ್ಲಿ ಮೊದಲ ಜಯ ದಾಖಲಿಸಿದರೆ, ಮತ್ತೊಂದೆಡೆ ಟೂರ್ನಿಯಲ್ಲಿ ಆಡಿದ 4 ಪಂದ್ಯಗಳಲ್ಲೂ ಸೋಲು ಅನುಭವಿಸುವ ಮೂಲಕ ಹಾಲಿ ಚಾಂಪಿಯನ್ ಸಿಎಸ್‌ಕೆ ತೀವ್ರ ಮುಖಭಂಗಕ್ಕೊಳಗಾಗಿದೆ.

ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಮೊದಲ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ತಂಡದ ಮೊತ್ತ 36 ರನ್ ಆಗುವಷ್ಟರಲ್ಲಿ 2 ವಿಕೆಟ್ ಕಳೆದುಕೊಂಡಿತು. ಈ ವೇಳೆ 3ನೇ ಜೊತೆಯಾದ ಮೊಯಿನ್ ಅಲಿ ಹಾಗೂ ಅಂಬಟಿ ರಾಯುಡು 62 ರನ್ ಜೊತೆಯಾಟ ಆಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ 27 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ರಾಯುಡು ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ 2 ಸಿಕ್ಸರ್, 3 ಬೌಂಡರಿ ಒಳಗೊಂಡ 48 ರನ್ ಗಳಿಸಿ ಮೊಯಿನ್ ನಿರ್ಗಮಿಸಿದರು. ನಂತರ ಬಂದ ನಾಯಕ ರವೀಂದ್ರ ಜಡೇಜಾ ಬಿರುಸಿನ 23 ರನ್ ಗಳಿಸಿದರು. ಅಂತಿಮವಾಗಿ ಚೆನ್ನೈ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 154 ರನ್ ಗಳಿಸಿತು. ಉಳಿದಂತೆ ರಾಬಿನ್ ಉತ್ತಪ್ಪ 15, ಋತುರಾಜ್ ಗಾಯಕ್ವಾಡ್ 16 ರನ್ ಗಳಿಸಿದರು. ಎಸ್‌ಆರ್‌ಹೆಚ್ ಪರ ವಾಷಿಂಗ್‌ಟನ್ ಸುಂದರ್, ಟಿ.ನಟರಾಜನ್‌ಗೆ ತಲಾ 2, ಮಾಕ್ರಂ, ಮಾರ್ಕೋ ಜಾನ್ಸನ್ ಹಾಗೂ ಭುವನೇಶ್ವರ್ ಕುಮಾರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

155 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ 17.4 ಓವರ್‌ಗಳಲ್ಲಿ ಇನ್ನೂ 14 ಎಸೆತಗಳು ಬಾಕಿ ಇರುವಾಗಲೇ 2 ವಿಕೆಟ್ ನಷ್ಟಕ್ಕೆ ಗೆಲುವಿನ ದಡ ಸೇರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಕೇನ್ ವಿಲಿಯಮ್ಸನ್, ಅಭಿಷೇಕ್ ಶರ್ಮಾ ಮೊದಲ ವಿಕೆಟ್‌ಗೆ 89 ರನ್‌ಗಳ ಕೊಡುಗೆ ನೀಡಿದರು. ಆದರೆ 32 ರನ್ ಗಳಿಸಿದ್ದ ಕೇನ್ ವಿಲಿಯಮ್ಸನ್ ವಿಕೆಟ್ ಒಪ್ಪಿಸಿದರು. ಪಂದ್ಯದಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶನ ನೀಡಿದ ಅಭಿಷೇಕ್ ಶರ್ಮಾ 50 ಎಸೆತಗಳಲ್ಲಿ 3 ಸಿಕ್ಸರ್, 5 ಬೌಂಡರಿ ಒಳಗೊಂಡ 75 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ರಾಹುಲ್ ತ್ರಿಪಾಠಿ 39 ರನ್ ಹಾಗೂ ನಿಕೋಲಸ್ ಪೂರನ್ 5 ರನ್ ಗಳಿಸಿ ಗೆಲುವಿನ ಔಪಚಾರಿಕತೆ ಮುಗಿಸಿದರು. ಚೆನ್ನೈ ಪರ ಬ್ರಾವೋ, ಮುಖೇಶ್ ಚೌಧರಿ ಒಂದೊಂದು ವಿಕೆಟ್ ಪಡೆದರು. ಅಭಿಷೇಕ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಇಂದಿನ ಪಂದ್ಯಗಳು (ಏ.10)

ಕೋಲ್ಕತ್ತಾ VS ಡೆಲ್ಲಿ

(ಮಧ್ಯಾಹ್ನ 3.30ಕ್ಕೆ, ಸ್ಥಳ: ಬ್ರಬೋರ್ನ್ ಕ್ರೀಡಾಂಗಣ)

ರಾಜಸ್ಥಾನ್ VS ಲಕ್ನೋ

(ರಾತ್ರಿ 7.30ಕ್ಕೆ, ಸ್ಥಳ: ವಾಂಖೇಡೆ ಕ್ರೀಡಾಂಗಣ)

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

12ರಿಂದ 14 ವರ್ಷದ ಶೇ.62ರಷ್ಟು ಮಕ್ಕಳಿಗೆ ಕೊರೊನಾ ಲಸಿಕೆ



ಮೈಸೂರು, ಏ.9(ಆರ್‌ಕೆ)– ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ 12ರಿಂದ 14 ವರ್ಷದ ಶೇ. 61.89ರಷ್ಟು ಮಕ್ಕಳಿಗೆ ಕೊರೊನಾ ಲಸಿಕೆ ನೀಡಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್ ತಿಳಿಸಿದ್ದಾರೆ.

ಮಾ.16ರಿಂದ 12–14 ವರ್ಷ ವಯೋಮಿತಿಯ ಮಕ್ಕಳಿಗೆ ಕಾರ್ಬೋವ್ಯಾಕ್ಸ್ ಲಸಿಕೆ ನೀಡುವ ಪ್ರಕ್ರಿಯೆ ಆರಂಭವಾಗಿದ್ದು, 28 ದಿನಗಳ ನಂತರ ಮಕ್ಕಳಿಗೆ 2ನೇ ಡೋಸ್ ಲಸಿಕೆ ನೀಡಲಾಗುವುದು ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಒಟ್ಟು 92,907 ಮಂದಿ 12ರಿಂದ 14 ವರ್ಷದ ಮಕ್ಕಳು ಲಸಿಕೆ ಪಡೆಯಲು ಅರ್ಹರಾಗಿದ್ದಾರೆಂದು ಗುರುತಿಸಲಾಗಿತ್ತು. ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಶಾಲೆಗಳಿಗೆ ತೆರಳಿ ಮಕ್ಕಳಿಗೆ ಲಸಿಕೆ ನೀಡುತ್ತಿದ್ದಾರೆ. ಮಕ್ಕಳು, ಪೋಷಕರು ಹಾಗೂ ಶಾಲಾ ಶಿಕ್ಷಕರು ಲಸಿಕೆ ಹಾಕುವ ಪ್ರಕ್ರಿಯೆಗೆ ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ ಎಂದು ನುಡಿದರು.

ಒಟ್ಟು 92,907 ಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಿದ್ದು, ಏ.8ರವರೆಗೆ 57.498 ಮಕ್ಕಳಿಗೆ ಕೊರೊನಾ ವಿರುದ್ಧ ಲಸಿಕೆ ನೀಡಲಾಗಿದೆ. ಒಂದು ವಾರದೊಳಗಾಗಿ ಶೇ. 100ರಷ್ಟು ಸಾಧನೆ ಮಾಡುವ ವಿಶ್ವಾಸವಿದೆ. 15ರಿಂದ 18 ವರ್ಷದೊಳಗಿನ 1,47,279 ಮಂದಿ ಫಲಾನುಭವಿಗಳಿದ್ದರು, ಆ ಪೈಕಿ 1,36,412 ಮಂದಿ ಲಸಿಕೆ ಪಡೆದಿದ್ದಾರೆ. ಆ ಮೂಲಕ ನಾವು ಮೈಸೂರು ಜಿಲ್ಲೆಯಲ್ಲಿ ಶೇ.92.62ರಷ್ಟು ಸಾಧನೆ ಮಾಡಿದ್ದೇವೆ ಎಂದರು.

ಈ ವಯೋಮಾನದ 1,07,724 ಮಕ್ಕಳಿಗೆ (ಶೇ.73.14) 2ನೇ ಡೋಸ್ ಲಸಿಕೆ ನೀಡಲಾಗಿದೆ. ಈವರೆಗೆ ಮೈಸೂರು ಜಿಲ್ಲೆಯಲ್ಲಿ ಒಟ್ಟು 26.59,806 ಮಂದಿಗೆ ಮೊದಲ ಡೋಸ್ ನೀಡಿ ಶೇ.99.31 ಗುರಿ ಸಾಧಿಸಿದ್ದರೆ, 25,00,233 ಮಂದಿಗೆ 2ನೇ ಡೋಸ್ ನೀಡಿ ಶೇ.96.71ರಷ್ಟು ಸಾಧನೆ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ. 2021ರಿಂದೀಚೆಗೆ ಮೈಸೂರು ಜಿಲ್ಲೆಯಲ್ಲಿ ಒಟ್ಟು 52,33,796 ಲಸಿಕೆಯನ್ನು (ಮೊದಲು, ಎರಡನೇ ಹಾಗೂ ಬೂಸ್ಟರ್ ಡೋಸ್ ಸೇರಿ) ಫಲಾನುಭವಿಗಳಿಗೆ ಹಾಕಲಾಗಿದ್ದು, ಉತ್ತಮ ಸಾಧನೆ ಮಾಡಲಾಗಿದೆ. ನಾಗರಿಕರು, ಜನಪ್ರತಿನಿಧಿಗಳ ಸಹಕಾರದಿಂದ ಅದು ಸಾಧ್ಯವಾಗಿದೆ ಎಂದು ಡಿಹೆಚ್‌ಓ ಡಾ.ಪ್ರಸಾದ್ ತಿಳಿಸಿದರು.

ಮಾನಸಗಂಗೋತ್ರಿಯ ಜಯಲಕ್ಷ್ಮೀ ವಿಲಾಸ ಮಹಲಿಗೆ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರ ಸ್ಥಳಾಂತರಕ್ಕೆ ಚಿಂತನೆ

ಅಧಿಕಾರಿಗಳೊಂದಿಗೆ ಸಂಸದ ಪ್ರತಾಪ್ ಸಿಂಹ, ಶಾಸಕ ನಾಗೇಂದ್ರ ಸಮಾಲೋಚನೆ, ಪಾರಂಪರಿಕ ಕಟ್ಟಡ ಪರಿಶೀಲನೆ

ಮೈಸೂರು, ಏ.9(ಆರ್‌ಕೆ)– ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ಜಯಲಕ್ಷ್ಮೀ ವಿಲಾಸ ಮಹಲು (ಮ್ಯಾನ್ಷನ್) ಪಾರಂಪರಿಕ ಕಟ್ಟಡಕ್ಕೆ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರ (**Centre of Exellence For Studies in Classical Kannada**) ಸ್ಥಳಾಂತರ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಈ ಕುರಿತಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್‌ಕುಮಾರ್ ಅವರು ಏ.13ರಂದು ಮೈಸೂರಿಗೆ ಆಗಮಿಸಲಿದ್ದು, ಪರಿಶೀಲಿಸಿ ಸ್ಥಳಾಂತರದ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್ ಸಿಂಹ ಶನಿವಾರ ಶಾಸಕ ನಾಗೇಂದ್ರ ಅವರೊಂದಿಗೆ ಜಯಲಕ್ಷ್ಮೀ ವಿಲಾಸ ಮ್ಯಾನ್ಷನ್‌ಗೆ ಭೇಟಿ ನೀಡಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ಪರಿಶೀಲಿಸಿದ ನಂತರ ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥಾನ (CIIL)ದ ನಿರ್ದೇಶಕ ಡಾ.ಶೈಲೇಂದ್ರ ಮೋಹನ, ಶಾಸಕ ಎಲ್. ನಾಗೇಂದ್ರ, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಆರ್.ಶಿವಪ್ಪ, ಕುಲಪತಿಗಳ ವಿಶೇಷ ಕರ್ತವ್ಯಾಧಿಕಾರಿ ಡಾ. ಹೆಚ್.ಕೆ.ಚೇತನ, ಡೆಕ್ಕನ್ ಹೆರಿಟೇಜ್ ಸಂಸ್ಥೆಯ ಶರತ್‌ಚಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪುಟ್ಟಪ್ಪರೊಂದಿಗೆ ಪೂರ್ವಭಾವಿ ಸಭೆ ನಡೆಸಿದರು.



ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಪ್ರತಾಪ್ ಸಿಂಹ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದ ನಂತರ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರ ಸ್ಥಾಪನೆಗಾಗಿ ಈ ಹಿಂದೆಯೇ ಹುಣಸೂರು ರಸ್ತೆಯ ಪ್ರೀಮಿಯರ್ ಸ್ಟುಡಿಯೋ ಎದುರು ಹಳೇ ತಹಸೀಲ್ದಾರ್ ಕಚೇರಿ ಆವರಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಜಾಗ ನೀಡಿತ್ತಾದರೂ ಸಿಐಐಎಲ್‌ನಿಂದ ಯಾವುದೇ ಪ್ರಕ್ರಿಯೆ ನಡೆಯಲಿಲ್ಲ ಎಂದರು.

ಈ ಮಧ್ಯೆ ಸರ್ಕಾರಗಳು ಬದಲಾದವು, ಕೊರೊನಾ ಪರಿಸ್ಥಿತಿ ಎದುರಾದ ಕಾರಣ ಕನ್ನಡ ಅಭಿವೃದ್ಧಿ ಕಾರ್ಯಗಳು ನಡೆದಿರಲಿಲ್ಲ. ಇದೀಗ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರ (**CESCK**)ವನ್ನು ಮಾನಸ ಗಂಗೋತ್ರಿಯ ಜಯಲಕ್ಷ್ಮೀ ವಿಲಾಸ ಮ್ಯಾನ್ಷನ್‌ಗೆ ಸ್ಥಳಾಂತರಿಸಲು ಉದ್ದೇಶಿಸಲಾಗಿದೆ ಎಂದ ಅವರು, ಈ ಕುರಿತು ಸಚಿವ ಸುನೀಲ್‌ಕುಮಾರ್ ಅವರು ಏ.13ರಂದು ಮೈಸೂರಿಗೆ ಆಗಮಿಸಿ ಪರಿಶೀಲಿಸಿದ ನಂತರ ಸ್ಥಳಾಂತರದ ಬಗ್ಗೆ ನಿರ್ಧಾರ ಪ್ರಕಟಿಸುವರು ಎಂದರು.

ಸ್ಥಳಾಂತರ ಕುರಿತಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಶಿಥಿಲಗೊಂಡಿರುವ ಜಯಲಕ್ಷ್ಮೀ ವಿಲಾಸ ಮ್ಯಾನ್ಷನ್ ಅರಮನೆ ಕಟ್ಟಡವನ್ನು ನವೀಕರಿಸಲು ಅನುದಾನ ಕೋರಿ ಕೇಂದ್ರ ಸಚಿವ ಧರ್ಮೇಂದ್ರ ಪ್ರದಾನ್ ಅವರನ್ನು ನವದೆಹಲಿಯಲ್ಲಿ ಭೇಟಿ ಮಾಡಿ ಮನವಿ ಮಾಡಿದ್ದೆ. ಭಾಷಾ ಅಭಿವೃದ್ಧಿ ಚಟುವಟಿಕೆಗಳಿಗೆ ನಾವು ಅನುದಾನ ನೀಡುತ್ತೇವೆ. ಕೇಂದ್ರಕ್ಕೆ ಅಗತ್ಯವಿರುವ ಕಟ್ಟಡಕ್ಕೆ ರಾಜ್ಯ ಸರ್ಕಾರದಿಂದ ನೆರವು ಪಡೆದುಕೊಳ್ಳಿ ಎಂದು ಸಲಹೆ ನೀಡಿದರು. ಆ ವೇಳೆ ಸಚಿವರ ಬಳಿ ಬಂದಿದ್ದ ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕೇಳಿದಾಗ ಅನುದಾನ ನೀಡುವ ಭರವಸೆ ನೀಡಿದರು ಎಂದು ಪ್ರತಾಪ್ ಸಿಂಹ ತಿಳಿಸಿದರು.

ಅಲ್ಲದೇ ಶಕ್ತಿಧಾಮಕ್ಕೆ ಬಂದಿದ್ದಾಗಲೂ ತಾವು ಚರ್ಚಿಸಿದಾಗ ಮುಖ್ಯಮಂತ್ರಿಗಳು ಅನುದಾನ ನೀಡುವುದಾಗಿ ಪುನರುಚ್ಚರಿಸಿದರು. ಈಗಾಗಲೇ ಜಯಲಕ್ಷ್ಮೀ ವಿಲಾಸ ಮ್ಯಾನ್ಷನ್ ಕಟ್ಟಡವನ್ನು ನವೀಕರಿಸಲು ಡಿಪಿಆರ್(ವಿಸ್ತೃತ ಯೋಜನಾ ವರದಿ) ಸಿದ್ಧಪಡಿಸಿ 25 ಕೋಟಿ ರೂ. ಅಂದಾಜು ವೆಚ್ಚದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರಕ್ಕೆ ಜಯಲಕ್ಷ್ಮೀ ವಿಲಾಸ ಮ್ಯಾನ್ಷನ್ ಕಟ್ಟಡ ಸೂಕ್ತ ಎನಿಸಿದ್ದು, ಆ ಪಾರಂಪರಿಕ ಕಟ್ಟಡವನ್ನು ನವೀಕರಿಸಿ ಸಂರಕ್ಷಿಸುವ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಸಚಿವರೂ ಆಸಕ್ತಿ ತೋರಿಸಿದ್ದಾರೆ. ಅದು ಸಾಕಾರಗೊಂಡಲ್ಲಿ ಶಾಸ್ತ್ರೀಯ ಕನ್ನಡದ ಸ್ವಾಯತ್ತತೆ ಮತ್ತು ಅಭಿವೃದ್ಧಿಗೆ ಪೂರಕವಾಗುವುದಲ್ಲದೇ ಅದೊಂದು ಪ್ರವಾಸಿ ಕೇಂದ್ರವಾಗಲಿದೆ ಎಂದು ಪ್ರತಾಪ್‌ಸಿಂಹ ತಿಳಿಸಿದರು.

ಚುನಾವಣೆ ಗೆಲ್ಲಲು ಹಿಜಾಬ್, ಹಲಾಲ್ ಸಾಲದು, ಉತ್ತಮ ಆಡಳಿತವೂ ಬೇಕು

ಸಿಎಂ ಬೊಮ್ಮಾಯಿಗೆ ಕಿವಿ ಹಿಂಡಿದ ಹೈಕಮಾಂಡ್



ನವದೆಹಲಿ,ಏ.9–ಮುಂಬರುವ ವಿಧಾನಸಭೆ ಚುನಾವಣೆ ಗೆಲ್ಲಲು ಹಿಜಾಬ್, ಹಲಾಲ್‌ನಂತಹ ಧಾರ್ಮಿಕ ವಿಚಾರಗಳು ಮಾತ್ರ ಸಾಲದು. ಉತ್ತಮ ಆಡಳಿತ ಮತ್ತು ಮೂಲ ಸೌಕರ್ಯಗಳ ಅಭಿವೃದ್ಧಿಯೂ ಮುಖ್ಯ ಎಂದು ಸಿಎಂ ಬಸವರಾಜ ಬೊಮ್ಮಾಯಿ ಅವರಿಗೆ ಬಿಜೆಪಿ ಹೈಕಮಾಂಡ್ ಹೇಳಿದೆ.

ಸಚಿವ ಸಂಪುಟ ವಿಸ್ತರಣೆ ಮತ್ತು ಪುನಾರಚನೆ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಬೊಮ್ಮಾಯಿ ಅವರು 2 ದಿನಗಳ ಕಾಲ ದೆಹಲಿಗೆ ತೆರಳಿದ್ದರು. ಈ ವೇಳೆ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸೇರಿದಂತೆ ಪಕ್ಷದ ಹಲವು ನಾಯಕರನ್ನು ಭೇಟಿ ಮಾಡಿದ್ದಾರೆ. ಈ ಭೇಟಿ ವೇಳೆ ನಡ್ಡಾ ಅವರು ರಾಜ್ಯದ ಹಲವು ಬೆಳವಣಿಗೆಗಳ ಬಗ್ಗೆ ಅಸಮಾಧಾನ ಹೊರ ಹಾಕಿದ್ದಾರೆ ಎನ್ನಲಾಗಿದೆ.

ಆಡಳಿತದ ಮೇಲೆ ಗಮನ ಹರಿಸಬೇಕು. ರೈತರ ಮನ ಗೆಲ್ಲಲು ನೀರಾವರಿ ಯೋಜನೆಗಳನ್ನು ಹೆಚ್ಚು ಕೇಂದ್ರಿಕರಿಸಬೇಕು. ಜನಪ್ರಿಯ ಆಡಳಿತ ನೀಡಲು ಪ್ರಯತ್ನಿಸಬೇಕು. ಅದನ್ನು ಬಿಟ್ಟು ಹಲಾಲ್–ಹಿಜಾಬ್ ಎಂದು ಸಮುದಾಯವೊಂದನ್ನು ಟಾರ್ಗೆಟ್ ಮಾಡಿ ಚುನಾವಣೆ ಗೆಲ್ಲುವ ಕನಸು ಉತ್ತಮವಲ್ಲ ಎಂದು ನಡ್ಡಾ ಅವರು, ಬೊಮ್ಮಾಯಿ ಅವರಿಗೆ ಹೇಳಿದ್ದಾರೆ.

ಹಿಜಾಬ್, ಹಲಾಲ್ ಒಂದು ಸಮುದಾಯದ ಮತಗಳನ್ನು ಕ್ರೋಢೀಕರಿಸಬಹುದು. ಆದರೆ ಇದು ಗೆಲುವಿಗೆ ಸಾಲದು, ಮತ್ತೆ ಅಧಿಕಾರಕ್ಕೆ ಬರಲು ಉತ್ತಮ ಆಡಳಿತವೂ ಬಹಳ ಮುಖ್ಯ ಎಂದು ಹೇಳಿದ್ದಾರೆ. ಇದೇ ವೇಳೆ ಬೊಮ್ಮಾಯಿ ಅವರು ರಾಜ್ಯದ ಹಲವು ನಾಯಕರ ವಿರುದ್ಧ ದೂರು ಕೂಡಾ ನೀಡಿದ್ದಾರೆ. ಕೆಲವು ನಾಯಕರ ಹೇಳಿಕೆ ಪಕ್ಷಕ್ಕೆ ಮುಜುಗರ ಉಂಟು ಮಾಡಿದೆ ಎಂದು ಬೇಸರ ಹೊರಹಾಕಿದ್ದಾರೆ.

ಮುಖ್ಯವಾಗಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರ ಹಲಾಲ್ ಮಾಂಸವನ್ನು ಹಿಂದೂಗಳು ಖರೀದಿಸಬಾರದು. ಹಲಾಲ್ ಆರ್ಥಿಕ ಜಿಹಾದ್ ಹೇಳಿಕೆ ಪ್ರಸ್ತಾಪವಾಗಿದೆ ಎನ್ನಲಾಗಿದ್ದು, ಈ ಹೇಳಿಕೆಗೆ ಜೆ.ಪಿ.ನಡ್ಡಾ ಕೂಡಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ವರದಿ ಮಾಡಲಾಗಿದೆ. ಚುನಾವಣಾ ದೃಷ್ಟಿಯಿಂದ ಸರ್ಕಾರದ ಮೇಲೆ ಉತ್ತಮ ಅಭಿವೃದ್ಧಿ ಮೂಡಿಸಲು ಸರಣಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಉದ್ಘಾಟನೆ, ಭೂಮಿ ಪೂಜೆಗೆ ಪ್ರಧಾನಿ ಮೋದಿ ರಾಜ್ಯಕ್ಕೆ ಬರಲಿದ್ದಾರೆ. ಉತ್ತರ ಕರ್ನಾಟಕದಲ್ಲಿ ಕಾರ್ಯಕರ್ತರು ಪ್ರಮುಖ ನಾಯಕರು ಅಸಮಾಧಾನ ಹೊರ ಹಾಕುತ್ತಿದ್ದು, ಆ ಬಗ್ಗೆ ಗಮನ ಹರಿಸಬೇಕು ಎಂದು ನಡ್ಡಾ ಸೂಚಿಸಿದ್ದಾರೆ.

ಸಿಎಂಗೆ 30 ದಿನಗಳ ಗಡುವು ನೀಡಿದ ಲಾರಿ ಮಾಲೀಕರು


ಬೆಂಗಳೂರು, ಏ. 9– ಡೀಸೆಲ್ ದರ ಇಳಿಕೆ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಲಾರಿ ಮಾಲೀಕರ ಮತ್ತು ಏಜೆಂಟರ ಸಂಘದ ಫೆಡರೇಷನ್ ರಾಜ್ಯ ಸರ್ಕಾರಕ್ಕೆ 30 ದಿನಗಳ ಗಡುವು ನೀಡಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಮುಖಂಡರು, ಕೇಂದ್ರ ಸರ್ಕಾರ ಇದೀಗ 15 ವರ್ಷದ ಹಳೆಯ ವಾಣಿಜ್ಯ ವಾಹನಗಳು ಸಂಚರಿಸದಂತೆ ನಿಷೇಧ ಹೇರಲು ನಿರ್ಧರಿಸಿದ್ದು, ವಾಹನಗಳನ್ನು ಸ್ಕ್ರಾಪಿಂಗ್ ಕುರಿತು ಮರು ನೋಂದಣಿ ಹಾಗೂ ವಾಹನ ದೃಢೀಕರಣ ಶುಲ್ಕಗಳನ್ನು ಹೆಚ್ಚಿಸಿ ಆದೇಶಿಸಿದೆ. ಮಿಲ್‌ಗಳಿಗೆ ಸಾಗಣೆ ಮಾಡುವ ಕಬ್ಬು, ಭತ್ತ, ಜೋಳ, ಹತ್ತಿ ಸಾಗಿಸುವ ರೈತರಿಗೂ ಇದು ತೊಂದರೆ ಉಂಟುಮಾಡಲಿದೆ ಎಂದರು.

ಕಳೆದ 15 ದಿನಗಳಿಂದ ಇಂಧನ ದರ ಕ್ಷಣ ಕ್ಷಣಕ್ಕೂ ಏರಿಕೆಯಾಗುತ್ತಲೇ ಇದೆ. ಇಡೀ ಸಾಗಣೆ ವ್ಯವಸ್ಥೆಯೇ ಅಸ್ತವ್ಯಸ್ತವಾಗಿದ್ದು, ಸಾಗಣೆ ಮಾಡಿಯೂ ಲಾರಿ ಮಾಲೀಕನಿಗೆ ಏನೂ ಉಳಿಯುವುದಿಲ್ಲ. ನೋಟ್ ಬ್ಯಾನ್, ಜಿ.ಎಸ್.ಟಿ. ಕೊರೊನಾ ಸೋಂಕು ಇವುಗಳು ಸಾಗಣೆ ಉದ್ಯಮಕ್ಕೆ ಹಾನಿ ಉಂಟು ಮಾಡಿದೆ. ಹೀಗಾಗಿ ಡೀಸೆಲ್ ದರ ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಅಲ್ಲದೆ, ರಾಜ್ಯ ಹೆದ್ದಾರಿಯಲ್ಲಿ ಚಿತ್ರದುರ್ಗ ಹಾಗೂ ಬಿಜಾಪುರ, ಕೊಪ್ಪಳ, ಹಾವೇರಿ ಜಿಲ್ಲೆಗಳಿಗೆ ಪ್ರವೇಶಿಸುವಾಗ ತಪಾಸಣಾ ನೆಪದಲ್ಲಿ ವಾಹನಗಳನ್ನು ತಡೆದು ಗಡಿಭಾಗದಲ್ಲಿ ಅಧಿಕಾರಿಗಳು ತೀವ್ರ ಕಿರುಕುಳ ನೀಡುತ್ತಿದ್ದಾರೆ. ಗಡಿ ತಪಾಸಣೆ ನಿಲ್ಲಿಸುವಂತೆ ಮನವಿ ಮಾಡಿದರು

ಭಾಷೆಯ ಮೂಲಕವೂ ಜನರ ಒಡೆಯುವ ಯತ್ನ

ಅಮಿತ್ ಶಾ ವಿರುದ್ಧ ಹೆಚ್‌ಡಿಕೆ ಗರಂ



ಬೆಂಗಳೂರು, ಏ.9 (ಕೆಎಂಶಿ)–ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡು ಕಳೆದ 75 ವರ್ಷಗಳಿಂದ ಒಂದೇ ತಾಯಿಯ ಮಕ್ಕಳಂತೆ ಇರುವ ರಾಜ್ಯಗಳ ನಡುವೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಹುಳಿ ಹಿಂಡಿ, ಹಿಂದಿ ಹೇರಿಕೆ ಬಗ್ಗೆ ಹೇಳಿಕೆ ನೀಡುತ್ತಿರುವುದು ಆಘಾತಕಾರಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಕಿಡಿಕಾರಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಪ್ರತಿಯೊಂದಕ್ಕೂ ಹಿಂದುತ್ವದ ಜಪ ಮಾಡಿ ಭಾವನಾತ್ಮಕ ವಿಷಯಗಳನ್ನು ಮುನ್ನೆಲೆಗೆ ತಂದು ಸಮಾಜ ಮತ್ತು ಜನರನ್ನು ಒಡೆಯುತ್ತಿರುವ ಬಿಜೆಪಿ, ಈಗ ಭಾಷೆಯನ್ನೂ ಟೂಲ್ ಕಿಟ್ ಮಾಡಿಕೊಂಡು ವಿಭಜನೆಗೆ ಹೊರಟಿರುವುದು ದೇಶಕ್ಕೆ ಗಂಡಾಂತರಕಾರಿ. ಬ್ರಿಟಿಷರು ಪ್ರತಿ ಸಂಸ್ಥಾನವನ್ನು ಆಕ್ರಮಿಸಿಕೊಳ್ಳುವ ಮುನ್ನ ಒಡೆದು ಆಳುವ ನೀತಿ ಅನುಸರಿಸುತ್ತಿದ್ದರು. ಈಗ ಬಿಜೆಪಿ ಅದೇ ನೀತಿ ಮುಂದುವರೆಸಿದ್ದು, ಬ್ರಿಟೀಷರಿಗೂ ಮತ್ತು ಬಿಜೆಪಿಗೆ ಯಾವುದೇ ವ್ಯತ್ಯಾಸ ಇಲ್ಲ ಎನ್ನುವುದಕ್ಕೆ ಇದೇ ಜೀವಂತ ಸಾಕ್ಷಿ.

ಅಮಿತ್ ಶಾ ಅವರಿಗೆ ಇಂಗ್ಲಿಷ್ ಬರಲ್ವಾ ಅವರಿಗೆ ಪ್ರಾದೇಶಿಕ ಭಾಷೆಗಳ ಮೇಲೆ ಯಾಕೆ ಈ ಪರಿ ದ್ವೇಷ ನಮ್ಮ ಭಾಷೆ ನಮಗೆ ಮುಖ್ಯ ಮಾತೃಭಾಷೆಗೇ ಅಗ್ರಸ್ಥಾನ. ಕರ್ನಾಟಕದಲ್ಲಿ ಕನ್ನಡವೇ ಮೊದಲು. ಹಿಂದಿ ನಮ್ಮ ಭಾಷೆಯಲ್ಲ. ಹಿಂದಿ ಹೇರಿಕೆ ವಿರುದ್ಧ ಅಭಿಯಾನಕ್ಕೆ ನನ್ನ ಪೂರ್ಣ ಬೆಂಬಲ ಇದೆ ಎಂದು ಕುಮಾರಸ್ವಾಮಿ ಹೇಳಿದರು.

ಎನ್‌ಐಇ ಕಾಲೇಜಿನಲ್ಲಿ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿ, ಚಿನ್ನದ ಪದಕ ವಿತರಣೆ



ಮೈಸೂರು,ಏ.9(ಜಿಎ)–ವಿದ್ಯಾರ್ಥಿಗಳು ಪ್ರಾಮಾಣಿಕತೆ ಮತ್ತು ದೇಶಾಭಿಮಾನವನ್ನು ಬೆಳೆಸಿಕೊಳ್ಳಬೇಕು ಎಂದು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕ ಎನ್.ರವಿಚಂದ್ರನ್ ಹೇಳಿದರು.

ಮೈಸೂರು ಮಾನಂದವಾಡಿ ರಸ್ತೆಯಲ್ಲಿರುವ ಎನ್‌ಐಇ ಕಾಲೇಜಿನ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಸೆಮಿನಾರ್ ಸಭಾಂಗಣದಲ್ಲಿ ಆಯೋಜಿಸಿದ್ದ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 2019 ಮತ್ತು 2020ನೇ ಸಾಲಿನ ಪ್ರತಿಭಾವಂತ 62 ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿ ಮತ್ತು 41 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ 5 ವಿದ್ಯಾರ್ಥಿಗಳಿಗೆ ಚಿನ್ನದ ಪದಕದ ಜೊತೆಗೆ ನಗದು ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಿ ಅವರು ಮಾತನಾಡುತ್ತಿದ್ದರು.

90ರ ದಶಕದಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಾನು ವ್ಯಾಸಂಗ ಮಾಡುತ್ತಿದ್ದೆ. ಅಂದಿನಿಂದ ಇಂದಿನವರೆಗೂ ಅದೇ ಗುಣಮಟ್ಟದ ಶಿಕ್ಷಣವನ್ನು ನೀಡುತ್ತ ಬಂದಿದೆ ಎಂದು ಅವರ ವಿದ್ಯಾರ್ಥಿ ದೆಸೆಯ ದಿನಗಳನ್ನು ನೆನೆದ ಅವರು ವಿದ್ಯಾರ್ಥಿ ಜೀವನದಲ್ಲಿ ಯಾವ ಉದ್ದೇಶಗಳನ್ನು ಅಳವಡಿಸಿಕೊಳ್ಳುತ್ತೇವೋ ಅವುಗಳು ನಮ್ಮ ಉತ್ತಮ ವೃತ್ತಿ ಜೀವನವನ್ನು ರೂಪಿಸುತ್ತದೆ. ಏಕೆಂದರೆ ಇದಕ್ಕೆ ಉದಾಹರಣೆಯಾಗಿ ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದವರು ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದಾರೆ ಹಾಗೂ ವಿದೇಶಗಳಲ್ಲೂ ಉದ್ಯೋಗ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಪ್ರಶಸ್ತಿಗಳನ್ನು ಪಡೆಯುವುದು, ಹಣಗಳಿಸುವುದೇ ಅರ್ಥಪೂರ್ಣ ಜೀವನ ಅಂದುಕೊಂಡು ಎಲ್ಲವನ್ನು ವ್ಯವಹಾರಿಕವಾಗಿ ನೋಡುತ್ತಿದ್ದೇವೆ ಹಾಗೂ ಯಾವುದೇ ಸಭೆ ಸಮಾರಂಭದಲ್ಲಿ ಪ್ರಾಮಾಣಿಕತೆಯ ಬಗ್ಗೆ ಮಾತನಾಡುತ್ತಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ಇಂದಿನ ಪ್ರತಿಭಾವಂತ ವಿದ್ಯಾರ್ಥಿಗಳು ಚಿಂತಿಸಿ ಜೀವನದ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಪ್ರಾಮಾಣಿಕತೆ ಹಾಗೂ ಪ್ರಮುಖವಾಗಿ ದೇಶಾಭಿಮಾನವನ್ನು ಬೆಳೆಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ವಿದೇಶದಲ್ಲಿರುವ ಎನ್‌ಆರ್‌ಐಗಳು ಸ್ಥಾಪಿಸಿರುವ ಅಭಿಟ್ರಸ್ಟ್ ವತಿಯಿಂದ ಗ್ರಾಮೀಣ ಭಾಗದ ಪ್ರತಿಭಾವಂತ 4 ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು ಹಾಗೂ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಸ್ವೀಡನ್ ದೇಶಕ್ಕೆ ಕಳುಹಿಸಿ ವಿಶೇಷ ತರಬೇತಿ ನೀಡಲಾಗುವುದು ಎಂದು ಇದೇ ವೇಳೆ ಟ್ರಸ್ಟ್‌ನವರು ತಿಳಿಸಿದರು. ಕಾರ್ಯಕ್ರಮದಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮಂಡಳಿ ಅಧ್ಯಕ್ಷ ಡಾ.ಎಂ.ಎಸ್.ರಂಗನಾಥ್, ಪ್ರಾಂಶುಪಾಲ ಎನ್.ವಿ.ರಾಘವೇಂದ್ರ, ಉಪಪ್ರಾಂಶುಪಾಲ ಡಾ.ಗಣೇಶ್ ಪ್ರಸಾದ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬೆಲೆ ಏರಿಕೆ ವಿರುದ್ಧ ಯುವ ಕಾಂಗ್ರೆಸ್ ಪ್ರತಿಭಟನೆ



ಮೈಸೂರಿನ ಉದಯಗಿರಿ ವೃತ್ತದಲ್ಲಿ ಯುವ ಕಾಂಗ್ರೆಸ್ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಏ.9(ಪಿಎಂ)– ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ವಿದ್ಯುತ್ ದರ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಇದನ್ನು ನಿಯಂತ್ರಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ನಿರ್ಲಕ್ಷ್ಯ ವಹಿಸಿವೆ ಎಂದು ಆರೋಪಿಸಿ ಮೈಸೂರು ನಗರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಉದಯಗಿರಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಯುವ ಕಾಂಗ್ರೆಸ್ ನಗರಾಧ್ಯಕ್ಷ ಮಹಮ್ಮದ್ ಹ್ಯಾರಿಸ್, ಒಂದು ಕಡೆ ಬೆಲೆಗಳು ಶರವೇಗದಲ್ಲಿ ಏರಿಕೆಯಾಗುತ್ತಿದ್ದರೆ, ಮತ್ತೊಂದು ಕಡೆ ಹಿಂದೂ–ಮುಸ್ಲಿಮರ ನಡುವೆ ದ್ವೇಷ ಹೆಚ್ಚಿಸುವ ಪಿತೂರಿ ನಡೆಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪೆಟ್ರೋಲ್, ಡೀಸೆಲ್ ಬೆಲೆಗಳು ನಿಯಂತ್ರಣಕ್ಕೆ ಸಿಗುತ್ತಿಲ್ಲ. ಖಾದ್ಯ ತೈಲಗಳ ಬೆಲೆ ಏರಿಕೆಯಿಂದ ಬಡವರು ಹೈರಣಾಗಿದ್ದಾರೆ. ಇತರೆ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳೂ ನಿರಂತರವಾಗಿ ಹೆಚ್ಚುತ್ತಿವೆ. ಸರ್ಕಾರ ಕೂಡಲೇ ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು ಎಂದು ಒತ್ತಾಯಿಸಿದರು. ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳಾದ ನೌಫಿಲ್ ಅಹಮ್ಮದ್, ಶಶಾಂಕ್, ಮುಖಂಡರಾದ ಸೈಯದ್ ಇಕ್ರಂ, ಅಬ್ರಾರ್ ಮೊಹಮ್ಮದ್, ಫೈರೋಜ್ ಖಾನ್, ಯೋಗೇಶ್, ಚೇತನ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ.ಜಾತಿ, ಪಂಗಡದವರ ಸಮಸ್ಯೆ ಬಗೆಹರಿಸಿ

ಜಿಲ್ಲಾಧಿಕಾರಿ ಎಸ್.ಅಶ್ವತಿ ಸೂಚನೆ



ಮಂಡ್ಯ,ಏ.9(ಮೋಹನ್‌ರಾಜ್)– ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಮಸ್ಯೆಗಳನ್ನು ತ್ವರಿತ ಗತಿಯಲ್ಲಿ ಬಗೆಹರಿಸಲು ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ಹೇಳಿದರು.

ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ(ದೌರ್ಜನ್ಯ ಪ್ರತಿಬಂಧ) ಕಾಯ್ದೆ–1989 ಹಾಗೂ ನಿಯಮಗಳನ್ನು ಅನುಷ್ಠಾನಗೊಳಿಸುವ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟು ಜಾನಂಗದವರು ದೌರ್ಜನ್ಯಕ್ಕೆ ಒಳಗಾಗಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಹಾಜರಾಗಿ ದೂರು ನೀಡಿದಲ್ಲಿ ವಿಳಂಬ ಮಾಡದೇ ದೂರನ್ನು ಸ್ವೀಕರಿಸಿ ಎಫ್‌ಐಆರ್ ದಾಖಲಿಸಬೇಕು. ಪರಿಶಿಷ್ಟ ಜನಾಂಗದವರಿಗೆ ಕ್ಷೌರ ಮಾಡಲು ನಿರಾಕರಿಸುವ ಪ್ರಕರಣಗಳು ಸೇರಿದಂತೆ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಪ.ಜಾತಿಯವರಿಗೆ ಕುಡಿಯುವ ನೀರು ಹಾಗೂ ಇನ್ನಿತರ ವಿಷಯದಲ್ಲಿ ತಾರತಮ್ಯ ಮಾಡದ ರೀತಿಯಲ್ಲಿ ಜಾಗೃತಿಯ ಕಾರ್ಯಾಗಾರ ನಡೆಸಲು ಕ್ರಮ ವಹಿಸಬೇಕು ಎಂದು ತಿಳಿಸಿದರು.

ಮಂಡ್ಯ ಜಿಲ್ಲೆಯಲ್ಲಿನ ದುದ್ದ, ದೇವಲಾಪುರದಲ್ಲಿ ವಸತಿ ಶಾಲೆಗಳಿಗೆ ಜಾಗ, ಮೂಲ ಸೌಲಭ್ಯ ಕಲ್ಪಿಸಿ ಕೊಡುವ ಕುರಿತು ಹಾಗೂ ಕೊಮ್ಮರಹಳ್ಳಿಯಲ್ಲಿನ ಸಾರ್ವಜನಿಕ ಸ್ಮಶಾನಕ್ಕೆ ರಸ್ತೆ ಕಲ್ಪಿಸುವ ಬಗ್ಗೆ ಚರ್ಚಿಸಿ ಬಗೆಹರಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟು ಜನಾಂಗದವರುಗಳ ಮೇಲಿನ ದೌರ್ಜನ್ಯ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾದ ಕೂಡಲೇ ನೊಂದ ಸಂತ್ರಸ್ತರಿಗೆ ಸರ್ಕಾರದಿಂದ ಕಾಲಮಿತಿಯೊಳಗೆ ಪರಿಹಾರ ಮಂಜೂರು ಮಾಡುವ ಸಂಬಂಧ ಪ್ರಥಮ ವರ್ತಮಾನ ವರದಿಯ ಪ್ರತಿಗಳನ್ನು ಪ್ರಕರಣ ದಾಖಲಾದ ದಿನದಂದೇ ಆಯಾಯ ತಾಲೂಕಿನ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಕಚೇರಿಗಳಿಗೆ ಹಾಗೂ ಜಿಲ್ಲೆಯ ಉಪನಿರ್ದೇಶಕರ ಕಚೇರಿಗೆ ಸಲ್ಲಿಸಿ ಎಂದರು. ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲೆಯ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಉಪ ವಿಭಾಗ ಮಟ್ಟದಲ್ಲಿ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯನ್ನು ನಡೆಸುವಂತೆ ಇದೇ ವೇಳೆ ಜಿಲ್ಲಾಧಿಕಾರಿ ಸೂಚಿಸಿದರು.

ಸಭೆಯಲ್ಲಿ ಜಿಪಂ ಸಿಇಓ ಜಿ.ಆರ್.ಜೆ. ದಿವ್ಯಪ್ರಭು, ಎಸಿ ಐಶ್ವರ್ಯ, ಬಿ.ಸಿ.ಶಿವಾನಂದಮೂರ್ತಿ, ಎಎಸ್ಪಿ ವೇಣುಗೋಪಾಲ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಬಿ.ರಂಗೇಗೌಡ, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜಿಲ್ಲಾ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರುಗಳು ಸೇರಿದಂತೆ ಇತರರಿದ್ದರು.

ಬೆಳ್ಳೂರು ಹೊರ ಪೊಲೀಸ್ ಠಾಣೆ ಉದ್ಘಾಟನೆ

ಪೊಲೀಸರಿಗೆ ಸಾರ್ವಜನಿಕರ ಸಹಕಾರ ಮುಖ್ಯ: ಚುಂಚಶ್ರೀ



ನಾಗಮಂಗಲ, ಏ.9–ಪೊಲೀಸರು ಕಾನೂನು ಬದ್ಧವಾಗಿ ಕೆಲಸ ಮಾಡಲು ಸಾರ್ವಜನಿಕರ ಸಹಕಾರ ಮುಖ್ಯ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಶ್ರೀ ಅಭಿಪ್ರಾಯಪಟ್ಟರು.

ತಾಲೂಕಿನ ಬೆಳ್ಳೂರು ಕ್ರಾಸ್ ಬಳಿಯ ಬಿ.ಜಿ.ನಗರದಲ್ಲಿ ಬೆಳ್ಳೂರು ಹೊರ ಠಾಣೆ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು. ತಮಗೆ ಸಿಕ್ಕ ಮಾಹಿತಿಯನ್ನು ಪೊಲೀಸರೊಂದಿಗೆ ಹಂಚಿಕೊಂಡಾಗ ಅವರಿಗೆ ಆರೋಪಿಗಳನ್ನು ಹಿಡಿಯಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಲು ಸಾಧ್ಯವಾಗುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಸುರೇಶ್‌ಗೌಡ ಮಾತನಾಡಿ, ಈ ಪೊಲೀಸ್ ಹೊರಠಾಣೆಯಿಂದ ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲೆಯ ಜನರಿಗೆ ಅನುಕೂಲವಾಗಲಿದ್ದು, ಅಪಘಾತವಾದ ತಕ್ಷಣ ದೂರು ದಾಖಲಿಸಿಕೊಳ್ಳಲು ಮತ್ತು ಕೂಡಲೇ ಶವಪರೀಕ್ಷೆ ಮಾಡಲು ಸಹಾಯವಾಗುತ್ತದೆ ಎಂದರು.

ಇಲ್ಲಿ ವೈದ್ಯಕೀಯ, ಇಂಜಿನಿಯರಿಂಗ್, ನರ್ಸಿಂಗ್ ಸೇರಿದಂತೆ ಹಲವು ಉನ್ನತ ಶಿಕ್ಷಣ ಸಂಸ್ಥೆಗಳಿವೆ ಆ ಎಲ್ಲಾ ವಿದ್ಯಾರ್ಥಿಗಳ ರಕ್ಷಣೆಯ ದೃಷ್ಟಿಯಿಂದಲೂ ಇಲ್ಲೊಂದು ಪೊಲೀಸ್ ಹೊರ ಠಾಣೆ ಅವಶ್ಯಕತೆ ಇತ್ತು. ಆ ಬೇಡಿಕೆ ಈಡೇರಿಸಿದ ಸರ್ಕಾರಕ್ಕೆ ಧನ್ಯವಾದ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಆದಿಚುಂಚನಗಿರಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಜಿ.ಶಿವರಾಂ, ಆದಿಚುಂಚನಗಿರಿ ವಿವಿಯ ರಿಜಿಸ್ಟ್ರಾರ್ ಸುಬ್ಬರಾಯ ಸೇರಿದಂತೆ ಇತರರಿದ್ದರು.

ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ಕೆ.ಆರ್.ಪೇಟೆ,ಏ.9–ತಾಲೂಕಿನ ಮಾರ್ಗೋನಹಳ್ಳಿಯ ಸಂಗೊಳ್ಳಿ ರಾಯಣ್ಣ ಯುವಕರ ಬಳಗದಿಂದ ಮಾರ್ಗೋನಹಳ್ಳಿ ಸಮೀಪದ ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಬಳಿಯ ಶ್ರೀ ಮರಡಿಲಿಂಗೇಶ್ವರ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಎರಡು ದಿನಗಳ ಟೆನ್ನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿಗೆ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕ್ರೀಡೆಗಳು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಅಗತ್ಯವಾಗಿವೆ. ಗ್ರಾಮೀಣ ಪ್ರದೇಶದ ಯುವಕರು ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳುವ ಮೂಲಕ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು. ಈ ಮೂಲಕ ದುಶ್ಚಟಗಳಿಂದ ದೂರವಿರಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಬಿ.ಪ್ರಕಾಶ್ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯರು ಹಾಗೂ ಜೆಡಿಎಸ್ ನಾಯಕರಾದ ಹೆಚ್.ಟಿ.ಮಂಜು, ಟೌನ್ ಯುವ ಜೆಡಿಎಸ್ ಅಧ್ಯಕ್ಷ ಕೆ.ಸಚಿನ್‌ಕೃಷ್ಣ, ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಡಾ.ರಾಮಾನಾಯಕ್, ಶಿಕ್ಷಕ ಕೆ.ಎಸ್.ಚಂದ್ರು, ಗ್ರಾಪಂ ಅಧ್ಯಕ್ಷೆ ಮಮತಾರಘು, ಉಪಾಧ್ಯಕ್ಷ ಕಾಂತರಾಜು, ಗ್ರಾಪಂ ಸದಸ್ಯರಾದ ಚಿಲ್ಲದಹಳ್ಳಿ ಆರ್.ಶ್ರೀನಿವಾಸ್, ಮಾರ್ಗೋನಹಳ್ಳಿ ಕಾಳಮ್ಮ ನಿಂಗೇಗೌಡ, ನಗರೂರು ನಂಜೇಗೌಡ, ಮಾಜಿ ಗ್ರಾಪಂ ಸದಸ್ಯ ಎ.ಬಿ.ಕುಮಾರ್, ಯುವ ಮುಖಂಡರಾದ ಎಂ.ಎಸ್.ಮಧು, ಯೋಗರಾಜು, ರಘು, ಎಂ.ಪ್ರದೀಪ್, ಚಂದ್ರಶೇಖರ್, ಮಾಕವಳ್ಳಿ ಸುಮಿತ್, ಅಣ್ಣೇಚೌಡೇನಹಳ್ಳಿ ಜೆಸಿಬಿ ರವಿ, ಜೆಸಿಬಿ ಮಂಜು, ಎಂ.ಸಿ.ಯೋಗೇಶ್, ಮಂಜೇಗೌಡ, ಎಂ.ದಿನೇಶ್, ಆನಂದ್, ಜೆಸಿಬಿ.ಯೋಗೇಶ್ ಸೇರಿದಂತೆ ನಗರೂರು ಮಾರ್ಗೋನಹಳ್ಳಿ, ಚಿಲ್ಲದಹಳ್ಳಿ ಗ್ರಾಮಸ್ಥರಿದ್ದರು. ರಾಜ್ಯದ ವಿವಿಧ ಭಾಗಗಳಿಂದ 20ಕ್ಕೂ ಹೆಚ್ಚಿನ ತಂಡಗಳು ಟೆನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿವೆ.

ಶ್ರೀ ಕೋಡಿಲಿಂಗೇಶ್ವರ ದೇಗುಲ ಪುನರ್‌ನಿರ್ಮಾಣಕ್ಕೆ ಭೂಮಿಪೂಜೆ



ಪಾಂಡವಪುರ, ಏ.9–ತಾಲೂಕಿನ ಚಾಗಶೆಟ್ಟಿಹಳ್ಳಿ ಗ್ರಾಮದಲ್ಲಿ ಶ್ರೀಕೋಡಿಲಿಂಗೇಶ್ವರ ದೇವಸ್ಥಾನ ಪುನರ್‌ನಿರ್ಮಾಣಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕ ಸಿ.ಎಸ್. ಪುಟ್ಟರಾಜು ಅವರು, ಶ್ರೀಕೋಡಿಲಿಂಗೇಶ್ವರ ದೇವಸ್ಥಾನವನ್ನು ಕಳೆದ ನಾಲ್ಕು ವರ್ಷಗಳ ಹಿಂದೆಯೇ ಅಭಿವೃದ್ಧಿಪಡಿಸಬೇಕಾಗಿತ್ತು. ಆದರೆ ಬದಲಾದ ರಾಜಕೀಯ ವ್ಯವಸ್ಥೆಯಿಂದ ಸಾಧ್ಯವಾಗಿರಲಿಲ್ಲ. ಸರ್ಕಾರ ಶಾಸಕರಿಗೆ ಕೊಟ್ಟಂತಹ ವಿಶೇಷ ಅಭಿವೃದ್ಧಿ ಯೋಜನೆಯಡಿ ಶ್ರೀಕೋಡಿಲಿಂಗೇಶ್ವರ ದೇವಸ್ಥಾನಕ್ಕೆ 90 ಲಕ್ಷ ರೂ. ಹಾಗೂ ತಾಲೂಕಿನ ಮಲ್ಲಿಗೆರೆಯ ಶ್ರೀ ಈಶ್ವರ ದೇವಸ್ಥಾನಕ್ಕೆ 90 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ಇದೀಗ ಶ್ರೀಕೋಡಿಲಿಂಗೇಶ್ವರಸ್ವಾಮಿ ದೇವಸ್ಥಾನದ ಪುನರ್‌ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ ಎಂದರು.

ಏತನೀರಾವರಿ ಶೀಘ್ರವೇ ಚಾಲನೆ: ಕ್ಷೇತ್ರದ ಜನರ ಆಶೀರ್ವಾದದಿಂದ ಸಚಿವನಾಗಿ ಕೆಲಸ ಮಾಡುವ ಸಂದರ್ಭದಲ್ಲಿ ವಿಸಿ ನಾಲೆಯ ಅಚ್ಚುಕಟ್ಟು ಪ್ರದೇಶದಿಂದ ಶ್ಯಾದನಹಳ್ಳಿಯ ಹಳ್ಳದ ಮೂಲಕ ಕಾವೇರಿ ನದಿ ಸೇರಿ ತಮಿಳುನಾಡಿಗೆ ಹೋಗುತ್ತಿದ್ದ ನೀರನ್ನು ಏತ ನೀರಾವರಿ ಯೋಜನೆಯ ಮೂಲಕ ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ. 90 ಕೋಟಿ ರೂ. ವೆಚ್ಚದಲ್ಲಿ ಶ್ಯಾದನಹಳ್ಳಿ ಏತನೀರಾವರಿ ಯೋಜನೆ ಮಂಜೂರು ಮಾಡಿ ಶೀಘ್ರವೇ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು

ಸಂದರ್ಭದಲ್ಲಿ ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ, ಚಲುವರಾಜು, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಜಿಲ್ಲಾ ಯೂನಿಯನ್ ಬ್ಯಾಂಕ್ ನಿರ್ದೇಶಕ ನಿಂಗೇಗೌಡ, ಪುರಸಭೆ ಮಾಜಿ ಅಧ್ಯಕ್ಷ ಪಿ.ಎಸ್. ಲಿಂಗರಾಜು, ಗ್ರಾಪಂ ಅಧ್ಯಕ್ಷ ಶಿವಣ್ಣ, ಮುಖಂಡ ಎಸ್.ಎ.ಮಲ್ಲೇಶ್, ದ್ಯಾವಪ್ಪ, ಜಯಶಂಕರಪ್ಪ, ನಿವೃತ್ತ ಶಿಕ್ಷಕ ಸಿದ್ದಪ್ಪ, ಮಹೇಶ್, ಹೆಚ್‌ಎಸ್‌ಆರ್ ಮಧುಸೂದನ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮನೋಹರ್, ಗ್ರಾಪಂ ಸದಸ್ಯ ಕಾಂತರಾಜು, ಶಿವಕುಮಾರ್, ಸುರೇಶ್, ಬಸವರಾಜು ಎಇಇ ವಿಶ್ವನಾಥ್ ಸೇರಿದಂತೆ ಹಲವರಿದ್ದರು.

ಹುಂಡಿ ಕಳವು: ಆರೋಪಿ ಬಂಧನ

ಶ್ರೀರಂಗಪಟ್ಟಣ,ಏ.9(ವಿನಯ್‌ಕಾರೇಕುರ)–ತಾಲೂಕಿನ ಬೆಳಗೊಳ ದೇವಸ್ಥಾನದ ಹುಂಡಿ ಕಳವು ಮಾಡಿದ್ದ ಆರೋಪಿಯನ್ನು ಕೆಆರ್‌ಎಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚೆಂಗುಮಣಿ ಎಂಬಾತ ಬಂಧಿತ ಆರೋಪಿಯಾಗಿದ್ದು, ಈ ಮಾ.6 ರಂದು ಬೆಳಗೊಳ ಬಳಿಯ ಬಲಮುರಿ ಕ್ಷೇತ್ರದ ಶ್ರೀ ಅಗಸ್ತೇಶ್ವರ ದೇವಸ್ಥಾನದಲ್ಲಿ ಹುಂಡಿ ಕಳವು ಮಾಡಿ, ತಲೆಮರೆಸಿಕೊಂಡಿದ್ದ. ಖಚಿತ ಮಾಹಿತಿ ಮೇರೆಗೆ ಶನಿವಾರ ಕೆ.ಆರ್.ಸಾಗರ ಪೊಲೀಸರು ಪಟ್ಟಣದ ಬೃಂದಾವನ ರಸ್ತೆಯ ಟಿ–ಜಂಕ್ಷನ್ ಬಳಿ ಚೆಂಗಮಣಿಯನ್ನು ಬಂಧಿಸಿ, 9,600 ರೂ. ನಗದು, ಕೃತ್ಯಕ್ಕೆ ಬಳಸಿದ್ದ ವಸ್ತುಗಳು, ಸ್ಕೂಟರ್ ಅನ್ನು ವಶಪಡಿಸಿಕೊಂಡಿದ್ದಾರೆ. ಸದಸ್ಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅಕ್ರಮ ಗಣಿಗಾರಿಕೆ ಕುರಿತು ಸುಮಲತಾಗೆ ಮಾಹಿತಿ ನೀಡಿದ ಯುವಕನ ಮೇಲೆ ಹಲ್ಲೆ

- ಯುವಕನಿಂದ ಕ್ರಷರ್‌ಗೆ ಅಕ್ರಮ ಪ್ರವೇಶ ಆರೋಪ
- ಅರೆಕೆರೆ ಠಾಣೆಯಲ್ಲಿ ದೂರು–ಪ್ರತಿದೂರು ದಾಖಲು

ಶ್ರೀರಂಗಪಟ್ಟಣ, ಏ. 9(ವಿನಯ್ ಕಾರೇಕುರ)– ಅಕ್ರಮ ಗಣಿಗಾರಿಕೆ ಬಗ್ಗೆ ಸಂಸದೆ ಸುಮಲತಾ ಅವರಿಗೆ ಮಾಹಿತಿ ನೀಡಿದ ಕಾರಣಕ್ಕಾಗಿ ಕ್ರಷರ್‌ವೊಂದರ ಮೇಸ್ತ್ರಿ ಹಾಗೂ ಆತನ ಮಕ್ಕಳು ಹಲ್ಲೆ ನಡೆಸಿದ್ದಾರೆ ಎಂದು ಯುವಕನೋರ್ವ ಪೊಲೀಸರಿಗೆ ದೂರು ಸಲ್ಲಿಸಿದ್ದರೆ, ಸದರಿ ಯುವಕ ಕ್ರಷರ್‌ಗೆ ಅಕ್ರಮ ಪ್ರವೇಶ ಮಾಡಿ ವಿಡಿಯೋ ಮಾಡಿದ್ದಲ್ಲದೇ, ತನ್ನ ಮೇಲೆ ಹಲ್ಲೆ ನಡೆಸಿದ್ದಾನೆ ಎಂದು ಕ್ರಷರ್‌ಗಾಗಿ ಭೂಮಿ ನೀಡಿದ್ದ ಮಹಿಳೆ ದೂರು ಸಲ್ಲಿಸಿದ್ದಾರೆ. ಅರೆಕೆರೆ ಠಾಣೆ ಪೊಲೀಸರು ದೂರು ಹಾಗೂ ಪ್ರತಿ ದೂರನ್ನು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ರಾಮು

ತಾಲೂಕಿನ ಚೆನ್ನನಕೆರೆ ಗ್ರಾಮದ ರಾಮು ಎಂಬಾತನೇ ಕ್ರಷರ್ ಮೇಸ್ತ್ರಿ ನಂಜೇಗೌಡ ಹಾಗೂ ಆತನ ಮಕ್ಕಳಿಂದ ಹಲ್ಲೆಗೊಳಗಾದವನಾಗಿದ್ದು, ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ತಾನು ಅಕ್ರಮ ಗಣಿಗಾರಿಕೆ ಬಗ್ಗೆ ಸಂಸದೆ ಸುಮಲತಾ ಅವರಿಗೆ ಮಾಹಿತಿ ನೀಡಿದ ಕಾರಣಕ್ಕಾಗಿ ಜಕ್ಕನಹಳ್ಳಿಯ ರೆಡ್ಡಿ ಕ್ರಷರ್‌ನ ಮೇಸ್ತ್ರಿ ನಂಜೇಗೌಡ ಮತ್ತು ಮಕ್ಕಳು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆತ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾನೆ.

ರೆಡ್ಡಿ ಕ್ರಷರ್ ನಡೆಸಲು ಭೂಮಿ ನೀಡಿರುವ ಮೀನಾಕ್ಷಿ ಎಂಬುವರು ತಾನು ಹಾಗೂ ನಂಜೇಗೌಡ ಕ್ರಷರ್ ಬಳಿ ಮಾತನಾಡುತ್ತಾ ನಿಂತಿದ್ದಾಗ ಚೆನ್ನನಕೆರೆ ಗ್ರಾಮದ ರಾಮು ಕ್ರಷರ್‌ಗೆ ಅಕ್ರಮವಾಗಿ ಪ್ರವೇಶಿಸಿ ವಿಡಿಯೋ ಚಿತ್ರೀಕರಣ ಮಾಡುತ್ತಿದ್ದ. ಅದನ್ನು ಪ್ರಶ್ನಿಸಿದಾಗ ತನ್ನ ಮೇಲೆ ಹಲ್ಲೆ ನಡೆಸಿದ್ದಾನೆ. ಆತನ ಕುಟುಂಬಕ್ಕೂ ನಮಗೂ ಮಧ್ಯೆ ಹಲವು ವರ್ಷಗಳಿಂದ ದ್ವೇಷವಿರುವ ಕಾರಣ ನಮ್ಮ ಮೇಲೆ ಅಪಪ್ರಚಾರ ಮಾಡುತ್ತಿದ್ದಾನೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಪೊಲೀಸರು ದೂರು–ಪ್ರತಿ ದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ರೆಡ್ಡಿ ಕ್ರಷರ್ ಕಾನೂನುಬದ್ಧವಾಗಿಯೇ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗ್ರಾಮ ಸಾಗುವಳಿ ಅದಾಲತ್‌ಗೆ ಆಗ್ರಹಿಸಿ ಪ್ರಜಾಪಾರ್ಟಿ ಮೇ 5ರಿಂದ ಚಾ.ನಗರದಿಂದ ಬೀದರ್‌ವರೆಗೆ ರಥಯಾತ್ರೆ



ಮೈಸೂರು, ಏ.9(ಎಸ್‌ಬಿಡಿ)– 'ಗ್ರಾಮ ಸಾಗುವಳಿ ಅದಾಲತ್' ಜಾರಿಗೆ ಆಗ್ರಹಿಸಿ ಕರ್ನಾಟಕ ಪ್ರಜಾಪಾರ್ಟಿ(ರೈತಪರ್ವ) ಮೇ 5ರಿಂದ 'ರಥಯಾತ್ರೆ' ಹಮ್ಮಿಕೊಂಡಿದೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಪಕ್ಷದ ಸಂಸ್ಥಾಪಕ ಅಧ್ಯಕ್ಷ ಬಿ.ಶಿವಣ್ಣ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಚಾಮರಾಜನಗರದಿಂದ ಬೀದರ್‌ವರೆಗೆ ರಥಯಾತ್ರೆ ನಡೆಸುವ ಮೂಲಕ 'ಗ್ರಾಮ ಸಾಗುವಳಿ ಅದಾಲತ್'ಗೆ ಆಗ್ರಹಿಸುವ ನಿರ್ಣಯ ಕೈಗೊಳ್ಳಲಾಯಿತು.

ಸಭೆಯಲ್ಲಿ ಬಿ.ಶಿವಣ್ಣ ಮಾತನಾಡಿ, ಅನ್ನದಾತರ ಅಭ್ಯುದಯಕ್ಕಾಗಿ ಇರುವಂತಹ ಸರ್ಕಾರಿ ಭೂಮಿಯನ್ನು ಸಾಗುವಳಿಗೆ ಮಂಜೂರು ಮಾಡುವ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಸ್ಥಳೀಯ ಶಾಸಕರು ಹಾಗೂ ತಹಸೀಲ್ದಾರ್ ಫಲಾನುಭವಿಗಳಿಂದ ಎಕರೆಗೆ 2–3 ಲಕ್ಷ ರೂ. ಹಣ ಪಡೆದು ಮಂಜೂರು ಮಾಡುತ್ತಿದ್ದಾರೆ ಎಂಬ ಆರೋಪವಿದೆ. ಪ್ರಕ್ರಿಯೆ ವಿಳಂಬದಿಂದ ಹಲವು ವರ್ಷಗಳ ಸಾವಿರಾರು ಅರ್ಜಿಗಳು ಬಾಕಿ ಉಳಿದಿವೆ. ಈ ಅವ್ಯವಸ್ಥೆ ಸರಿಪಡಿಸುವ ನಿಟ್ಟಿನಲ್ಲಿ 'ಗ್ರಾಮ ಸಾಗುವಳಿ ಅದಾಲತ್' ಜಾರಿ ಅನಿವಾರ್ಯ ಎಂದರು.

ತಹಸೀಲ್ದಾರ್ ನೇತೃತ್ವದಲ್ಲಿ ಆಯಾಯ ಗ್ರಾಮಗಳಲ್ಲೇ ಅದಾಲತ್ ನಡೆಸಿ, ಫಲಾನುಭವಿಗಳಿಂದ ಸರ್ಕಾರಿ ಶುಲ್ಕ(ಕಿಮ್ಮತ್ತು) ಪಾವತಿಸಿಕೊಂಡು ಸ್ಥಳದಲ್ಲೇ ಸಾಗುವಳಿ ಮಂಜೂರಾತಿ ಮಾಡುವ ವ್ಯವಸ್ಥೆ ಜಾರಿಯಾದರೆ ಭ್ರಷ್ಟಾಚಾರ ತಪ್ಪುತ್ತದೆ. ಬಾಕಿ ಅರ್ಜಿಗಳ ತ್ವರಿತ ವಿಲೇವಾರಿಯೂ ಸಾಧ್ಯವಾಗುತ್ತದೆ. ಇದರಿಂದ ಅರ್ಜಿ ಹಾಕಿ ಹಲವು ವರ್ಷಗಳಿಂದ ಕಾದಿರುವ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಹಾಗಾಗಿ ಈ ಬಗ್ಗೆ ಸರ್ಕಾರದ ಗಮನ ಸೆಳೆಯುವುದರ ಜೊತೆಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶ ದಿಂದ ಮೇ 5ರಿಂದ ಚಾಮರಾಜನಗರ ಗಡಿಯಿಂದ ಬೀದರ್‌ವರೆಗೆ ರಥಯಾತ್ರೆ ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ಬಸ್ ಸಜ್ಜುಗೊಳಿಸಿಕೊಳ್ಳಲಾಗುತ್ತಿದ್ದು, ಎಲ್ಲಾ ಜಿಲ್ಲೆಗಳಲ್ಲೂ ಯಾತ್ರೆ ಸಂಚರಿಸಲಿದೆ ಎಂದು ತಿಳಿಸಿದರು.

ಅನಗತ್ಯ ವಿವಾದ: ರಾಜ್ಯದಲ್ಲಿ ಹಿಜಾಬ್, ಆಜಾನ್, ಹಲಾಲ್, ವ್ಯಾಪಾರ ನಿರ್ಬಂಧ ಹೀಗೆ ಧಾರ್ಮಿಕ ವಿಚಾರಗಳಲ್ಲಿ ಹಲವು ವಿವಾದಗಳನ್ನು ಅನಗತ್ಯವಾಗಿ ಸೃಷ್ಟಿಸಲಾಗುತ್ತಿದೆ. ಇದರಿಂದ ಸಾಮಾಜಿಕ, ಆರ್ಥಿಕ ವ್ಯವಸ್ಥೆ ಹಾಳಾಗುತ್ತಿದೆ. ಸಮಾಜದಲ್ಲಿ ಸಾಕಷ್ಟು ಮೂಲಭೂತ ಸಮಸ್ಯೆಗಳಿದ್ದು, ನಿರುದ್ಯೋಗ, ನಿತ್ಯ ಬೆಲೆ ಏರಿಕೆಯಿಂದ ಸಾಮಾನ್ಯರು ಬಳಲುತ್ತಿದ್ದಾರೆ. ಯಾವುದೋ ಸಂಘಟನೆ ಕಾರ್ಯಕರ್ತ ಸಾವನ್ನಪ್ಪಿದ್ದರೆ ಅವರ ಕುಟುಂಬದವರಿಗೆ 25–30 ಲಕ್ಷ ರೂ. ನೆರವು ನೀಡುತ್ತಾರೆ. ಆದರೆ ದೇಶಕ್ಕೆ ಅನ್ನ ನೀಡುವ ರೈತ ಮೃತಪಟ್ಟರೆ ಅವರ ಮನೆಯವರಿಗೆ 2–3 ಲಕ್ಷ ರೂ. ಪರಿಹಾರ ನೀಡುವುದೇ ಹೆಚ್ಚು. ಸಮಾಜ ಇಂತಹ ಸಮಸ್ಯೆಗಳತ್ತ ಗಮನಹರಿಸಬೇಕಿದೆ ಎಂದು ಹೇಳಿದರು.

ಪಕ್ಷ ಸೇರ್ಪಡೆ: ವಿವಿಧ ರಾಜಕೀಯ ಪಕ್ಷಗಳಲ್ಲಿ ಸಕ್ರಿಯರಾಗಿದ್ದ ಹಲವಾರು ಮಂದಿ ಇಂದಿನ ಸಭೆಯಲ್ಲಿ ಕರ್ನಾಟಕ ಪ್ರಜಾಪಾರ್ಟಿಗೆ ಸೇರ್ಪಡೆಯಾದರು. ಪಕ್ಷದ ರಾಜ್ಯಾಧ್ಯಕ್ಷ ಬಿ.ಶಿವಣ್ಣ ಹಾಗೂ ಪದಾಧಿಕಾರಿಗಳು ನೂತನ ಸದಸ್ಯರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಸಭೆಯಲ್ಲಿ ಮಹಿಳಾ ಘಟಕದ ಅಧ್ಯಕ್ಷೆ ಸಂಗೀತಾ, ಮೈಸೂರು ಜಿಲ್ಲಾಧ್ಯಕ್ಷ ಪಿ.ಕುಮಾರಸ್ವಾಮಿ , ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಹರೀಶ್ ಗೌಡ, ಬಿ.ಆದರ್ಶ, ರಾಜ್ಯ ಉಪಾಧ್ಯಕ್ಷರಾದ ಎ.ಜಿ. ರಾಮಚಂದ್ರರಾವ್, ಕೆ.ಜೆ.ಯೋಗೇಶ್, ರಾಜ್ಯ ಮಾಧ್ಯಮ ವಕ್ತಾರ ಶ್ರೀನಿವಾಸ್, ಹುಣಸೂರು ತಾಲೂಕು ಅಧ್ಯಕ್ಷ ಚೆಲುವರಾಜ್, ಶ್ರೀರಂಗಪಟ್ಟಣ ತಾಲೂಕು ಅಧ್ಯಕ್ಷ ಧನು, ಜಿಲ್ಲಾ ಮಹಿಳಾ ಘಟಕದ ಉಪಾಧ್ಯಕ್ಷೆ ತಾರಾ, ಮುಖಂಡರಾದ ತಮ್ಮಯ್ಯ, ಪ್ರದೀಪ, ಉಮಾಶಂಕರ್, ನಾಗರಾಜು ಕೃಷ್ಣಮೂರ್ತಿ ಅಶೋಕಪುರಂ ಗಣೇಶ್ ಕೃಷ್ಣ , ಸರಗೂರು ಎಂ.ರಾಜೇಂದ್ರ, ಎಸ್.ಲೋಕೇಶ್ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ಮೆಡಿಕಲ್ ಕಾಲೇಜು ಹಳೆ ವಿದ್ಯಾರ್ಥಿಗಳ ಬಾಂಧವ್ಯ ಬೆಸೆದ ಯಶಸ್ವಿ 'ಮಾ ಉತ್ಸವ'

ಐದು ಎಕರೆ ಜಾಗ ನೀಡಿದರೆ 'ಅತ್ಯಾಧುನಿಕ ಕೌಶಲ್ಯ ಪ್ರಯೋಗಾಲಯ' ನಿರ್ಮಿಸುವ ಭರವಸೆ ನೀಡಿದ ರಾಜೀವ್ ಗಾಂಧಿ ಆರೋಗ್ಯ ವಿವಿ ಕುಲಪತಿ ಡಾ.ಎಂ.ಕೆ.ರಮೇಶ್



ಮೈಸೂರು ವೈದ್ಯಕೀಯ ಕಾಲೇಜು ಅಲುಮ್ನಿ ಅಸೋಸಿಯೇಷನ್‌ನ 'ಮಾ ಉತ್ಸವ'ದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಹಿರಿಯ ವೈದ್ಯರನ್ನು ಅಭಿನಂದಿಸಲಾಯಿತು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ(ಆರ್‌ಜಿಯುಹೆಚ್‌ಎಸ್)ದ ವಿಶ್ರಾಂತ ಕುಲಪತಿ ಡಾ.ಕಾಂತಾ ಎಸ್. ಜಾದವ್, ಕುಲಪತಿ ಡಾ.ಎಂ.ಕೆ.ರಮೇಶ್, ಎಂಎಎ(ಮಾ) ಟ್ರಸ್ಟ್ ಮುಖ್ಯಸ್ಥ ಡಾ.ಎಸ್.ಚಂದ್ರಶೇಖರ ಶೆಟ್ಟಿ ಕಾರ್ಯದರ್ಶಿ ಡಾ.ಎಂ.ಎ.ಶೇಖರ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ಡೀನ್ ಮತ್ತು ನಿರ್ದೇಶಕ ಡಾ.ಹೆಚ್.ಎನ್.ದಿನೇಶ್ ಮತ್ತಿತರರಿದ್ದರು.

ನಮ್ಮ ತಾಯಿಯನ್ನು ನಾವೇ ನೋಡಿಕೊಳ್ಳಬೇಕು....

ಮೈಸೂರು ಮೆಡಿಕಲ್ ಕಾಲೇಜು ನಮ್ಮ ತಾಯಿ ಇದ್ದಂತೆ. ನಮಗೆ ವಿದ್ಯೆ ಜೊತೆಗೆ ಉನ್ನತ ಸ್ಥಾನ ನೀಡಿದ ತಾಯಿಯನ್ನು ನಾವೇ ನೋಡಿಕೊಳ್ಳಬೇಕು. ನಾವೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದು, ರಾಜ್ಯದ ಹಳೆಯ ಕಾಲೇಜುಗಳಲ್ಲಿ ಒಂದಾಗಿರುವ ಮೈಸೂರು ಮೆಡಿಕಲ್ ಕಾಲೇಜು ಅಭಿವೃದ್ಧಿಗೆ ಸಹಕರಿಸಬೇಕಾಗಿದೆ.

– **ಡಾ.ಕಾಂತಾ ಎಸ್. ಜಾದವ್,** ರಾಜೀವ್‌ಗಾಂಧಿ ಆರೋಗ್ಯ ವಿವಿ ಮೊದಲ ಕುಲಪತಿ

ಮೈಸೂರು, ಏ.9(ಎಂಕೆ)– ನಗರದ ಜೆ.ಕೆ.ಮೈದಾನದಲ್ಲಿರುವ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ(ಎಂಎಂಸಿಆರ್‌ಐ)ಯ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಾ ಉತ್ಸವ–2022' ಯಶಸ್ವಿಯಾಗಿ ನೆರವೇರಿತು.

ಮೈಸೂರು ವೈದ್ಯಕೀಯ ಕಾಲೇಜು ಅಲುಮ್ನಿ ಅಸೋಸಿಯೇಷನ್‌ನ 'ಮಾ ಉತ್ಸವ'ದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಹಿರಿಯ ವೈದ್ಯರಾದ ಡಾ.ಹೆಚ್.ಬಾಲಕೃಷ್ಣನಾಯಕ್, ಡಾ.ಹೆಚ್. ವಿ.ಚಂದ್ರಲೇಖ, ಡಾ.ಶ್ರೀನಿವಾಸ್ ಡೋಂಗ್ರೆ, ಡಾ.ಗ್ಲಾಡಿಸ್ ರಸ್ಕಿನ್, ಡಾ.ಕೃಷ್ಣ ಆರ್.ಜೋಷಿ, ಡಾ.ಎಂ.ಸದಾದೇವ್, ಡಾ.ಡಿ.ಸತ್ಯನಾಗರಾಜ್, ಡಾ.ಪಾರ್ವತಮ್ಮ, ಡಾ.ಸುಮತಿ ಬಾಸ್ಕರ್, ಡಾ.ವ್ಯಾನ್ಸಿಲಾಸ್ ಸಲ್ದಾನ, ಡಾ.ಸಿ.ಎಸ್. ಹನುಮಂತಪ್ಪ, ಡಾ.ಎಲ್.ದೇವೇಗೌಡ ಹಾಗೂ ಡಾ.ಸಿ.ಜೆ.ಜಗದೀಶ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಅಲ್ಲದೆ ಅಸೋಸಿಯೇಷನ್ ಅಭಿವೃದ್ಧಿಗೆ ಸಹಕರಿಸಿದ ಸುಯೋಗ್ ಆಸ್ಪತ್ರೆ ಮುಖ್ಯಸ್ಥ ಡಾ.ಎಸ್.ಪಿ.ಯೋಗಣ್ಣ, ಡಾ.ಬಿ.ಆರ್. ನಟರಾಜ್ ಹಾಗೂ ಡಾ.ಬಿ.ಡಿ.ಗಣಪತಿ ಅವರನ್ನು ಸನ್ಮಾನಿಸಲಾಯಿತು. ಬಳಿಕ 'ಮಾ ಉತ್ಸವ–2022' ಉದ್ಘಾಟಿಸಿದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ(ಆರ್‌ಜಿಯುಹೆಚ್‌ಎಸ್)ದ ಕುಲಪತಿ ಡಾ.ಎಂ.ಕೆ.ರಮೇಶ್ ಮಾತನಾಡಿ, ಮೈಸೂರು ಮೆಡಿಕಲ್ ಕಾಲೇಜಿನಿಂದ 3 ರಿಂದ 5 ಎಕರೆ ಜಾಗ ನೀಡಿದರೆ 'ಅತ್ಯಾಧುನಿಕ ಕೌಶಲ್ಯ ಪ್ರಯೋಗಾಲಯ' ನಿರ್ಮಿಸಲಾಗುವುದು ಎಂದು ಹೇಳಿದರು.

ಬಹಳಷ್ಟು ಮಂದಿ ಕನಿಷ್ಠ ಐವಿ ಲೈನ್ ಹಾಕಲು ಬಾರದೇ, ಒಂದೇ ಒಂದು ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆಯನ್ನೂ ಮಾಡದೇ ಎಂಎಸ್ ಪದವಿ ಪಡೆದು ಹೊರಹೋಗುತ್ತಿದ್ದಾರೆ. ಇಂತಹವರಿಗಾಗಿಯೇ ಬೆಂಗಳೂರು, ಕಲಬುರ್ಗಿ, ದಾವಣಗೆರೆ, ಮಂಗಳೂರಿನಲ್ಲಿರುವ ಪ್ರಾದೇಶಿಕ ಕೇಂದ್ರಗಳಲ್ಲಿ ಕೌಶಲ ಪ್ರಯೋಗಾಲಯ ಸ್ಥಾಪಿಸಲಾಗುತ್ತಿದ್ದು, ಮೈಸೂರಿನಲ್ಲಿ ಸೂಕ್ತ ಜಾಗವನ್ನು ಕೊಟ್ಟರೆ ಮೈಸೂರು ವೈದ್ಯಕೀಯ ಕಾಲೇಜಿನ ಶತಮಾನೋತ್ಸವ ಸಮಾರಂಭದ ಹೊತ್ತಿಗೆ (2024) ಕೌಶಲ ಪ್ರಯೋಗಾಲಯವನ್ನು ಸ್ಥಾಪಿಸಲಾಗುವುದು ಎಂದು ತಿಳಿಸಿದರು.

ಬೋಧನೆ ಸ್ವರೂಪ ಬದಲಾಗಿದೆ: ಕೊರೊನಾ ಬಂದ ನಂತರ ಬೋಧನೆಯ ಸ್ವರೂಪವೇ ಬದಲಾಗಿದೆ. ಆನ್‌ಲೈನ್ ಶಿಕ್ಷಣದಲ್ಲಿ ಈಗ ಮೂಲಸೌಕರ್ಯಗಳು ಸಾಕಾಗುವಷ್ಟು ಇದೆ. ಶೇ.25ರಷ್ಟು ಬೋಧನೆಯನ್ನು ಆನ್‌ಲೈನ್‌ನಲ್ಲೇ ನೀಡಲು ನಿರ್ಧರಿಸಲಾಗಿದೆ. ಬೇರೆ ದೇಶಗಳಲ್ಲಿ ಕಾಲೇಜುಗಳ ನಡುವೆ ಹೆಚ್ಚೆಂದರೆ ಶೇ.20ರಷ್ಟು ವ್ಯತ್ಯಾಸ ಕಂಡು ಬಂದರೆ, ನಮ್ಮ ದೇಶದಲ್ಲಿ ಶೇ 100 ರಷ್ಟು ವ್ಯತ್ಯಾಸಗಳು ಕಂಡು ಬರುತ್ತವೆ ಎಂದು ಹೇಳಿದರು.

ಪ್ರಯತ್ನಿಸಲಾಗುವುದು: ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ಮೈಸೂರಿನಲ್ಲಿ ಕೌಶಲ್ಯ ಪ್ರಯೋಗಾಲಯ ನಿರ್ಮಾಣಕ್ಕೆ ಬೇಕಾಗುವ ಸೂಕ್ತ ಜಾಗ ಕೊಡಿಸಲು ಪ್ರಯತ್ನಿಸಲಾಗುವುದು. ವೃತ್ತಿ ನಿಷ್ಠೆಯಿದ್ದರೆ ಯಶಸ್ಸು ಖಂಡಿತ ದೊರೆಯುತ್ತದೆ ಎಂದ ಅವರು, ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸದ ದಿನಗಳನ್ನು ಸ್ಮರಿಸಿದರು.

ಡೈನಿಂಗ್ ಹಾಲ್ ಉದ್ಘಾಟನೆ: ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ(ಎಂಎಂಸಿಆರ್‌ಐ)ಯ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ನಿರ್ಮಿಸಿರುವ ನೂತನ ಡೈನಿಂಗ್ ಹಾಲ್ ಅನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಹೆಚ್‌ಎಸ್)ದ ಮೊದಲ ಹಾಗೂ ವಿಶ್ರಾಂತ ಕುಲಪತಿ ಡಾ.ಕಾಂತಾ ಎಸ್.ಜಾದವ್ ಉದ್ಘಾಟಿಸಿ, ಸಿಹಿ ಹಂಚಿದರು. ಇದಕ್ಕೂ ಮೊದಲು ನಡೆದ 'ವೈಜ್ಞಾನಿಕ ಕಾರ್ಯಕ್ರಮ'ವನ್ನು ಕೆ.ಆರ್.ಆಸ್ಪತ್ರೆ ನಿವೃತ್ತ ವೈದ್ಯಕೀಯ ಅಧೀಕ್ಷಕ ಡಾ.ಬಿ.ಡಿ.ಗಣಪತಿ ಉದ್ಘಾಟಿಸಿದರು.

ಎಂಎಎ(ಮಾ) ಟ್ರಸ್ಟ್ ಮುಖ್ಯಸ್ಥ ಡಾ.ಎಸ್.ಚಂದ್ರಶೇಖರ ಶೆಟ್ಟಿ, ಕಾರ್ಯದರ್ಶಿ ಡಾ.ಎಂ.ಎ.ಶೇಖರ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ಡೀನ್ ಮತ್ತು ನಿರ್ದೇಶಕ ಡಾ.ಹೆಚ್. ಎನ್.ದಿನೇಶ್, ಪ್ರಾಂಶುಪಾಲರಾದ ಡಾ. ಕೆ.ಆರ್.ದಾಕ್ಷಾಯಣಿ, ಎಂಎಎ(ಮಾ) ಅಧ್ಯಕ್ಷ ಡಾ.ಬಿ.ಎನ್.ಆನಂದ ರವಿ, ಕಾರ್ಯದರ್ಶಿ ಡಾ.ಮಾಲೇಗೌಡ, ಖಜಾಂಚಿ ಡಾ.ಹೆಚ್.ಬಿ.ಶಶಿಧರ್ ಮತ್ತಿತರರಿದ್ದರು.

ಜಿನ ಭಜನಾ ಸ್ಪರ್ಧೆಗೆ ಯದುವೀರ್ ಚಾಲನೆ



ಮೈಸೂರು, ಏ.9(ಎಸ್‌ಬಿಡಿ)– ಮೈಸೂರಿನಲ್ಲಿ ಮತ್ತೆ ಸಾಂಸ್ಕೃತಿಕ ವೈಭವ ಮೇಳೈಸಬೇಕು ಎಂದು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಆಶಯ ವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರದಲ್ಲಿ 'ಭಾರತೀಯ ಜೈನ್ ಮಿಲನ್ ವಲಯ 8'ರ ವತಿಯಿಂದ ಆಯೋಜಿಸಿರುವ 2 ದಿನಗಳ ಜಿನ ಭಜನಾ ಸ್ಪರ್ಧೆಗೆ ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, ಮೈಸೂರನ್ನು ಸಾಂಸ್ಕೃತಿಕ ನಗರವೆಂದು ಗುರುತಿಸಲಾಗುತ್ತದೆ. ಹಿಂದಿನಿಂದಲೂ ಕಲೆ, ಸಾಹಿತ್ಯ, ಸಂಗೀತ, ಕ್ರೀಡೆಗೆ ಇಲ್ಲಿ ಪ್ರೋತ್ಸಾಹ ಸಿಕ್ಕಿದೆ. ಆದರೆ ಬದಲಾದ ಕಾಲಘಟ್ಟದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಕಡಿಮೆಯಾಗುತ್ತಿವೆ. ಭಜನೆ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ಮರುಕಳಿಸಬೇಕಿದ್ದು, ಅರಮನೆ ಎಲ್ಲಾ ರೀತಿಯ ಸಹಕಾರ ನೀಡಲಿದೆ ಎಂದು ನುಡಿದರು.

ಚಾಮರಾಜನಗರ ಜಿಲ್ಲೆ ಕನಕಗಿರಿಯ ಭುವನಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ನವದೆಹಲಿಯ ಭಾರತೀಯ ಜೈನ್ ಮಿಲನ್‌ನ ಕಾರ್ಯಾಧ್ಯಕ್ಷರಾದ ಧರ್ಮಸ್ಥಳದ ಸುರೇಂದ್ರ ಕುಮಾರ್, ಉಪಾಧ್ಯಕ್ಷೆ ಅನಿತಾ ಸುರೇಂದ್ರ ಕುಮಾರ್, ಜೈನ್ ಮಿಲನ್ ವಲಯ 8ರ ಅಧ್ಯಕ್ಷರಾದ ಪುಷ್ಪರಾಜ್ ಜೈನ್, ಉಪಾಧ್ಯಕ್ಷೆ ಶೀಲಾ ಅನಂತರಾಜ್, ಭರತನಾಟ್ಯ ಕಲಾವಿದರಾದ ಶ್ರೀಧರ ಜೈನ್, ಸೌಮ್ಯಾ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕಾಗಿ ಕಲಾಮಂದಿರ ಆವರಣವನ್ನು ಅಲಂಕರಿಸಲಾಗಿತ್ತು. ಆಕರ್ಷಕ ವೇದಿಕೆಯನ್ನು ನಿರ್ಮಿಸಲಾಗಿತ್ತು. ಇದಕ್ಕೂ ಮುನ್ನ ಪೊಲೀಸ್ ಬ್ಯಾಂಡ್, ಪೂರ್ಣಕುಂಭ ಕಳಶ, ವಿವಿಧ ಕಲಾತಂಡಗಳೊಂದಿಗೆ ಸಾರೋಟಿನಲ್ಲಿ ಜಿನ ಮೂರ್ತಿಗಳ ಮೆರವಣಿಗೆ ಮಾಡಲಾಯಿತು. ಮೈಸೂರು, ಬೆಂಗಳೂರು, ಜಮಖಂಡಿ ಸೇರಿದಂತೆ ರಾಜ್ಯದ ವಿವಿಧ ವಿಭಾಗಗಳ 40ಕ್ಕೂ ಹೆಚ್ಚು ತಂಡಗಳು ಜಿನ ಭಜನೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು.

ಇಂದು ಶಿವಕುಮಾರ ಸ್ವಾಮೀಜಿ ಜಯಂತಿ ಆಚರಣೆ



ಮೈಸೂರು, ಏ.9– ಮೈಸೂರಿನ ಶ್ರೀ ಗುರು ಮಲ್ಲೇಶ್ವರ ಯುವಕರ ಬಳಗದ ವತಿಯಿಂದ ಬಸವೇಶ್ವರ ರಸ್ತೆ ಕುದೇರು ಮಠದ ಬಳಿ ಭಾನುವಾರ ಸಂಜೆ 6ಕ್ಕೆ 'ಶ್ರೀ ಶಿವಕುಮಾರ ಸ್ವಾಮೀಜಿಯವರ 115ನೇ ಜಯಂತ್ಯೋತ್ಸವ' ಹಮ್ಮಿಕೊಳ್ಳಲಾಗಿದೆ. ಶ್ರೀ ಗುರುಶಾಂತ ಮಹಾಸ್ವಾಮೀಜಿ, ಹೊಸಮಠದ ಶ್ರೀಗಳು, ಕುದೇರು ಮಠದ ಕಿರಿಯ ಶ್ರೀಗಳು, ದೇವನೂರು ಮಠ ಹುಲ್ಲಿನ ಬೀದಿ ಶಾಖಾ ಮಠದ ಶ್ರೀಗಳು, ಮಡಿವಾಳ ಮಠದ ಶ್ರೀಗಳ ಸಾನ್ನಿಧ್ಯದಲ್ಲಿ ಶ್ರೀ ಶಿವಪಾದ ಗುರುಸೇವಾ ನಂದಿಧ್ವಜ ಪೂಜೆ, ವೀರಭದ್ರ ಕುಣಿತ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಪ್ರಸಾದ ವಿನಿಯೋಗ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ತ್ಯಾಗರಾಜರ ಸಂಗೀತದೊಂದಿಗೆ ಹರಿದಾಸರ ಭಕ್ತಿಭಾವದ ಗಾನಸುಧೆ

ಬಿವಿಬಿ ಮೈಸೂರು ಕೇಂದ್ರದಲ್ಲಿ ಶ್ರೀ ತ್ಯಾಗರಾಜ ಹಾಗೂ ಹರಿದಾಸ ಆರಾಧನಾ ಮಹೋತ್ಸವ




ಮೈಸೂರಿನ ಬಿವಿಬಿ ಶಾಲೆಯ ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಬಿವಿಬಿ ಮೈಸೂರು ಕೇಂದ್ರ, ಕೇಂದ್ರದ ಸಾಂಸ್ಕೃತಿಕ ವಿಭಾಗ ಕಲಾಭಾರತಿ ಹಾಗೂ ಶಾಲೆ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶ್ರೀ ತ್ಯಾಗರಾಜ ಹಾಗೂ ಹರಿದಾಸ ಆರಾಧನಾ ಮಹೋತ್ಸವ ಉದ್ಘಾಟಿಸಲಾಯಿತು. (ಎಡದಿಂದ) ಬಿವಿಬಿ ಮೈಸೂರು ಕೇಂದ್ರದ ಸದಸ್ಯ ಮರೀಗೌಡ, ಉಪಾಧ್ಯಕ್ಷ ಡಾ.ಸಿ.ನಾಗಣ್ಣ, ಸಮಿತಿ ಸದಸ್ಯೆ ಡಾ.ತುಳಸಿ ರಾಮಚಂದ್ರ, ಸಂಗೀತ ಶಿಕ್ಷಕಿ ಸುಮಾ ಹರಿಂದ್ರ, ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷರಾದ ಕೆ.ಬಿ.ಗಣಪತಿ ಮತ್ತು ಅವರ ಪತ್ನಿ ಶ್ರೀಮತಿ ರ್‍ಯಾಲಿ ಗಣಪತಿ, ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಸ್ವರಸಂಕುಲ ಸಂಗೀತ ಶಾಲೆ ನಿರ್ದೇಶಕ ಪಂಡಿತ್ ವೀರಭದ್ರಯ್ಯ ಹಿರೇಮಠ್, ಬಿವಿಬಿ ಮೈಸೂರು ಕೇಂದ್ರದ ಖಜಾಂಚಿ ಪ್ರೊ.ಎ.ಟಿ.ಭಾಷ್ಯಂ, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ವಿಜಯ ನರಸಿಂಹಂ, ಆಡಳಿತಾಧಿಕಾರಿ ಸುಧೀಂದ್ರ ಚಿತ್ರದಲ್ಲಿದ್ದಾರೆ. ಮತ್ತೊಂದು ಚಿತ್ರದಲ್ಲಿ ವಿದ್ಯಾರ್ಥಿಗಳು ಸಂಗೀತ ಸಾದರಪಡಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಏ.9(ಪಿಎಂ)– ತ್ಯಾಗರಾಜರ ಸಂಗೀತ ಕೃತಿಗಳ ಸುಶ್ರಾವ್ಯ ಗಾಯನದೊಂದಿಗೆ ಹರಿದಾಸರ ದೇವರ ನಾಮಗಳ ಹಾಡುಗಾರಿಕೆಯು ಸಂಗೀತ ಸುಧೆಯ ನಾದಮಯ ಲೋಕವನ್ನು ಅನಾವರಣಗೊಳಿಸಿತು.

ಭಾರತೀಯ ವಿದ್ಯಾ ಭವನ (ಬಿವಿಬಿ) ಮೈಸೂರು ಕೇಂದ್ರ, ಕೇಂದ್ರದ ಸಾಂಸ್ಕೃತಿಕ ವಿಭಾಗವಾದ ಕಲಾಭಾರತಿ ಹಾಗೂ ಭಾರತೀಯ ವಿದ್ಯಾ ಭವನ ಶಾಲೆಯ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶ್ರೀತ್ಯಾಗರಾಜ ಹಾಗೂ ಹರಿದಾಸ ಆರಾಧನಾ ಮಹೋತ್ಸವದಲ್ಲಿ ಇಂತಹ ಸಂಗೀತ ಸಾಮ್ರಾಜ್ಯ ತಲೆ ಎತ್ತುವ ಮೂಲಕ ಸಭಿಕರನ್ನು ತಲೆದೂಗುವಂತೆ ಮಾಡಿತು.

ಮೈಸೂರಿನ ವಿಜಯನಗರದಲ್ಲಿರುವ ಬಿವಿಬಿಯ ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ನಡೆದ ಈ ಆರಾಧನಾ ಮಹೋತ್ಸವದಲ್ಲಿ ಸಂಗೀತದ ಸುಮಧುರ ಗಾಯನವು ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸಿತು. ಐದು ಘನರಾಗಗಳನ್ನು ಹೊಂದಿರುವ ತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿಗಾಯನವು ಶ್ರೋತೃಗಳನ್ನು ರಂಜಿಸಿ, ಭಕ್ತಿಭಾವ ಮೂಡಿಸಿತು.

ವಿದುಷಿ ಗಾಯತ್ರಿ ಸತ್ಯನಾರಾಯಣ ಅವರ ಶಿಷ್ಯವೃಂದ, ಸಂಗೀತ ಶಿಕ್ಷಕರು ಹಾಗೂ ಬಿವಿಬಿ ವಿದ್ಯಾರ್ಥಿಗಳು ಸಾದರಪಡಿಸಿದ ಈ ಗೋಷ್ಠಿಗಾಯನದಲ್ಲಿ ನಾದಸ್ವರ ಹೊರಹೊಮ್ಮಿ ಸಭಿಕರ ಮನ ಮೀಟಿತು. ಆ ಮೂಲಕ ಐದು ಘನ ರಾಗಗಳ ಗಾನ ಮೋಡಿಯು ಸಭಿಕರು ಮನಸೋಲುವಂತೆ ಮಾಡಿತು. ಕರ್ನಾಟಕ ಸಂಗೀತದ ಮುಖ್ಯ ರಚನಕಾರರಾಗಿ ಸಂಗೀತ ಸಾಮ್ರಾಜ್ಯ ಸೃಷ್ಟಿಸಿದ್ದ ತ್ಯಾಗರಾಜರ ಸಂಗೀತದ ಸ್ತುತಿ ಹೀಗೆ ಮುದ ನೀಡಿತು.

ಕನಕದಾಸರ ರಚನೆಯ 'ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ... ಬರಿದೇ ಮಾತೇಕಿನ್ನು ಅರಿತು ಪೇಳುವೆನಯ್ಯ...' ಗೀತೆಯನ್ನು ಸಾದರಪಡಿಸಿದ ಸುನೀತಾ ಹಿರೇಮಠ್, ಭಕ್ತಿಭಾವದ ಲೋಕದಲ್ಲಿ ಸಭಿಕರು ತೇಲುವಂತೆ ಮಾಡಿದರು. ಅವರ ಕಂಠಸಿರಿಯಲ್ಲಿ ಮೂಡಿಬಂದ ಸುಶ್ರಾವ್ಯ ಗಾಯನವು ಪ್ರೇಕ್ಷಕರ ಮನ ಮುಟ್ಟಿತು. ಹಾಡುಗಾರಿಕೆಗೆ ತಕ್ಕ ಅವರ ಹಾವಭಾವವೂ ಸಭಿಕರನ್ನು ಸೆಳೆದು ಗಾಯನ ಆಲಿಸುವಂತೆ ಮಾಡಿತು.

ದೇವರ ನಾಮದ ನೃತ್ಯ ಪ್ರಸ್ತುತಪಡಿಸಿದ ಕಲಾಭಾರತಿ ವಿಭಾಗದ ಭರತನಾಟ್ಯ ಶಿಕ್ಷಕಿ ವಿದುಷಿ ಮೇಘನಾ, ಭಕ್ತಿಯ ಹಾವಭಾವದ ನರ್ತನದಿಂದ ಸಭಿಕರಲ್ಲಿಯೂ ಭಕ್ತಿ ಪರಕಾಷ್ಠೆ ಮೂಡುವಂತೆ ಮಾಡಿದರು. ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿಗಳು ಹರಿದಾಸರ ದೇವರ ನಾಮಗಳ ಹಾಡುಗಾರಿಕೆ ಹಾಗೂ ತ್ಯಾಗರಾಜರ ಉತ್ಸವ ಸಂಪ್ರದಾಯ ಕೃತಿಗಳ ಗಾಯನ ಪ್ರಸ್ತುತಪಡಿಸಿ, ಈ ಸಂಗೀತದಲ್ಲಿರುವ ಭಕ್ತಿಯ ಸಿಂಚನ ಉಂಟು ಮಾಡಿದರು.

ಇದಕ್ಕೂ ಮುನ್ನ ಶ್ರೀ ಪುರಂದರ ದಾಸರ ಪಿಳ್ಳಾರಿ ಗೀತೆಗಳ ಗಾಯನವನ್ನು ಭಾರತೀಯ ವಿದ್ಯಾಭವನ ಶಾಲೆ ವಿದ್ಯಾರ್ಥಿಗಳು ಸಾದರಪಡಿಸಿದರು.

ಆ ಮೂಲಕ ಈ ಗೀತೆಗಳಲ್ಲಿ ಪುರಂದರದಾಸರು ಅಳವಡಿಸಿರುವ ರಾಗ, ಸ್ವರ, ಸಂಗೀತ ಮತ್ತು ಭಕ್ತಿಯನ್ನು ಅನಾವರಣಗೊಳಿಸಿ, ಸಭಿಕರು ಭಕ್ತಿಯ ಭಾವದೊಂದಿಗೆ ಸಂಗೀತದ ಸುಧೆಯಲ್ಲಿ ತೇಲುವಂತೆ ಮಾಡಿದರು.

ಇದೇ ವೇಳೆ ಮೈಸೂರಿನ ಸ್ವರಸಂಕುಲ ಸಂಗೀತ ಶಾಲೆಯ ನಿರ್ದೇಶಕ ಪಂಡಿತ್ ವೀರಭದ್ರಯ್ಯ ಹಿರೇಮಠ್ ಅವರನ್ನು ಸನ್ಮಾನಿಸಲಾಯಿತು. ಅವರ ಸಂಗೀತ ಸೇವೆಯನ್ನು ಗುರುತಿಸಿ, ಆತ್ಮೀಯವಾಗಿ ಅಭಿನಂದಿಸಲಾಯಿತು.


ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಶಂಕರಯ್ಯ ಮತ್ತು ಅನ್ನ ಪೂರ್ಣಮ್ಮ ದಂಪತಿ ಪುತ್ರರಾಗಿ 1960ರಲ್ಲಿ ಜನಿಸಿದ ವೀರಭದ್ರಯ್ಯ ಹಿರೇಮಠ್, ಹಿಂದುಸ್ತಾನಿ ಸಂಗೀತಕ್ಕೆ ನೀಡಿದ ಕೊಡುಗೆಯನ್ನು ನಿರೂಪಕರು ಪ್ರಕಟಪಡಿಸಿದರು.

ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪಂಡಿತ್ ವೀರಭದ್ರಯ್ಯ ಹಿರೇಮಠ್ ಅವರು, ಸನ್ಮಾನ ಸ್ವೀಕರಿಸಿರುವುದು ಸಂತೋಷ ತಂದಿದೆ. ಗುರುಕೃಪೆಯಿಂದ ಇಷ್ಟು ವರ್ಷಗಳ ಕಾಲ ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಸಾಧ್ಯವಾಗಿದೆ. ಗುರುಗಳು ನೀಡಿದ ವಿದ್ಯೆಯನ್ನು ನಾಲ್ಕಾರು ಜನಕ್ಕೆ ಪಸರಿಸಿದ ತೃಪ್ತಿ ಇದೆ. ಹಾಗಾಗಿ ಒಂದಿಷ್ಟು ಜನ ಶಿಷ್ಯರೂ ತಯಾರು ಆಗಿದ್ದಾರೆ. ನನ್ನ ಚಿಕ್ಕ ಸೇವೆ ಗುರುತಿಸಿ, ಗೌರವಿಸಿದ್ದಾರೆ. ಅದಕ್ಕಾಗಿ ಬಿವಿಬಿ ಮೈಸೂರು ಕೇಂದ್ರದ ಪದಾಧಿಕಾರಿಗಳಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದು ತಿಳಿಸಿದರು.

ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂಡಿತ್ ಡಾ.ಪುಟ್ಟರಾಜ ಗವಾಯಿಗಳ ಬಳಿ ಸುಮಾರು 12 ವರ್ಷಗಳ ಕಾಲ ಸಂಗೀತ ಅಭ್ಯಾಸ ಮಾಡಿದೆ. ಬಳಿಕ 1993ರಲ್ಲಿ ಮೈಸೂರಿಗೆ ಬಂದು ನೆಲೆಸಿದೆ. ಇಲ್ಲಿ ಸ್ವರಸಂಕುಲ ಹಿಂದುಸ್ತಾನಿ ಸಂಗೀತ ಶಾಲೆ ಸ್ಥಾಪಿಸಿ, ಈ ಭಾಗದಲ್ಲಿ ಹಿಂದೂಸ್ತಾನಿ ಸಂಗೀತ ಕಲಿಕೆ, ಪ್ರಚಾರಕ್ಕೆ ಒತ್ತು ನೀಡಿ ಕೆಲಸ ಮಾಡುತ್ತಿದ್ದೇನೆ. ಹಿಂದೂಸ್ತಾನಿ ಸಂಗೀತ ತಜ್ಞ ಡಾ.ಇಂದೂಧರ ನಿರೋಡಿ ಅವರ ಬಳಿ ಸಂಗೀತಾಭ್ಯಾಸ ಮುಂದುವರೆಸಿದ್ದೇನೆ ಎಂದು ಹೇಳಿದರು.

ಇದಕ್ಕೂ ಮುನ್ನ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರೂ ಆದ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಗಣಪತಿ ಅವರು ಉದ್ಘಾಟನೆ ನೆರವೇರಿಸಿ, ಅಧ್ಯಕ್ಷತೆ ವಹಿಸಿದ್ದರು. ಕೆ.ಬಿ.ಗಣಪತಿಯವರ ಪತ್ನಿ ಶ್ರೀಮತಿ ರ್‍ಯಾಲಿ ಗಣಪತಿ, ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಉಪಾಧ್ಯಕ್ಷ ಡಾ.ಸಿ.ನಾಗಣ್ಣ, ಖಜಾಂಚಿ ಪ್ರೊ.ಎ.ಟಿ.ಭಾಷ್ಯಂ, ಸಮಿತಿ ಸದಸ್ಯರಾದ ಮರೀಗೌಡ, ಡಾ.ತುಳಸೀರಾಮಚಂದ್ರ, ಆಡಳಿತಾಧಿಕಾರಿ ಸುಧೀಂದ್ರ, ಬಿವಿವಿ ಶಾಲೆ ಪ್ರಾಂಶುಪಾಲರಾದ ವಿಜಯನರಸಿಂಹಂ, ಸಂಗೀತ ಶಿಕ್ಷಕರಾದ ಸುಮಾ ಹರೀಂದ್ರ, ಜಯಶ್ರೀ ಮತ್ತಿತರರು ಹಾಜರಿದ್ದರು.

ಡಾ.ಭಾಷ್ಯಂ ಸ್ವಾಮೀಜಿ, ಪ್ರೊ.ಟಿ.ವಿ. ವೆಂಕಟಾಚಲಶಾಸ್ತ್ರಿ, ಗೊ.ರು.ಚೆನ್ನಬಸಪ್ಪರಿಗೆ 'ನಾಡೋಜ' ಪದವಿ


ಡಾ. ಭಾಷ್ಯಂ ಸ್ವಾಮೀಜಿ


ಪ್ರೊ.ವೆಂಕಟಾಚಲಶಾಸ್ತ್ರಿ


ಗೊ.ರು.ಚೆನ್ನಬಸಪ್ಪ

ಮೈಸೂರು, ಏ.9(ಆರ್‌ಕೆ)–ಮೈಸೂರಿನ ಖ್ಯಾತ ಸಂಸ್ಕೃತ ವಿದ್ವಾಂಸ, ಅಖಂಡ ಧಾರ್ಮಿಕ ಚಿಂತಕ ಹಾಗೂ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಮುಖ್ಯಸ್ಥರೂ ಆದ ಡಾ.ಭಾಷ್ಯಂ ಸ್ವಾಮೀಜಿ, ಸಾಹಿತಿ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ ಹಾಗೂ ಜಾನಪದ ವಿದ್ವಾಂಸ ಗೊ.ರು. ಚೆನ್ನಬಸಪ್ಪ ಅವರಿಗೆ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯವು 'ನಾಡೋಜ' ಗೌರವ ಪದವಿ ನೀಡಿದೆ. ಏ.12ರಂದು ಸಂಜೆ 5.30 ಗಂಟೆಗೆ ವಿದ್ಯಾರಣ್ಯ ಬಯಲು ರಂಗ ಮಂದಿರದಲ್ಲಿ ನಡೆಯಲಿರುವ ಕನ್ನಡ ವಿಶ್ವವಿದ್ಯಾನಿಲಯದ ನುಡಿಹಬ್ಬ ಘಟಿಕೋತ್ಸವ–30 ಸಮಾರಂಭದಲ್ಲಿ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಗಣ್ಯರಿಗೆ 'ನಾಡೋಜ' ಗೌರವ ಪದವಿ ಪ್ರದಾನ ಮಾಡುವರು. ಭಾಷ್ಯಂ ಸ್ವಾಮೀಜಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ಬೋಧಿಸಿದ್ದಾರೆ. ಧಾರ್ಮಿಕ ಚಿಂತಕರಾಗಿ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ದೈವೀ ಸಂಕಲ್ಪದೊಂದಿಗೆ ಲಕ್ಷಾಂತರ ಭಕ್ತರಿಗೆ ಸನ್ಮಾರ್ಗ ಬೋಧಿಸುತ್ತ ಬಂದಿದ್ದಾರೆ. ಹಾಗೆಯೇ ಪ್ರೊ. ವೆಂಕಟಾಚಲಶಾಸ್ತ್ರಿಗಳು ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ.

ಆರಗ ಜ್ಞಾನೇಂದ್ರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ

ಕಾಂಗ್ರೆಸ್ ನಿಯೋಗದಿಂದ ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಕೆ



ಮೈಸೂರು,ಏ.9(ಪಿಎಂ)–ಹತ್ಯೆ ಪ್ರಕರಣವೊಂದರ ಸಂಬಂಧ ಗೃಹ ಸಚಿವ ಆರಗ ಜ್ಞಾನೇಂದ್ರ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಕೋಮು ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ, ಈ ಸಂಬಂಧ ಇಬ್ಬರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಜಿಲ್ಲಾ ಕಾಂಗ್ರೆಸ್ ಸಮಿತಿ, ಕಾಂಗ್ರೆಸ್‌ನ ಕಾನೂನು ಘಟಕದ ನಿಯೋಗದ ವತಿಯಿಂದ ಶನಿವಾರ ದೂರು ಸಲ್ಲಿಸಲಾಯಿತು.

ಮೈಸೂರಿನ ನಗರ ಪೊಲೀಸ್ ಆಯುಕ್ತರ ಕಚೇರಿಗೆ ಭೇಟಿ ನೀಡಿದ ನಿಯೋಗವು, ನಗರ ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ಪ್ರದೀಪ್ ಗುಂಟಿ ಅವರ ಮೂಲಕ ಆಯುಕ್ತರಿಗೆ ದೂರು ಸಲ್ಲಿಸಿತು.

ಬೆಂಗಳೂರಿನ ಜೆಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಚಂದ್ರು ಎಂಬ ಯುವಕನ ಹತ್ಯೆ ಪ್ರಕರಣ ಸಂಬಂಧ ಉರ್ದು ಭಾಷೆ ಮಾತನಾಡಲು ಬಾರದ ಕಾರಣಕ್ಕೆ ಹತ್ಯೆ ಮಾಡಲಾಗಿದೆ ಎಂಬ ಹೇಳಿಕೆಯನ್ನು ಸಚಿವ ಆರಗ ಜ್ಞಾನೇಂದ್ರ ನೀಡಿದ್ದರು. ಇದಕ್ಕೆ ಪೂರಕವಾಗಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಕೂಡ ಹೇಳಿಕೆ ನೀಡಿದ್ದಾರೆ. ಆ ಮೂಲಕ ಈ ಇಬ್ಬರು ಕೋಮು ಗಲಭೆಗೆ ಪ್ರಚೋದನೆ ನೀಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ರಾಜ್ಯದಲ್ಲಿ ಅಶಾಂತಿ ಸೃಷ್ಟಿಸಲು ಹೀಗೆ ಪ್ರಚೋದನೆ ನೀಡುವ ಹೇಳಿಕೆ ನೀಡಿದ್ದಾರೆ. ತನಿಖೆಯ ಮೇಲೆ ಪ್ರಭಾವ ಬೀರುವ ಹೇಳಿಕೆ ನೀಡಿ ಗೃಹ ಸಚಿವರು ರಾಜ್ಯದ ಜನತೆಯಲ್ಲಿ ಗೊಂದಲ ಮೂಡಿಸಿದರೆ, ಅದಕ್ಕೆ ಪೂರಕವಾಗಿ ಕೋಮು ಗಲಭೆ ಮತ್ತು ಭಾಷಾ ಸಂಘರ್ಷಕ್ಕೆ ಕಾರಣವಾಗುವಂತೆ ಸಿ.ಟಿ.ರವಿ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಗಳ ಹಿಂದೆ ಗುಂಪು ಗುಂಪುಗಳು ಮಧ್ಯೆ, ಭಾಷೆಗಳ ಮಧ್ಯೆ, ಧರ್ಮಗಳ ನಡುವೆ ದ್ವೇಷ ಹುಟ್ಟಿಸಿ, ಕಾನೂನು–ಸುವ್ಯವಸ್ಥೆಗೆ ಧಕ್ಕೆ ತರುವ ಉದ್ದೇಶವಿದೆ.

ಆಗರ ಜ್ಞಾನೇಂದ್ರ ಹಾಗೂ ಸಿ.ಟಿ.ರವಿ ಅವರು ಅಪರಾಧಿಕ ಒಳಸಂಚು ನಡೆಸಿ, ನೀಡಿದ ಈ ಹೇಳಿಕೆಗಳು, ಸಮಾಜ ಶಾಂತಿ ಕದಡಲು ಪ್ರೇರಣೆ ನೀಡುವಂತೆ ಇರುವ ಕಾರಣ ಇದು ದೇಶದ್ರೋಹದ ಕೃತ್ಯವಾಗಿದೆ. ವೈಯಕ್ತಿಕ ರಾಜಕೀಯ ಲಾಭಕ್ಕಾಗಿ ಈ ರೀತಿ ಹೇಳಿಕೆಗಳನ್ನು ನೀಡುವ ಮೂಲಕ ಸಮಾಜದ ಶಾಂತಿ, ಸೌಹಾರ್ದತೆಗೆ ಭಂಗ ತರುವ ಉದ್ದೇಶವಿರುವುದು ಕಂಡುಬರುತ್ತದೆ.

ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟು ಮಾಡುವ ಮೂಲಕ ಕೋಮು ಗಲಭೆಗಳಿಗೆ ಉತ್ತೇಜನ ನೀಡಿ, ಸಾರ್ವಜನಿಕ ಆಸ್ತಿಪಾಸ್ತಿ ಮತ್ತು ಜೀವಕ್ಕೆ ಹಾನಿ ಮಾಡಲು ಪ್ರಚೋದನೆ ನೀಡಿದ ಆರೋಪದಡಿ ಇವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಕೋರಲಾಗಿದೆ. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕಾನೂನು ಘಟಕದ ಅಧ್ಯಕ್ಷ ಪಾಳ್ಯಸುರೇಶ್ ಸೇರಿದಂತೆ ಇನ್ನಿತರ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಉಚಿತ 'ಕ್ರ್ಯಾಷ್ ಕೋರ್ಸ್' ತರಗತಿ

ಮೈಸೂರು,ಏ.9(ಎಂಟಿವೈ)– ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 9ನೇ ತರಗತಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಇಂದಿನಿಂದ(ಏ.9) 45 ದಿನಗಳ ಉಚಿತ 'ಕ್ರ್ಯಾಷ್ ಕೋರ್ಸ್' ತರಗತಿ ಆರಂಭಿಸಲಾಗಿದೆ ಎಂದು ನಿವೃತ್ತ ಪ್ರಾಂಶುಪಾಲ ಡಾ.ಹೊನ್ನಯ್ಯ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ 'ಕ್ರ್ಯಾಷ್ ಕೋರ್ಸ್'ನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಸಮಾಜಶಾಸ್ತ್ರ ವಿಜ್ಞಾನ, ಗಣಿತ, ಇಂಗ್ಲಿಷ್, ಕನ್ನಡ ಹಾಗೂ ಇಂಗ್ಲಿಷ್ ವಿಷಯಗಳ ಬಗ್ಗೆ ಪ್ರತಿದಿನ ಬೆಳಗ್ಗೆ 9ರಿಂದ ಸಂಜೆ 5ರವರೆಗೆ ವಿಶೇಷ ತರಗತಿ ನಡೆಸಿ ಮಕ್ಕಳಿಗೆ ಬೋಧಿಸಲಾಗುತ್ತದೆ. ಈ ವೇಳೆ ಎನ್‌ಟಿಎಸ್‌ಇ ಪರೀಕ್ಷೆ, ವೃತ್ತಿ ಮಾರ್ಗದರ್ಶನ, ಪ್ರವೇಶ ಪರೀಕ್ಷೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ಕುರಿತ ಅಗತ್ಯ ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಗುವುದು. ಈ ಕೋರ್ಸ್ ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳಿಗೆ ಉಪಯೋಗವಾಗಲಿದೆ. ಆಸಕ್ತರು ದೂ. 99640 29817 ಸಂಪರ್ಕಿಸುವಂತೆ ಕೋರಿದರು. ಗೋಷ್ಠಿಯಲ್ಲಿ ಟ್ರಸ್ಟ್ ಆಡಳಿತಾಧಿಕಾರಿ ಪುಟ್ಟಸ್ವಾಮಿ, ಶಿವಕುಮಾರ್, ಶಿವಶಂಕರ್ ಇದ್ದರು.

ಮೀನಾ ಬಜಾರ್‌ನಲ್ಲಿ ರಾಮನವಮಿ ಪ್ರಯುಕ್ತ ಪಾನಕ, ಮಜ್ಜಿಗೆ ವಿತರಣೆ

ಮೈಸೂರು,ಏ.9(ಎಂಟಿವೈ)– ಕೋಮು ಸೌಹಾರ್ದತೆಗಾಗಿ ಮೈಸೂರಿನ ಮೀನಾ ಬಜಾರ್ ಸಮೀಪದ ಮಸೀದಿ ಬಳಿ ನಾಳೆ(ಏ.10) ಸಂಜೆ 4.30ಕ್ಕೆ ರಾಮನವಮಿ ಪ್ರಯುಕ್ತ ಪಾನಕ, ಮಜ್ಜಿಗೆ ವಿತರಿಸುವುದಾಗಿ ರಾಷ್ಟ್ರೀಯ ಹಿಂದು ಸಮಿತಿ ಮುಖಂಡ ವಿಕಾಸ್ ಶಾಸ್ತ್ರಿ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ಸುಜೀವ್ ವೆಲ್ಫೇರ್ ಫೌಂಡೇಷನ್ ಹಾಗೂ ರಾಷ್ಟ್ರೀಯ ಹಿಂದು ಸಮಿತಿ ವತಿಯಿಂದ ಕೋಮು ಸೌಹಾ ರ್ದತೆಗಾಗಿ ರಾಮನವಮಿ ಆಚರಿಸಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಕೋಮು ಸೌಹಾರ್ದತೆ ಕದಡುವ ನಿಟ್ಟಿನಲ್ಲಿ ಸಂಚು ನಡೆಯುತ್ತಿದೆ. ಕೆಲ ಘಟನೆಗಳಿಂದ ಇಡೀ ಮುಸ್ಲಿಂ ಸಮುದಾಯವನ್ನು ದೂರುವುದು ಸರಿಯಲ್ಲ. ಹೀಗಾಗಿ ಸಮಾನತೆ ಸಾರಲೆಂದು ಸರ್ವಧರ್ಮಗಳ ಮುಖಂಡರೊಂದಿಗೆ ಆಹ್ವಾನಿಸಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ವೇಳೆ ಮುಸ್ಲಿಂ ಮುಖಂಡರು ರಾಮನ ವರ್ಣಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ ಎಂದರು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿಯ ಶ್ರೀರಾಮನ ದೇವಾಲಯ ಶಿಥಿಲಗೊಂಡಿತ್ತು. ಅಲ್ಲದೆ, ಪೂಜೆಯೂ ಸ್ಥಗಿತಗೊಂಡಿತ್ತು. ಇದರಿಂದ ಅರ್ಚಕರಿಗೆ ಬರುತ್ತಿದ್ದ ಸಂಭಾವನೆ ಸ್ಥಗಿತಗೊಂಡಿದೆ. ರಾಷ್ಟ್ರೀಯ ಹಿಂದು ಸಮಿತಿ ಮನವಿ ಮೇರೆಗೆ ಕೆಲ ಮುಸ್ಲಿಮರೂ ಸೇರಿದಂತೆ ಹಲವರು ದೇವಾಲಯದ ಪುನಶ್ಚೇತನಕ್ಕೆ ನೆರವು ನೀಡಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಸದಸ್ಯರಾದ ಪ್ರದೀಪ್, ಸುನಿಲ್, ತೇಜಸ್, ಗಗನ್ ಉಪಸ್ಥಿತರಿದ್ದರು.

ಪ್ರಚಾರಕ್ಕಾಗಿ ಸಂಸದ ಪ್ರತಾಪ್ ಸಿಂಹ ಮನೆ ಮುಂದೆ ಪ್ರತಿಭಟನೆ

ಬಿಜೆಪಿ ಎಸ್‌ಸಿ ಮೋರ್ಚಾ ಆರೋಪ

ಮೈಸೂರು,ಏ.9(ಎಂಟಿವೈ)– ಸಂಸದ ಪ್ರತಾಪಸಿಂಹ ವಿರುದ್ಧ ಪ್ರತಿಭಟನೆ ನಡೆಸುವ ಮೂಲಕ ದಲಿತ ಮುಖಂಡ ಚೋರನಹಳ್ಳಿ ಶಿವಣ್ಣ ಪ್ರಚಾರ ಪಡೆದುಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ನಗರ ಜಿಲ್ಲಾ ಘಟಕದ ಪ್ರದಾನ ಕಾರ್ಯದರ್ಶಿ ಎಂ.ನರಸಿಂಹಮೂರ್ತಿ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಚಾರದ ಗೀಳಿನಿಂದ ಹಾಗೂ ಎಲ್ಲರ ಗಮನ ಸೆಳೆಯುವುದರಿಂದ ದಲಿತ ಮುಖಂಡ ಚೋರನಹಳ್ಳಿ ಶಿವಣ್ಣ, ಸಂಸದ ಪ್ರತಾಪ ಸಿಂಹ ಅವರ ಮನೆ ಬಳಿ ಗುಜರಿ ವಸ್ತು ಸುರಿದು ಪ್ರತಿಭಟನೆ ನಡೆಸಿದ್ದರು ಎಂದರು. ಖ್ಯಾತ ವಿಮರ್ಶಕರೂ ಅವರು ಜನರ ಮೇಲಿನ ಕಾಳಜಿಯಿಂದ ಪ್ರತಿಭಟನೆ ನಡೆಸಿಲ್ಲ. ಸಂಸದರಾದ ಬಳಿಕ ಪ್ರತಾಪ್‌ಸಿಂಹ ಅವರು ಎರಡೂ ಜಿಲ್ಲೆಗೆ ಹಲವಾರು ಯೋಜನೆ ತಂದಿದ್ದಾರೆ. ಬಿಜೆಪಿ ದಲಿತರ ಏಳಿಗೆಗಾಗಿ ಹಲವಾರು ಕಾರ್ಯಕ್ರಮ ಜಾರಿಗೊಳಿಸಿದೆ. ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಡಾ.ಅಂಬೇಡ್ಕರ್ ಭವನಕ್ಕೆ ಕಳೆದ ಸಂಪುಟ ಸಭೆಯಲ್ಲಿ 16 ಕೋಟಿ ರೂ., ಹೆಚ್ಚುವರಿಯಾಗಿ ನೀಡಲು ಅನುಮೋದನೆ ನೀಡಲಾಗಿದೆ. ಹೀಗಿದ್ದರೂ ಚೋರನಹಳ್ಳಿ ಶಿವಣ್ಣ ಅವರು ಬಿಜೆಪಿ ಹಾಗೂ ಸಂಸದರ ವಿರುದ್ಧ ವೃಥಾ ಆರೋಪ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್‌ಸಿ ಮೋರ್ಚಾ ನಗರ ಘಟಕದ ಸದಸ್ಯರಾದ ಪಿ. ಸತೀಶ್, ಜಯಕುಮಾರ್, ಅಂದಾನಪ್ಪ, ಶಾಂತರಾಜು ಉಪಸ್ಥಿತರಿದ್ದರು.

ಪ್ರೊ. ಪಿ.ವಿ.ನಂಜರಾಜ ಅರಸ್ ಅವರ 'ಟೀಪೂ ಮಾನ್ಯತೆ ಸಿಗದ ಸುಲ್ತಾನ್' ಕೃತಿ ಬಿಡುಗಡೆ

ಭಾವನಾತ್ಮಕ ವಿಚಾರ ಬಿಡಿ, ಬದುಕಿನ ವಿಚಾರಗಳನ್ನು ಮುನ್ನೆಲೆಗೆ ತಂದು ಸಾಮರಸ್ಯ ಮೂಡಿಸಿ: ನಾಗಮೋಹನ್‌ದಾಸ್



ಮೈಸೂರು,ಏ.9(ಎಂಟಿವೈ)–ಭಾವನಾತ್ಮಕ ವಿಚಾರಗಳನ್ನು ಬದಿಗೆ ಸರಿಸಿ ಬದುಕಿನ ವಿಚಾರಗಳನ್ನು ಮುನ್ನೆಲೆಗೆ ತಂದು ಸಾಮರಸ್ಯ ಮೂಡಿಸಬೇಕಾಗಿದೆ ಎಂದು ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಹೆಚ್.ಎಸ್.ನಾಗಮೋಹನ್ ದಾಸ್ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಬಿಎಂಶ್ರೀ ಸಭಾಂಗಣದಲ್ಲಿ ಅಭಿರುಚಿ ಪ್ರಕಾಶನ, ಭಾರತೀಯ ವಿದ್ಯಾರ್ಥಿ ಸಂಘದ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಪ್ರೊ.ಪಿ.ವಿ.ನಂಜರಾಜ ಅರಸ್ ಅವರ 'ಟೀಪೂ ಮಾನ್ಯತೆ ಸಿಗದ ಸುಲ್ತಾನ್' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಾವನಾತ್ಮಕ ಸಂಗತಿಗಳಾದ ಭಗವದ್ಗೀತೆ ರಾಷ್ಟ್ರೀಯ ಗ್ರಂಥ, ಘರ್ ವಾಪಸಿ, ದನದ ಮಾಂಸ, ಲವ್ ಜಿಹಾದ್, ಹಲಾಲ್, ಅಜಾನ್ ಇವುಗಳು ಮುನ್ನೆಲೆಗೆ ಬಂದಿವೆ. ಆದರೆ, ಬದುಕಿಗೆ ಬೇಕಾಗಿರುವ ಅನ್ನ, ಅಕ್ಷರ, ಆರೋಗ್ಯ, ಉದ್ಯೋಗ ಸಂಗತಿಗಳ ಬಗ್ಗೆ ಯಾರೂ ಮಾತಾಡುತ್ತಿಲ್ಲ. ಜಾತಿ, ಧರ್ಮದ ಹೆಸರಿನಲ್ಲಿ ಸಮಾಜವನ್ನು ವಿಭಜಿಸುತ್ತಿದ್ದರೆ ಭಾವೈಕ್ಯತೆ ಕಳೆದುಕೊಂಡು ಭಾರತ ನುಚ್ಚು ನೂರಾಗುತ್ತೆ. ಚುನಾವಣೆಯಲ್ಲಿ ಜಾತಿ, ಧರ್ಮ, ಹಣದ ಪ್ರಭಾವ ವ್ಯಾಪಕವಾಗುತ್ತಿದೆ. ಭ್ರಷ್ಟಾಚಾರಿಗಳು, ಅಪರಾಧಿಗಳು ರಾಜಕೀಯಕ್ಕೆ ಬರುತ್ತಿದ್ದಾರೆ. ರಾಜಕಾರಣಕ್ಕೆ ಧರ್ಮವನ್ನು ಬೆರೆಸುವುದನ್ನು ವಿರೋಧಿಸಬೇಕು ಎಂದು ತಿಳಿ ಹೇಳಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶಚಂದ್ರ ಗುರು ಕೃತಿ ಕುರಿತು ಮಾತನಾಡಿ, ಟಿಪ್ಪು ಸುಲ್ತಾನ್ ತಂದೆ ಹೈದರ್ ಆಲಿ ಮೈಸೂರು ಸಂಸ್ಥಾನವನ್ನು ದಕ್ಷಿಣ ಭಾರತದವರೆಗೂ ವಿಸ್ತರಿಸಿದರು. ತಾನು ಅವಿದ್ಯಾವಂತರಾಗಿದ್ದರೂ ಟಿಪ್ಪು ಸುಲ್ತಾನ್‌ನನ್ನು ಮಹಾನ್ ಜ್ಞಾನಿಯನ್ನಾಗಿ ಮಾಡಿದರು. ಪ್ರಜೆಗಳಿಗೆ ಅನ್ಯಾಯ ಮಾಡುವ ಒಂದೇ ಒಂದು ಕೆಲಸ ಮಾಡಬೇಡ ಎಂದು ಪತ್ರ ಬರೆದಿದ್ದರು. ಬ್ರಿಟಿಷ್ ವಸಾಹತು ಶಾಹಿ ವಿರುದ್ಧ ಪ್ರಬಲವಾದ ಮೈತ್ರಿಕೂಟವನ್ನು ಕಟ್ಟಿದ್ದರು. ಹೈದರಾಬಾದ್ ನಿಜಾಮರು, ಮರಾಠರಿಗೆ ಇಂತಹ ದೇಶ ಪ್ರೇಮ ಇರಲಿಲ್ಲ ಎಂದು ಹೇಳಿದರು.

ಇದರಿಂದಾಗಿ ಬ್ರಿಟಿಷ್ ಸಾಮ್ರಾಜ್ಯ ಪ್ರಬಲ ಶಕ್ತಿಯಾಗಿ ರೂಪುಗೊಳ್ಳಲು ಕಾರಣವಾಯಿತು. ಶಿವಾಜಿ ಮಹಾರಾಜರಿಗೆ ಪಟ್ಟಾಭಿಷೇಕ ಸಂದರ್ಭದಲ್ಲಿ ಶಿವಾಜಿ ಶೂದ್ರ ಅನ್ನುವ ಕಾರಣದಿಂದಾಗಿ ಅಲ್ಲಿದ್ದ ಬ್ರಾಹ್ಮಣ ಪೂಜಾರಿ ಎಡಗಾಲಿನಿಂದ ಶಿವಾಜಿಗೆ ತಿಲಕ ಇಟ್ಟಿದ್ದರು. ಇಂತಹ ಪರಿಸ್ಥಿತಿ ನಮಗೆ ಬೇಕಿತ್ತಾ?. ಇದನ್ನು ಏನಾದರೂ ಟಿಪ್ಪು ಸುಲ್ತಾನ್ ನೋಡಿದ್ದರೆ ತಕ್ಕ ಶಾಸ್ತಿ ಮಾಡುತ್ತಿದ್ದ. ಮೈಸೂರು ಅರಸರೊಂದಿಗೆ ಹೈದರ್ ಹಾಗೂ ಟಿಪ್ಪು ಸುಲ್ತಾನ್ ಉತ್ತಮ ಸಂಬಂಧ ಹೊಂದಿದ್ದರು. ಆದರೆ, ಮೈಸೂರು ಮಹಾರಾಜರು ಶಕ್ತಿ ರಾಜಕಾರಣಕ್ಕಾಗಿ ರಾಜಿ ಮಾಡಿಕೊಂಡಿದ್ದೇ ಹೆಚ್ಚು. ಹೋರಾಟ ಮಾಡಲಿಲ್ಲ. ಇದನ್ನು ನಾನು ಹೇಳಲು ಅಂಜುವುದಿಲ್ಲ ಎಂದರು.

ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ.ಶಿವರಾಂ ಮಾತನಾಡಿ, ವಿವಾದಗಳು ರಾಮಜ್ಯೋತಿ, ರಾಮನ ಇಟ್ಟಿಗೆ, ಹಿಜಾಬ್‌ನಿಂದ ಮಾವಿನ ಹಣ್ಣಿನವರೆಗೂ ಬಂದಿದೆ. ಮುಂದಿನ ದಿನಗಳಲ್ಲಿ ಸೆಕ್ಯುರಿಟಿ ಪರ್ಸ್‌ನಿಂದ ಮಾಲ್ ಹಾಗೂ ರಸ್ತೆಯಲ್ಲಿ ಮುಸ್ಲಿಂ ಹೆಣ್ಣು ಮಕ್ಕಳು ತಿರುಗಾಡಬಾರದು ಎಂದರೂ ಆಶ್ಚರ್ಯವಿಲ್ಲ. ಮುಂದೆ ರಾಷ್ಟ್ರದ್ರೋಹಿ ಎಂದು ಗಡಿಪಾರು ಮಾಡುವ ಸ್ಥಿತಿಯೂ ಬರುತ್ತದೆ. ಸಮಾನತೆ, ಸಹಬಾಳ್ವೆ, ಏಕ ಸಂಸ್ಕೃತಿ ಬೆಂಬಲಿಸುವ ಸಂವಿಧಾನ ನಮ್ಮದಾಗಿದೆ. ನಮ್ಮ ಮುಂದಿನ ಜನಾಂಗ ಬಹಳ ನೋವು ಅನುಭವಿಸಬೇಕಾಗುತ್ತದೆ. ತಟ್ಟೆಗೆ, ಗಂಟೆಗೆ ಎಲ್ಲಿ ಅಡ್ಡ ಬಂದು ಬಿಡುತ್ತವೋ ಎಂದು ಜಾತಿ ವ್ಯವಸ್ಥೆ ನಿರ್ಮೂಲನೆ ಮಾಡುವುದಿಲ್ಲ. ಮೀಸಲಾತಿ ಭಿಕ್ಷೆ ಅಲ್ಲ. ಮೀಸಲಾತಿ ನಮಗೆ ಸಂವಿಧಾನ ನೀಡಿರುವ ಹಕ್ಕು. ಮೀಸಲಾತಿಯನ್ನು ಖಾಸಗೀಕರಣ ಮೂಲಕ ಬಹಳ ವ್ಯವಸ್ಥಿತವಾಗಿ ನಿರ್ಮಿಸಲಾಗುತ್ತಿದೆ ಎಂದು ಆರೋಪಿಸಿದರು.

ಕಾರ್ಯಕ್ರಮದಲ್ಲಿ ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ್, ಲೇಖಕ ಪ್ರೊ. ನಂಜರಾಜ ಅರಸ್, ಭಾರತೀಯ ಪರಿವರ್ತನ ಸಂಘ ಜಿಲ್ಲಾ ಸಂಚಾಲಕ ಸೋಸಲೆ ಸಿದ್ದರಾಜು, ಪ್ರಕಾಶಕ ಅಭಿರುಚಿ ಗಣೇಶ್ ಉಪಸ್ಥಿತರಿದ್ದರು.

ಟಿಪ್ಪುವನ್ನು ಹಾಡಿ ಹೊಗಳಿದ ಎ.ಹೆಚ್.ವಿಶ್ವನಾಥ್

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಿಜೆಪಿಯ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಟಿಪ್ಪು ಸುಲ್ತಾನ್‌ನನ್ನು ಹಾಡಿ ಹೊಗಳಿದ್ದಾರೆ. ಬಿಜೆಪಿ ಒಂದು ಕಡೆ ಟಿಪ್ಪು ಸುಲ್ತಾನ್‌ನನ್ನು ವಿರೋಧಿಸುತ್ತಿದ್ದರೆ, ಬಿಜೆಪಿಯಿಂದಲೇ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾಗಿರುವ ವಿಶ್ವನಾಥ್ ಮಾತ್ರ ಟಿಪ್ಪು ಬೆಂಬಲಿಸಿ ಎಲ್ಲರೂ ಹುಬ್ಬೇರಿಸುವಂತೆ ಮಾಡಿದ್ದಾರೆ. ಸಮಾರಂಭದಲ್ಲಿ ಮಾತನಾಡಿದ ಅವರು, ನಂಜರಾಜ ಅರಸ್ ಅವರು **ಟೀಪೂ ಮಾನ್ಯತೆ ಸಿಗದ ಸುಲ್ತಾನ್** ಎಂಬ ಕೃತಿ ರಚಿಸಿದ್ದಾರೆ. ಆದರೆ, ಟಿಪ್ಪು ಜಗತ್ತಿನ ಮಾನ್ಯತೆಗೆ ಒಳಗಾದ ಚಕ್ರವರ್ತಿ. ಸೂರ್ಯನ ಪ್ರಕಾಶಕ್ಕೆ ಪರದೆ ಎಳೆಯಲು ಸಾಧ್ಯವೇ? ಆಗುವುದಿಲ್ಲ. ಕಾಮಾಲೆ, ಮತಾಂಧ ಪೊರೆ ಕಳಚಿ ಟಿಪ್ಪು ಸುಲ್ತಾನ್ ಅನ್ನು ಶುದ್ಧ ಶ್ವೇತ ಕಣ್ಣುಗಳಿಂದ ನೋಡಬೇಕಿದೆ. ಟಿಪ್ಪು ನಾಡಿನ ಮಣ್ಣಿನ ಮಗ. ಇಲ್ಲ ಎಂದು ಹೇಳಲು ಸಾಧ್ಯವೇ? ಚರಿತ್ರೆ ಸುಳ್ಳಾಗಿಸಲು ಸಾಧ್ಯವೇ? 250 ವರ್ಷಗಳ ಹಿಂದೆ ಕೊಡಗಿನಲ್ಲಿ 80 ಸಾವಿರ ಜನರನ್ನು ಟಿಪ್ಪು ಕೊಲೆ ಮಾಡಿದ್ದಾನೆ ಎನ್ನುತ್ತಾರೆ. ಆಗ ಅಷ್ಟು ಜನರಿದ್ದರೇ? ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳಬೇಕು ಎಂದರು.

ಟಿಪ್ಪು ಸುಲ್ತಾನ್ ಯಾರಿಗೂ ತಲೆಬಾಗಲಿಲ್ಲ. ಮಂಡಿಯೂರಲಿಲ್ಲ. ಪಠ್ಯದಿಂದ ಟಿಪ್ಪು ಚರಿತ್ರೆ ತೆಗೆದ ಮಾತ್ರಕ್ಕೆ ಭಾರತೀಯರ ಹೃದಯ ಸಾಮ್ರಾಜ್ಯದಲ್ಲಿರುವ ಟಿಪ್ಪು ಮರೆಯಾಗುವನೇ? ಟಿಪ್ಪು ಮುಸ್ಲಿಂನಾಗಿ ಹುಟ್ಟಿದ ರಾಷ್ಟ್ರೀಯನಾಗಿ ಬದುಕಿ ಭಾರತಕ್ಕೆ ಗೌರವ ತಂದುಕೊಟ್ಟ, ಇದನ್ನು ಸುಳ್ಳು ಅನ್ನಲಾಗದು ಎಂದರು.

"ಜಗತ್ತಿನಲ್ಲಿ ಅನೇಕ ಕ್ರಾಂತಿ ನಡೆದಿದೆ. ಅವುಗಳು ಒಂದಲ್ಲಾ ಒಂದು ರೀತಿಯಲ್ಲಿ ಬದಲಾವಣೆ ತಂದಿದೆ. ಆದರೆ, ಪುಸ್ತಕಗಳು ಬಹಳಷ್ಟು ರೀತಿಯಲ್ಲಿ ಬದಲಾವಣೆ ತಂದಿದೆ. ಎಲ್ಲರೂ ಪುಸ್ತಕ ಸಂಸ್ಕೃತಿ ಬೆಳೆಸಿಕೊಳ್ಳಬೇಕು. ಶೂನ್ಯದಲ್ಲಿ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ. ಕ್ರಿಯಾಶೀಲತೆ ಕಸರತ್ತಿನಲ್ಲಿ ಬೆಂಕಿಯೂ ಬರಬಹುದು, ಬೆಳಕೂ ಬರಬಹುದು. ಆದರೆ ಬೆಳಕು ಬರುವಂತೆ ನಾವು ಪುಸ್ತಕ ಪ್ರಕಾಶನ ಮಾಡಬೇಕು. ಅಂತೆಯೇ ನಂಜರಾಜ ಅರಸು ಈ ಕೆಲಸ ಮಾಡಿದ್ದಾರೆ. ಈ ಸಮಾಜದಲ್ಲಿ ಟಿಪ್ಪು ಸುಲ್ತಾನ್ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಚುನಾವಣೆಯಲ್ಲಿ ಜಾತಿ, ಧರ್ಮ, ಹಣದ ಪ್ರಭಾವ ವ್ಯಾಪಕವಾಗುತ್ತಿದೆ. ಈ ಪ್ರಜಾಪ್ರಭುತ್ವದಲ್ಲಿ ಕೋಮುವಾದ, ಸರ್ವಾಧಿಕಾರ ಗೆಲ್ಲುತ್ತದೆ. ಉದ್ಯೋಗ, ಹಸಿವು, ಕಾರ್ಮಿಕರ ಸಮಸ್ಯೆ, ಬಡತನ ನಿರ್ಮೂಲನ ಮಾಡುವ ಯಾವುದೂ ಬರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಯುವಕರು ಬಲಿಯಾಗುತ್ತಿದ್ದಾರೆ. ಸಮಾಜಕ್ಕೆ ಒಂದು ಸರಿಯಾದ ದಿಕ್ಕನ್ನು ನಾವು ತೋರಿಸಬೇಕಿದೆ. ಈ ದೇಶದ ಭಾವೈಕ್ಯತೆ ನಾಶ ಆಗುತ್ತದೆ. ಇದರಿಂದಾಗಿ ಭಾರತ ನುಚ್ಚು ನೂರು ಆಗುತ್ತದೆ. ಈ ಕತ್ತಲಿನಿಂದ ಹೊರಬರಬೇಕು.

–ಹೆಚ್.ಎಸ್.ನಾಗಮೋಹನ್ ದಾಸ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ.

ಮೈಸೂರು ಮಿತ್ರ ಭಾನುವಾರ 10 ಏಪ್ರಿಲ್ 2022

ಕರ್ನಾಟಕ ಹಕ್ಕಿ ಹಬ್ಬದಲ್ಲಿ ಪಕ್ಷಿ ವೀಕ್ಷಣೆ

ರಾಜ್ಯದ ವಿವಿಧೆಡೆಯಿಂದ ಕೊಡಗಿಗೆ ಆಗಮಿಸಿದ ಪಕ್ಷಿ ಪ್ರಿಯರು







ಮಡಿಕೇರಿ,ಏ.9– ಅರಣ್ಯ ಇಲಾಖೆ ಹಾಗೂ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ಸಹಯೋಗದಲ್ಲಿ ಮಡಿಕೇರಿಯಲ್ಲಿ ನಡೆಯುತ್ತಿರುವ 8ನೇ ಆವೃತ್ತಿಯ ಕರ್ನಾಟಕ ಹಕ್ಕಿ ಹಬ್ಬದ ಅಂಗವಾಗಿ ಶನಿವಾರ ಪಕ್ಷಿ ವೀಕ್ಷಣೆ ನಡೆಯಿತು. ಹಕ್ಕಿ ಹಬ್ಬದಲ್ಲಿ ರಾಜ್ಯದ ವಿವಿಧ ಕಡೆಗಳಿಂದ 80 ಮಂದಿ ಪಕ್ಷಿ ಪ್ರಿಯರು ಹಾಗೂ ಛಾಯಾಗ್ರಾಹಕರು ಪಾಲ್ಗೊಂಡಿದ್ದರು. ವಿಶೇಷವೆಂದರೆ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಕೂಡ ಭಾಗವಹಿಸಿ ಪಕ್ಷಿಗಳನ್ನು ವೀಕ್ಷಿಸಿ ಖುಷಿಪಟ್ಟರು. ಛಾಯಾಗ್ರಾಹಕರು ತಮ್ಮ ಕ್ಯಾಮೆರಾದಲ್ಲಿ ಪಕ್ಷಿಗಳನ್ನು ಸೆರೆ ಹಿಡಿಯುವಲ್ಲಿ ತಲ್ಲೀನರಾಗಿದ್ದರು. ಪಕ್ಷಿ ಪ್ರಿಯರು ಬೈನಾಕ್ಯುಲರ್ಸ್ ಹಿಡಿದು ಪಕ್ಷಿಗಳ ಅಂದ ಚಂದವನ್ನು ಕಣ್ತುಂಬಿಸಿಕೊಂಡರು.

ಮಡಿಕೇರಿ ಹೊರ ವಲಯದ ಗಾಳಿಬೀಡು, ಕಾಟಕೇರಿ, ಕಡಗದಾಳುವಿನ ಬೊಟ್ಲಪ್ಪ ದೇವಾಲಯದ ಸಮೀಪ, ನಿಶಾನಿಮೊಟ್ಟೆ ಸಮೀಪದಲ್ಲಿ ಪಕ್ಷಿಗಳನ್ನು ವೀಕ್ಷಿಸಲು ಸ್ಥಳ ಗುರುತು ಮಾಡಲಾಗಿತ್ತು.

ಈ ಬಾರಿ ರಾಯಭಾರಿ ಹಕ್ಕಿಯಾಗಿ ಕಪ್ಪು ಜುಟ್ಟಿನ ಗಿಡುಗವನ್ನು ಆಯ್ಕೆ ಮಾಡಲಾಗಿದೆ. ಇದು ಪೂರ್ವ ಹಿಮಾಲಯ, ಚೀನಾ ಮತ್ತು ಆಗ್ನೇಯ ಏಷ್ಯಾದಿಂದ ಚಳಿಗಾಲದಲ್ಲಿ ಮಡಿಕೇರಿಗೆ ವಲಸೆ ಹಕ್ಕಿಯಾಗಿ ಭೇಟಿ ನೀಡುತ್ತದೆ.

ಬೆಳಗಿನ ಮಂಜು ಕವಿದ ವಾತಾವರಣದ ನಡುವೆ ಹಕ್ಕಿಗಳ ಇಂಪಾದ ಧ್ವನಿ ಪಕ್ಷಿ ಪ್ರಿಯರನ್ನು ಆಕರ್ಷಿಸಿತು. ಗಾಳಿಬೀಡು ಸಮೀಪದಲ್ಲಿ ಸೀಬೆಹಣ್ಣು ಹಾಗೂ ಬಿದಿರೆ ಮರದಲ್ಲಿ ವಿವಿಧ ಜಾತಿಯ ಸಾಕಷ್ಟು ಪಕ್ಷಿಗಳು ಕಂಡು ಬಂದವು.

ಜಿಪಂ ಸಿಇಒ ಭಂವರ್ ಸಿಂಗ್ ಮೀನಾ ಅವರು ಕ್ಯಾಮೆರಾ ಹಿಡಿದು ಪಕ್ಷಿಗಳ ಚಿತ್ರ ಸೆರೆ ಹಿಡಿದು ಸಂತಸ ವ್ಯಕ್ತಪಡಿಸಿದರು. ನಾನು 60ಕ್ಕೂ ಅಧಿಕ ಪಕ್ಷಿಗಳನ್ನು ನೋಡಿದ್ದೇನೆ. ಪಕ್ಷಿಗಳ ಮಹತ್ವವನ್ನು ನಾವು ತಿಳಿದುಕೊಳ್ಳಬೇಕಿದೆ ಎಂದರು.

ತಂಡ ರಚನೆ: ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಹಾಗೂ ಹೊರ ರಾಜ್ಯದಿಂದಲೂ ಹಕ್ಕಿಹಬ್ಬಕ್ಕೆ ಆಗಮಿಸಿರುವ 80 ಮಂದಿ ಆಸಕ್ತರನ್ನು 7 ತಂಡಗಳನ್ನಾಗಿ ವಿಂಗಡಿಸಿ ಮೊದಲೇ ಗುರುತಿಸಲಾಗಿದ್ದ 7 ಸ್ಥಳಗಳಿಗೆ ಕಳುಹಿಸಿಕೊಡಲಾಯಿತು. ಅರಣ್ಯಭವನ ಹಿಂಭಾಗ, ಕಡಗದಾಳು, ಕಾಟಕೇರಿ, ನಿಶಾನಿ ಬೆಟ್ಟ, ಗಾಳಿಬೀಡು, ಕಾಲೂರು ರಸ್ತೆ ಸೇರಿದಂತೆ 7 ಸ್ಥಳಗಳಿಗೆ ಬೇರೆ ಬೇರೆ ತಂಡಗಳನ್ನು ಕರೆದುಕೊಂಡು ಹೋಗಿ ಕೊಡಗಿನ ಪಕ್ಷಿ ಲೋಕವನ್ನು ಪರಿಚಯಿಸಲಾಯಿತು.

ಕೊಡಗಿನಲ್ಲಿ ವಿವಿಧ ಬಗೆಯ 300ಕ್ಕೂ ಹೆಚ್ಚು ಪಕ್ಷಿಗಳಿದ್ದು, ಪಕ್ಷಿ ವೀಕ್ಷಣೆ ಸಂದರ್ಭ 60–70 ಬಗೆಯ ಪಕ್ಷಿಗಳನ್ನು ಗುರುತಿಸಲಾಯಿತು ಎಂದು ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ನಿಸರ್ಗ ತಜ್ಞ ರಾಹುಲ್ ಆರಾಧ್ಯ ಮಾಹಿತಿ ನೀಡಿದರು.

ಹುಲಿ ಸೆರೆ ಕಾರ್ಯಾಚರಣೆ ನಡುವೆಯೇ ಹುಲಿ ದಾಳಿಗೆ ಹಸು ಬಲಿ

ಗೋಣಿಕೊಪ್ಪ, ಏ.9–ಕಂಡಂಗಾಲ ಗ್ರಾಮದ ಸುತ್ತ ಹುಲಿ ಸೆರೆಗೆ 12 ನೇ ದಿನದ ಕಾರ್ಯಾಚರಣೆ ಬೆನ್ನಲ್ಲೆ, ಸಮೀಪದ ಕುಂದ ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿಯಾದ ಘಟನೆ ನಡೆದಿದೆ. ಕುಂದ ಗ್ರಾಮದ ಗುಮ್ಮಟ್ಟೀರ ಶಂಭು ಎಂಬುವವರಿಗೆ ಸೇರಿದ ಹಸುವನ್ನು ಶನಿವಾರ ಬೆಳಗ್ಗೆ ಹುಲಿ ಕೊಂದು ಹಾಕಿದೆ. ಸ್ಥಳದಲ್ಲಿ ಬೋನ್, ಕ್ಯಾಮೆರಾ ಅಳವಡಿಸಿದ್ದು, ರಾತ್ರಿ ಅದೇ ಸ್ಥಳಕ್ಕೆ ಮತ್ತೆ ಹುಲಿ ಬರುವ ನಿರೀಕ್ಷೆಯಲ್ಲಿ ಕಾರ್ಯಾಚರಣೆ ತಂಡ ಇದೆ.

ಕೊಡಗು ಉಸ್ತುವಾರಿ ವಹಿಸಿಕೊಂಡಿರುವ ಸಿಸಿಎಫ್ ಮಾಲತಿ ಪ್ರಿಯ ಅವರು ಕಂಡಂಗಾಲದ ಗ್ರಾಮದ ಶಿಬಿರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಾರ್ಯಾಚರಣೆಯ ಬಗ್ಗೆ ಮಾಹಿತಿ ಪಡೆದುಕೊಂಡು, ಮುಂದಿನ ರೂಪುರೇಷೆ ಬಗ್ಗೆ ಸಲಹೆ ನೀಡಿದರು.

ನಾಲೆಗೆ ಬಿದ್ದ ಜಿಂಕೆ ಮರಿ ರಕ್ಷಣೆ



ಕುಶಾಲನಗರ,ಏ.8– ಸಮೀಪದ ಹುದುಗೂರು ಬಳಿ ಹಾರಂಗಿ ಮುಖ್ಯ ನಾಲೆಗೆ ಬಿದ್ದಿದ್ದ ಜಿಂಕೆ ಮರಿಯನ್ನು ಸ್ಥಳೀಯ ಸೀತಾ ಕಾಲೋನಿ ಯುವಕರ ತಂಡ ರಕ್ಷಣೆ ಮಾಡಿ ಅರಣ್ಯ ಇಲಾಖೆಯ ಸಿಬ್ಬಂದಿಗಳಿಗೆ ಒಪ್ಪಿಸಿದ್ದಾರೆ.

ಸಮೀಪದ ಹುದುಗೂರು ಮೀಸಲು ಅರಣ್ಯ ಪ್ರದೇಶದಿಂದ ಕಾಡು ನಾಯಿಗಳು ಜಿಂಕೆ ಮರಿಯನ್ನು ಅಟ್ಟಿಸಿಕೊಂಡು ಬಂದಾಗ ಜಿಂಕೆಮರಿ ತನ್ನ ರಕ್ಷಣೆಗಾಗಿ ವೇಗವಾಗಿ ಓಡುತ್ತಿದ್ದ ಸಂದರ್ಭ ಆಕಸ್ಮಿಕವಾಗಿ ಹಾರಂಗಿಯ ಮುಖ್ಯ ನಾಲೆಗೆ ಬಿದ್ದಿತ್ತು. ನಾಲೆಯಲ್ಲಿ ಮೂರು ಅಡಿಗಳಷ್ಟು ನೀರು ಹರಿಯುತ್ತಿದ್ದು, ಜಿಂಕೆ ಮರಿ ನಾಲೆಯಲ್ಲಿ ಬಿದ್ದು ಒದ್ದಾಡುತ್ತಿದ್ದುದ್ದನ್ನು ಗಮನಿಸಿದ ಸೀತಾ ಕಾಲೋನಿಯ ಯವಕರು ನಾಲೆಗೆ ಇಳಿದು ಜಿಂಕೆಯನ್ನು ರಕ್ಷಣೆ ಮಾಡಿ ಹುದುಗೂರು ಅರಣ್ಯ ಸಿಬ್ಬಂದಿಗಳಿಗೆ ಒಪ್ಪಿಸಿದರು. ನಂತರ ಜಿಂಕೆ ಮರಿಯನ್ನು ಯಡವನಾಡು ಮೀಸಲು ಅರಣ್ಯಕ್ಕೆ ಬಿಡಲಾಯಿತು.

ಈ ಸಂದರ್ಭ ಸೀತಾ ಕಾಲೋನಿಯ ಯುವಕರಾದ ಅರುಣ, ರಘು, ರವಿ, ಉಮೇಶ್, ಅರಣ್ಯ ಇಲಾಖೆಯ ಸಿಬ್ಬಂದಿಗಳಾದ ಮನುಕುಮಾರ್, ರತೀಶ್, ಭೀಮಣ್ಣ ಇದ್ದರು.

ಏ.15ರಂದು ಅರೆಭಾಷಿಗ ಗೌಡ ಜನಾಂಗದ ವಧು–ವರರ ಸಮಾವೇಶ

ಮಡಿಕೇರಿ, ಏ.9– ಕೊಡಗು ಗೌಡ ನಿವೃತ್ತ ನೌಕರರ ಸಂಘದ ವತಿಯಿಂದ ಕೊಡಗು ಅರೆಭಾಷಿಗ ಗೌಡ ಜನಾಂಗದ ವಧು–ವರರ ಸಮಾವೇಶ ಏ.15 ರಂದು ಮಡಿಕೇರಿಯಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಕೋರನ ಸಿ.ವಿಶ್ವನಾಥ್ ತಿಳಿಸಿದ್ದಾರೆ.



ಅಂದು ಬೆಳಗ್ಗೆ 9.30 ಗಂಟೆಗೆ ನಗರದ ಕೊಡಗು ಗೌಡ ವಿದ್ಯಾ ಸಂಘದ ಸಭಾಂಗಣದಲ್ಲಿ ಸಮಾವೇಶ ನಡೆಯಲಿದ್ದು, ಆಸಕ್ತರು ತಮ್ಮ ಭಾವಚಿತ್ರ ಹಾಗೂ ಇತರ ಎಲ್ಲಾ ಮಾಹಿತಿಗಳೊಂದಿಗೆ ಭಾಗವಹಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ 94490 86589, 97394 95381, 94494 76005 ನ್ನು ಸಂಪರ್ಕಿಸಬಹುದಾಗಿದೆ.

ಕಾಫಿ ವ್ಯಾಪಾರಿ ನಾಪತ್ತೆ



ಗೋಣಿಕೊಪ್ಪ,ಏ.9–ಮಾಯಮುಡಿ ಗ್ರಾಮದಲ್ಲಿ ಕಾಫಿ ವ್ಯಾಪಾರ ಮಾಡುತ್ತಿದ್ದ ಗೋಣಿಕೊಪ್ಪ ಕಾವೇರಿ ಹಿಲ್ಸ್ ನಿವಾಸಿ ಟಿ.ಕೆ. ಅಸ್ಕರ್ (44) ಏಪ್ರಿಲ್ 5 ರಿಂದ ನಾಪತ್ತೆಯಾಗಿದ್ದಾರೆ.

ಅಂದು ಬೆಳಗ್ಗೆ 4.30 ಸುಮಾರಿಗೆ ಕುಶಾಲನಗರಕ್ಕೆ ತೆರಳುವುದಾಗಿ ಇನ್ನೋವಾ ಕಾರಿನಲ್ಲಿ ಗೋಣಿಕೊಪ್ಪದಿಂದ ಹೋದವರು ಹಿಂತಿರುಗಿ ಬಂದಿಲ್ಲ. ಕಾರು ಕೂಡ ಪತ್ತೆಯಾಗಿಲ್ಲ.

ಈ ಬಗ್ಗೆ ಅಸ್ಕರ್ ಪತ್ನಿ ಟಿ. ಎ. ಫಾರಿದಾ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಇರುವವರು 08274–247333 ಸಂಖ್ಯೆಗೆ ತಿಳಿಸುವಂತೆ ಗೋಣಿಕೊಪ್ಪ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

ವಿರಾಜಪೇಟೆಯಲ್ಲಿ ಜಾನಪದ ಕಲಾ ಪ್ರಕಾರಗಳ ಪ್ರದರ್ಶನ

ವಿರಾಜಪೇಟೆ, ಏ.9– ಗ್ರಾಮೀಣ ಪ್ರದೇಶದಲ್ಲಿ ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೊಡಗಿನ ಐದು ತಾಲೂಕುಗಳಲ್ಲಿ ಜಾನಪದ ಪರಿಷತ್ತು ಘಟಕಗಳು ಕಾರ್ಯನಿರ್ವಹಿಸುತ್ತಿದೆ ಎಂದು ಜಾನಪದ ಪರಿಷತ್ತು ಜಿಲ್ಲಾ ಅಧ್ಯಕ್ಷ ಶಕ್ತಿ ಪತ್ರಿಕೆಯ ಸಂಪಾದಕರಾದ ಅನಂತಶಯನ ಹೇಳಿದರು.



ಕರ್ನಾಟಕ ಜಾನಪದ ಪರಿಷತ್ತು ವಿರಾಜಪೇಟೆ ತಾಲೂಕು ಘಟಕದ ವತಿಯಿಂದ ವಿರಾಜಪೇಟೆ ಸೆರಿನಿಟಿ ಹಾಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಾನಪದ ಕಲಾ ಪ್ರಕಾರಗಳ ಪ್ರದರ್ಶನವನ್ನು ಉದ್ಘಾಟಿಸಿದ ಬಳಿಕ ಮಾತನಾಡಿ, ಗ್ರಾಮೀಣ ಪ್ರದೇಶದ ಸೊಗಡು ಜೀವನದ ಸಾಂಸ್ಕೃತಿಯನ್ನು ಉಳಿಸಿ, ಬೆಳೆಸಲು ನಾವೆಲ್ಲರೂ ಮುಂದಾಗಬೇಕು. ಈ ಹಿನ್ನೆಲೆಯಲ್ಲಿ ಜಿಲ್ಲಾ ಕೇಂದ್ರವಾದ ಮಡಿಕೇರಿಯಲ್ಲಿ ಜಾನಪದ ಪರಿಷತ್ತು ಘಟಕದ ಕಟ್ಟಡ ನಿರ್ಮಿಸುವ ಯೋಜನೆ ರೂಪಿಸಿರುವುದಾಗಿ ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಮಾತನಾಡಿ, ನಾವುಗಳು ಚಿತ್ರ ಗೀತೆಗಳನ್ನು ದಿನನಿತ್ಯ ಕೇಳುತ್ತೇವೆ ಆದರೆ ಗ್ರಾಮೀಣ ಭಾಗದ ಜಾನಪದ ಹಾಡುಗಳು ನಮ್ಮ ಸಂಪತ್ತು, ಸಂಸ್ಕೃತಿ ಕಲೆಯನ್ನು ಇಂದಿಗೂ ಎಂದೆಂದಿಗೂ ಮರೆಯುವಂತಿಲ್ಲ. ಜಾನಪದ ಹಾಡುಗಳನ್ನು ಉಳಿಸಿ ಬೆಳೆಸಲು ಪ್ರತಿಯೊಬ್ಬರು ಕೈಜೋಡಿಸುವಂತಾಗಬೇಕು ಎಂದರು.

ಪರಿಷತ್ತು ತಾಲೂಕು ಘಟಕದ ಅಧ್ಯಕ್ಷ ಟೋಮಿ ಥೋಮಸ್ [ನಾ ಕನ್ನಡಿಗ] ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಜಾನಪದ ಕಲೆ ಎಂದಿಗೂ ನಶಿಸಿ ಹೋಗಬಾರದೆಂದು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಆದರೆ ಹೆಚ್ಚು ಕಲಾವಿದರು ಭಾಗವಹಿಸಿರುವುದು ಸಂತಸ ತಂದಿದೆ ಇನ್ನು ಮುಂದೆ ಹೆಚ್ಚು ಜಾನಪದ ಕಾರ್ಯಕ್ರಮಗಳನ್ನು ಆಯೋಜಿಸುವುದಾಗಿ ತಿಳಿಸಿದರು. ವಿರಾಜಪೇಟೆ ವರ್ತಕಧಾನಿ ಮಹ್ಮದ್ ಹನೀಫ್ ಮಾತನಾಡಿದರು. ವೇದಿಕೆಯಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಟಿ.ಆರ್.ಸುಶ್ಮಿತಾ, ತಾಲೂಕು ಘಟಕದ ಖಜಾಂಚಿ ಡಿ.ಸಿ.ದ್ರುವಕುಮಾರ್, ಪರಿಷತ್ ಜಿಲ್ಲಾ ಕೋಶಾಧಿಕಾರಿ ಸಂಪತ್ ಕುಮಾರ್, ಹಿರಿಯ ಪತ್ರಕರ್ತ ಹೆಚ್.ಟಿ.ಅನಿಲ್ ಇತರರು ಉಪಸ್ಥಿತರಿದ್ದರು.

ಸ್ವರ್ಣಾ ಸಂಗೀತ ಶಾಲೆಯ ವ್ಯವಸ್ಥಾಪಕ ದಿಲಿಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಜಾನಪದ ನಡೆದುಬಂದ ಹಾದಿಯ ಬಗ್ಗೆ ವಿವರಿಸಿದರು. ಚಂಡೆ ಮದ್ದಾಳೆ ಮಲ್ದಾರೆಯ ಶಾಜಿ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಪರಿಷತ್‌ನ ಎಲ್ಲಾ ಸದಸ್ಯರು ಹಾಜರಿದ್ದರು. ನಂತರ ರಂಗೋಲಿ ಸ್ಪರ್ಧೆ, ಜಾನಪದ ಹಾಡು ನೃತ್ಯ, ಕೋಲಾಟ, ಸುಗ್ಗಿ ಕುಣಿತ, ಡೊಳ್ಳು ಕುಣಿತ ಸೇರಿದಂತೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದ ಬಳಿಕ ಸಂಜೆ 'ಮಾಧವಿ' ಎಂಬ ಸಾಮಾಜಿಕ ನಾಟಕ ನಡೆಯಿತು. ಜಿಲ್ಲೆ ಹಾಗೂ ಹೊರ ಜಿಲ್ಲೆಯಿಂದಲೂ ಕಲಾವಿದರು ಭಾಗವಹಿಸಿದ್ದರು. ಪತ್ರಕರ್ತ ಗುಯ್ಯ ರಜೀತ್ ಕುಮಾರ್ ಸ್ವಾಗತಿಸಿದರು, ಶಿಕ್ಷಕಿ ನಳಿನಾಕ್ಷಿ ನಿರೂಪಿಸಿದರೆ, ರಜಿತಾ ಕಾರ್ಯಪ್ಪ ವಂದಿಸಿದರು.

ಕೋವಿ ಹಕ್ಕು ವಿಚಾರ: ನಾಳೆ ಒಕ್ಕಲಿಗರ ಸಂಘದ ಸಭೆ

ಮಡಿಕೇರಿ,ಏ.9– ಕೊಡಗಿನ ಜಮ್ಮಾ ಹಿಡುವಳಿದಾರರಿಗೆ ನೀಡಿರುವ ಕೋವಿ ಹಕ್ಕಿನ ಪರವಾನಗಿ ವಿನಾಯಿತಿಯನ್ನು ಪ್ರಶ್ನಿಸಿ ಯಾಲದಾಳು ಚೇತನ್ ಎಂಬವರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಈ ಕುರಿತು ಕಾನೂನು ಹೋರಾಟಕ್ಕೆ ಮುಂದಾಗಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಏ.11ರಂದು ಸಭೆ ನಡೆಸುವುದಾಗಿ ಕೊಡಗು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಸ್.ಎಂ.ಚಂಗಪ್ಪ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು ಸೋಮವಾರ ಬೆಳಗ್ಗೆ 11.30 ಗಂಟೆಗೆ ಸೋಮವಾರಪೇಟೆ ತಾಲೂಕು ಒಕ್ಕಲಿಗರ ಸಂಘದ ಸಭಾಂಗಣದಲ್ಲಿ ಸಭೆ ನಡೆಯಲಿದ್ದು, ಜಮ್ಮಾ ಹಿಡುವಳಿದಾರರು ಬರುವುದರೊಂದಿಗೆ ಇತರರನ್ನು ಕರೆ ತಂದು ಸೂಕ್ತ ಸಲಹೆ ನೀಡುವಂತೆ ಮನವಿ ಮಾಡಿದ್ದಾರೆ.

ಚೇತನ್ ಅವರು ಸಲ್ಲಿಸಿರುವ ಮನವಿಯಲ್ಲಿ ಕೇಂದ್ರ ಸರ್ಕಾರ, ಕರ್ನಾಟಕ ರಾಜ್ಯ ಸರಕಾರ, ಕೊಡಗು ಜಿಲ್ಲಾ ಒಕ್ಕಲಿಗರ ಸಂಘ ಸೇರಿದಂತೆ ಜಿಲ್ಲೆಯ 36 ಸಂಘ, ಸಂಸ್ಥೆಗಳನ್ನು ಪ್ರತಿವಾದಿಗಳನ್ನಾಗಿಸಿದ್ದಾರೆ. ಆದ್ದರಿಂದ ಕಾನೂನು ಹೋರಾಟಕ್ಕೆ ನಾವುಗಳು ತಯಾರಿ ಮಾಡಿಕೊಳ್ಳಬೇಕಿದೆ ಎಂದು ಎಸ್.ಎಂ.ಚಂಗಪ್ಪ ತಿಳಿಸಿದ್ದಾರೆ.

ಶಾಲಾ–ಕಾಲೇಜುಗಳಿಗೆ ಕ್ರೀಡೋಪಕರಣ ವಿತರಣೆ

ಹನೂರು, ಏ.9(ಸೋಮು)– ಪಟ್ಟಣದ ಸರ್ಕಾರಿ ಉನ್ನತೀಕರಿಸಿದ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರ ಅನುದಾನದಡಿ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರೌಢಶಾಲೆ, ಕಾಲೇಜುಗಳಿಗೆ ಉಚಿತ ಕ್ರೀಡೋಪಕರಣಗಳನ್ನು ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ವಿತರಿಸಿದರು.



ಬಳಿಕ ಮಾತನಾಡಿದ ಅವರು, ಹಲವು ಬಾರಿ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಹಾಗೂ ಅನೇಕ ಹುದ್ದೆಗಳನ್ನು ನಿಭಾಯಿಸಿರುವ ಅನುಭವ ಹೊಂದಿರುವ ರಾಮು ಅವರಿಗೆ ಪದವೀಧರರು ತಮ್ಮ ಪ್ರಥಮ ಪ್ರಾಶಸ್ತ್ಯದ ಮತಗಳನ್ನು ನೀಡಿ ಆಶೀರ್ವದಿಸಬೇಕೆಂದು ತಿಳಿಸಿದರು.

ರಾಮು ಅವರು ನಿರಂತರವಾಗಿ ಶಿಕ್ಷಕರು, ಉಪನ್ಯಾಸಕರು, ಪದವೀಧರರು, ನೌಕರರ ಪರವಾಗಿ ಅನೇಕ ಹೋರಾಟಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ. 5 ಮತ್ತು 6ನೇ ವೇತನ ಆಯೋಗ ಕಾರ್ಯಗತಗೊಳ್ಳುವ ನಿಟ್ಟಿನಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ. ಮುಂದಿನ ದಿನಗಳಲ್ಲಿಯೂ ನಿಮ್ಮ ಸೇವೆಯನ್ನು ಮಾಡಲು ಅವಕಾಶ ಕಲ್ಪಿಸಬೇಕು. ಬುದ್ಧಿ ಜೀವಿಗಳಾದ ನೀವುಗಳು ನಿಮ್ಮ ಕಷ್ಟ ಮತ್ತು ಸಮಸ್ಯೆಗೆ ಸ್ಪಂದಿಸುವವರನ್ನು ಬೆಂಬಲಿಸಬೇಕು ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ರಾಮು ಮಾತನಾಡಿ, 5ನೇ ವೇತನ ಆಯೋಗ ಜಾರಿಗೆ ಬರುವಂತೆ ಒತ್ತಾಯಿಸಿ ಅಂದಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಸರ್ಕಾರದಲ್ಲಿ ಹೋರಾಟದ ಪರಿಣಾಮ ಅಂದು ಮಧ್ಯ ರಾತ್ರಿ ವೇತನ ಆಯೋಗವನ್ನು ಮಾಡುತ್ತೇನೆ ಎಂದು ಘೋಷಣೆ ಮಾಡಿದರು. ಮೈಸೂರಿನಲ್ಲಿ ಲಕ್ಷಾಂತರ ನೌಕರರು ಜೊತೆಗೂಡಿ ಪ್ರತಿಭಟನೆಯನ್ನು ಮಾಡಲಾಗಿತ್ತು. ಮುಂದಿನ ದಿನಗಳಲ್ಲಿಯೂ ನೌಕರರ ಪರ, ಪಧವಿಧರರ ಪರ ನಿಲ್ಲುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರೌಢಶಾಲೆ ಮತ್ತು ಕಾಲೇಜಿನ 58 ವಿದ್ಯಾ ಸಂಸ್ಥೆಗಳ ಪೈಕಿ ಸಾಂಕೇತಿಕವಾಗಿ ಕೆಲವರಿಗೆ 16 ಬಗೆಯ ಆಟೋಟಗಳಿಗೆ ಸಂಬಂಧಿಸಿ ಕ್ರೀಡಾ ಉಪಕರಣಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್.ಸ್ವಾಮಿ, ಗುರುಮೂರ್ತಿ, ತಾಲೂಕು ದೈಹಿಕ ಶಿಕ್ಷಕ ಸಂಘದ ಅಧ್ಯಕ್ಷ ಕೆಂಪರಾಜು, ಸಿಪಿಯು ಮಾದೇವು, ಶಿಕ್ಷಕರು, ಉಪನ್ಯಾಸಕರು ಇದ್ದರು.

ಇಂಧನ, ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ
ರಾಜ್ಯ, ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಚಾಮರಾಜನಗರ, ಏ.9–ಪೆಟ್ರೋಲ್, ಡೀಸೆಲ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ವಿರೋಧಿಸಿ ನಗರದಲ್ಲಿ ಶನಿವಾರ ಕೇಂದ್ರಹಾಗೂ ರಾಜ್ಯ ಸರ್ಕಾರ ವಿರುದ್ಧ ಜಿಲ್ಲಾ ಕಾಂಗ್ರೆಸ್ ಸಮಿತಿ ಯಿಂದ ಪ್ರತಿಭಟನೆ ನಡೆಸಲಾಯಿತು.



ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ತ್ಯಾಗರಾಜ ರಸ್ತೆ ಮಾರ್ಗವಾಗಿ ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ರಚಿಸಿ, ಕೆಲ ಕಾಲ ರಸ್ತೆ ತಡೆ ನಡೆಸಿ, ಕೇಂದ್ರದ ಬಿಜೆಪಿ ಸರ್ಕಾರ, ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ನೇತೃತ್ವವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಕೇಂದ್ರ ಹಾಗೂ ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ಜನವಿರೋಧಿಯಾಗಿದ್ದು, ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೇ ಕೇವಲ ಬೆಲೆ ಏರಿಕೆಯಲ್ಲಿಯೇ ಮಗ್ನವಾಗಿದೆ. ಪ್ರಮುಖವಾಗಿ ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ ದರಗಳನ್ನು ಏರಿಕೆ ಮಾಡುತ್ತಿದೆ. ಇದರಿಂದ ಜನ ಸಾಮಾನ್ಯರು ಜೀವನ ನಡೆಸುವುದು ಕಷ್ಟಕರವಾಗಿದೆ ಎಂದು ದೂರಿದರು.

ಇಂಧನ ಹಾಗೂ ಅಗತ್ಯ ವಸ್ತುಗಳ ಬೆಲೆಗಳ ಏರಿಕೆಯಿಂದ ಕಂಗಾಲಾಗಿರುವ ದೇಶದ ಜನರು ಬಿಜೆಪಿ ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ. ಅಲ್ಲದೇ ತಕ್ಕಪಾಠ ಕಲಿಸಲು ಮುಂದಾಗಿದ್ದಾರೆ. ಇದನ್ನರಿತ ಬಿಜೆಪಿ ನಾಯಕರು ಅಭಿವೃದ್ಧಿ ವಿಚಾರದಲ್ಲಿ ಹಿನ್ನಡೆ ಅನುಭವಿಸಿ, ಈಗ ಜನರನ್ನು ಧಾರ್ಮಿಕ ಭಾವನೆಗಳ ಮೂಲಕ ಕೋಮು ಗಲಭೆ ಸೃಷ್ಟಿಸಲು ಮುಂದಾಗಿದೆ. ಈ ಪರಿಸ್ಥಿತಿಯಲ್ಲಿ ಹಿಂದು, ಮುಸ್ಲಿಮ್‌ರ ನಡುವೆ ಗಲಭೆ ಸೃಷ್ಟಿಸಲು ಯತ್ನಿಸುತ್ತಿದೆ. ಸಮಾಜದಲ್ಲಿ ಅಶಾಂತಿ ಉಂಟು ಮಾಡಿ, ಮತ ಬ್ಯಾಂಕ್ ಭದ್ರಪಡಿಸಿಕೊಳ್ಳಲು ಹುನ್ನಾರ ಇದಾಗಿದ್ದು, ಈ ಕೂಡಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರ ಬೆಲೆ ಏರಿಕೆಯನ್ನು ಕಡಿಮೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ರಾಜ್ಯ ಎಸ್‌ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸ ನಾಯಕ, ಜಿಪಂ ಮಾಜಿ ಸದಸ್ಯರಾದ ಕೆ.ಪಿ.ಸದಾಶಿವಮೂರ್ತಿ, ಸಿ.ಎ.ಮಹದೇವಶೆಟ್ಟಿ, ಬ್ಲಾಕ್ ಅಧ್ಯಕ್ಷ ಮಹಮದ್ ಅಸ್ಗರ್, ಎಸ್‌ಸಿ ಘಟಕದ ಅಧ್ಯಕ್ಷ ಕೆ.ನಾಗರಾಜು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷೆ ಲತಾ ರಾಜಶೇಖರ್ ಜತ್ತಿ, ನಗರಸಭಾ ಸದಸ್ಯ ಚಿನ್ನಮ್ಮ, ಗ್ರಾಮಾಂತರ ಬ್ಲಾಕ್ ಅಧ್ಯಕ್ಷ ಶಕುಂತಲಾ, ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಅಜೀಜ್, ಪ್ರಧಾನ ಕಾರ್ಯದರ್ಶಿ ಕೆಲ್ಲಂಬಳ್ಳಿ ಸೋಮಶೇಖರ್, ನಾಗೇಂದ್ರ ಮುಖಂಡರಾದ ಆಲೂರು ಪ್ರದೀಪ್, ನಾಗವಳ್ಳಿ ನಾಗಯ್ಯ, ಸೋಫಿಯಾ, ಸುಹೇಲ್ ಆಲಿಖಾನ್, ಅಯೂಬ್ ಖಾನ್, ಸೈಯದ್ ತೈಸಿಫ್, ಕರಿನಂಜನಪುರ ಸ್ವಾಮಿ, ಎನ್‌ಎಸ್‌ಯುಐ ಘಟಕದ ಅಧ್ಯಕ್ಷ ಮೋಹನ್ ಇತರರಿದ್ದರು.

ಎಪಿಎಂಸಿಯ ಎಲ್ಲಾ ಕ್ಷೇತ್ರಗಳಲ್ಲಿಯೂ ಬಿಜೆಪಿ ಗೆಲುವಿಗೆ ಶ್ರಮಿಸಲು ಕರೆ



ಗುಂಡ್ಲುಪೇಟೆ, ಏ.9(ಸೋಮ್.ಜಿ)– ಕೇಂದ್ರ ಮತ್ತು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ರೈತರ ಅನುಕೂಲಕ್ಕೆ ಕೈಗೊಂಡ ಕ್ರಮಗಳನ್ನು ರೈತರಿಗೆ ಮನವರಿಕೆ ಮಾಡಿಕೊಡುವ ಮೂಲಕ ಎಪಿಎಂಸಿಯ ಎಲ್ಲಾ ಕ್ಷೇತ್ರಗಳಲ್ಲಿಯೂ ಬಿಜೆಪಿ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುವಂತೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಕಾರ್ಯಕರ್ತರಿಗೆ ಹೇಳಿದರು.

ಎಪಿಎಂಸಿ ಚುನಾವಣೆ ಅಂಗವಾಗಿ ತಾಲೂಕಿನ ತೆರಕಣಾಂಬಿ, ಕುಂದಕೆರೆ ಹಾಗೂ ಬೇಗೂರು ಕ್ಷೇತ್ರಗಳಲ್ಲಿ ಆಯೋಜಿಸಿದ್ದ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರೈತರ ಬೆಳೆಗಳಿಗೆ ಪ್ರಧಾನಮಂತ್ರಿ ಕಿಸಾನ್ ಯೋಜನೆಯಡಿ 6 ಸಾವಿರ, ರಾಜ್ಯ ಸರ್ಕಾರ 4 ಸಾವಿರ ಪ್ರೋತ್ಸಾಹಧನ, ಮಾಜಿ ಸಿಎಂ.ಯಡಿಯೂರಪ್ಪ ಅವರ ಅಧಿಕಾರವಧಿಯಲ್ಲಿ ಹೈನುಗಾರಿಕೆಗೆ ಪ್ರೋತ್ಸಾಹಧನ, ಸಿಎಂ ಬೊಮ್ಮಾಯಿ ಅವರು ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ಯೋಜನೆ ಜಾರಿಗೊಳಿಸಿದ್ದಾರೆ ಎಂದರು.

ಇದಲ್ಲದೆ ತಾಲೂಕಿನ ಬೇಗೂರಿನಲ್ಲಿ ಹತ್ತಿ ಮಾರುಕಟ್ಟೆ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ. ಪಟ್ಟಣ ಮತ್ತು ತೆರಕಣಾಂಬಿಯ ಎಪಿಎಂಸಿ ಅಭಿವೃದ್ಧಿಗೆ ಕೋಟಿ ರೂ. ಅನುದಾನ ನೀಡಲಾಗಿದೆ. ರೈತರ ಬಹುದಿನದ ಬೇಡಿಕೆಯಂತೆ ಎಲ್ಲಾ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಆದ್ದರಿಂದ ಕಾರ್ಯಕರ್ತರು ಈ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಡುವ ಮೂಲಕ ಪಕ್ಷದ ಎಲ್ಲಾ ಅಭ್ಯರ್ಥಿಗಳನ್ನು ಗೆಲುವಿಗೆ ಶ್ರಮಿಸಬೇಕು ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲಾಧ್ಯಕ್ಷ ಡಿ.ಪಿ.ಜಗದೀಶ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎನ್.ಮಲ್ಲೇಶ್, ಮುಖಂಡ ಎಸ್.ಎಂ.ಮಲ್ಲಿಕಾರ್ಜುನ್, ಜಿಪಂ ಮಾಜಿ ಅಧ್ಯಕ್ಷೆ ಶೈಲಜಾ ಮಲ್ಲೇಶ್ ಸೇರಿದಂತೆ ಅಭ್ಯರ್ಥಿಗಳು ಹಾಗೂ ಕಾರ್ಯಕರ್ತರು ಇದ್ದರು.

ಹನೂರು ಪಪಂಗೆ 52.27 ಲಕ್ಷ ರೂ. ಉಳಿತಾಯ ಬಜೆಟ್

ಹನೂರು, ಏ.9(ಸೋಮು)– ಇಲ್ಲಿನ ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ಅಧ್ಯಕ್ಷೆ ಚಂದ್ರಮ್ಮ 2022–23ನೇ ಸಾಲಿನ 52.27 ಲಕ್ಷ ರೂ. ಉಳಿತಾಯ ಬಜೆಟ್ ಮಂಡಿಸಿದರು. ಶಾಸಕ ಆರ್.ನರೇಂದ್ರ ಹಾಗೂ ಸರ್ವ ಸದಸ್ಯರುಗಳ ಉಪಸ್ಥಿತಿಯಲ್ಲಿ ಪ್ರಮುಖ ಆದಾಯಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನ, ಪ್ರಮುಖ ವೆಚ್ಚಗಳ ಬಗ್ಗೆ ಮಾಹಿತಿ ನೀಡಿದರು.



ಪಪಂ ಎಲ್ಲಾ ಮೂಲಗಳಿಂದ ಪ್ರಸ್ತುತ ಆರಂಭಿಕ ಶಿಲ್ಕು ಸೇರಿ ಆದಾಯ 22.04 ಕೋಟಿ ರೂ., ವೆಚ್ಚಗಳು 21.52 ಕೋಟಿ ರೂ, ನಿರೀಕ್ಷಿತ ಉಳಿತಾಯ 52.27 ಲಕ್ಷಹೊಂದಿರುವುದಾಗಿ ಸಭೆಯಲ್ಲಿ ಮಂಡಿಸಿದರು.

ವಿವಿಧ ವಿಚಾರಗಳ ಬಗ್ಗೆ ಚರ್ಚೆ: ಆಯ–ವ್ಯಯ ಮಂಡನೆ ಸಭೆಯಲ್ಲಿ ಪಪಂ ಸದಸ್ಯರು ಶಾಸಕ ಆರ್.ನರೇಂದ್ರ ಅವರ ಸಮ್ಮುಖದಲ್ಲಿ ಚರ್ಚೆ ನಡೆಸಿದರು. ಸದಸ್ಯ ಸೋಮಶೇಖರ್ ಮಾತನಾಡಿ, ಹನೂರು ಕೊಳ್ಳೇಗಾಲ ಮುಖ್ಯ ರಸ್ತೆ, ಬಂಡಳ್ಳಿ ರಸ್ತೆ ಇನ್ನಿತರಡೆಗಳಲ್ಲಿ ಪಪಂ ಪರವಾನಗಿ ಇಲ್ಲದೇ ಅನಧಿಕೃತ ಟ್ರೇಡರ್ಸ್‌ಗಳು, ಹೋಟೆಲ್‌ಗಳು ಇನ್ನಿತರೆ ಅಂಗಡಿ ಮುಂಗಟ್ಟುಗಳು ಕಾರ್ಯನಿರ್ವಹಿಸುತ್ತಿವೆ. ಹಾಗಾಗಿ ಇವುಗಳನ್ನು ಪತ್ತೆ ಹಚ್ಚಿ ನೋಟಿಸ್ ನೀಡಿ ಕ್ರಮ ವಹಿಸಬೇಕು. ಪರವಾನಗಿ ನೀಡಿದರೆ ಪಪಂಗೆ ಹೆಚ್ಚಿನ ಆದಾಯ ಬರುತ್ತದೆ ಎಂದ ಅವರು, ಪೌರ ಕಾರ್ಮಿಕರ ಕೊರತೆ ಇರುವ ಬಗ್ಗೆ ಸೂಕ್ತ ಕ್ರಮ ವಹಿಸಬೇಕು ಎಂದರು.

ಶಾಸಕ ಆರ್.ನರೇಂದ್ರ ಮಾತನಾಡಿ, ಅನಧಿಕೃತ ವ್ಯಾಪಾರ ವಹಿವಾಟು ನಡೆಸುತ್ತಿರುವ ಅಂಗಡಿ ಮುಂಗಟ್ಟುಗಳು, ಬೀದಿಬದಿ ವ್ಯಾಪಾರಿಗಳು, ಬಸ್‌ನವರಿಂದ ಸುಂಕ ವಸೂಲಿ ಮಾಡಲು ಅಧಿಕಾರಿಗಳು ಕ್ರಮ ವಹಿಸಬೇಕು. ಪಟ್ಟಣದಲ್ಲಿ ಪಾರ್ಕ್ ಇಲ್ಲದೇ ಇರುವುದರಿಂದ ಪಾರ್ಕ್ ಸೌಲಭ್ಯದಡಿ ಬರುವ ಅನುದಾನವನ್ನು ಮಹದೇಶ್ವರ ಕ್ರೀಡಾಂಗಣದ ಸುತ್ತ ವಿದ್ಯುತ್ ದೀಪ ಅಳವಡಿಸುವ ಸಂಬಂಧ ಕ್ರಮವಹಿಸಬೇಕು. ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ಒಂದು ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೇನೆ. ಈ ಅನುದಾನವನ್ನು ದೇವಾಂಗಪೇಟೆ ಬಳಿಯ ಸೇತುವೆ ನಿರ್ಮಾಣ ಕಾಮಗಾರಿಗೆ ಬಳಸಿಕೊಂಡು ಉಳಿದ ಹಣವನ್ನು ಕೊಳಗೇರಿ ಪ್ರದೇಶಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಕ್ರಿಯಾ ಯೋಜನೆ ತಯಾರಿಸಬೇಕು. ಬೀದಿ ದೀಪ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸದವರನ್ನು ಕಪ್ಪು ಪಟ್ಟಿಗೆ ಸೇರಿಸಿ ಎಂದರು.

ಸದಸ್ಯ ಆನಂದ್‌ಕುಮಾರ್, ಸದಸ್ಯ ಮಹೇಶ್ ಮಾತನಾಡಿದರು.

ನೀರು ಗಂಟಿಗಳಿಗೆ ಸಂಬಳ ನೀಡಿ: ನೀರುಗಂಟಿಗಳಿಗೆ ಕಳೆದ ಏಳೆಂಟು ತಿಂಗಳಿಂದ ಸಂಬಳ ನೀಡಿಲ್ಲದೇ ಇರುವುದು ಗಮನಕ್ಕೆ ಬಂದಿದೆ. ಅವರ ಕುಟುಂಬ ಜೀವನ ನಿರ್ವಹಣೆ ಹೇಗೆ? ಹಾಗಾಗಿ ಪಪಂ ಅಧಿಕಾರಿಗಳು ವಾಟರ್‌ಮೇನ್‌ಗಳಿಗೆ ಸಂಬಳ ನೀಡಬೇಕು. ಇನ್ನೂ ಹೆಚ್ಚಿನ ಪೌರ ಕಾರ್ಮಿಕರನ್ನು ನೇಮಕ ಮಾಡಬೇಕು ಎಂದು ತಾಕೀತು ಮಾಡಿದರು. ಸಭೆಯಲ್ಲಿ ಪಪಂ ಉಪಾಧ್ಯಕ್ಷ ಗಿರೀಶ್ ಸೇರಿದಂತೆ ಸರ್ವ ಸದಸ್ಯರು, ನಾಮ ನಿರ್ದೇಶಿತ ಸದಸ್ಯರು, ಮುಖ್ಯಾಧಿಕಾರಿ, ಅಭಿಯಂತರರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಅಪ್ಪು ಯುವ ಸೈನ್ಯದಿಂದ ಸೌಜನ್ಯಗೆ ಸನ್ಮಾನ

ಯಳಂದೂರು, ಏ.9(ವಿ.ನಾಗರಾಜು)– ಮೈಸೂರು ವಿಶ್ವ ವಿದ್ಯಾನಿಲಯದ ಘಟಿಕೋತ್ಸವದಲ್ಲಿ 5 ಚಿನ್ನದ ಪದಕ ಪಡೆದ ತಾಲೂಕಿನ ಯರಗಂಬಳ್ಳಿ ಗ್ರಾಮದ ಸೌಜನ್ಯ ಅವರನ್ನು ಕರುನಾಡ ರಾಜಪುತ್ರ ಅಪ್ಪು ಯುವ ಸೈನ್ಯದಿಂದ ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಚಂದ್ರು ಮಾತನಾಡಿ, ಸೌಜನ್ಯ ಮೈಸೂರು ವಿವಿಯಲ್ಲಿ ನಡೆದ ಘಟಿಕೋತ್ಸವದಲ್ಲಿ 5 ಚಿನ್ನದ ಪದಕಗಳನ್ನು ಪಡೆದು ಗ್ರಾಮ, ತಾಲೂಕು ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಇವರ ಸಾಧನೆ ಇತರರಿಗೆ ಮಾದರಿಯಾಗಿದೆ. ಐಎಎಸ್ ಕನಸು ಹೊಂದಿರುವ ಇವರಿಗೆ ನಮ್ಮ ಸಂಘದ ವತಿಯಿಂದ ಇದಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಕೊಡುಗೆಯಾಗಿ ನೀಡಲಾಗುತ್ತಿದ್ದು, ಇವರ ಇಷ್ಟಾರ್ಥಗಳು ಈಡೇರಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಮನು, ಕಾರ್ಯದರ್ಶಿ ಜಯಶಂಕರ್, ಸಂಘದ ಸದಸ್ಯರು, ಗ್ರಾಮದ ಮುಖಂಡರು, ಸಂಘದ ಪದಾಧಿಕಾರಿಗಳು ಹಾಜರಿದ್ದರು.



ಕಾಡಾನೆ ದಾಳಿ: ವ್ಯಕ್ತಿ ಸಾವು

ಚಾಮರಾಜನಗರ, ಏ.9– ಕಾಡಾನೆ ದಾಳಿಯಿಂದ ವ್ಯಕ್ತಿಯೊಬ್ಬ ಸಾವನ್ನಪ್ಪಿರುವ ಘಟನೆ ತಾಲೂಕಿನ ಮೂಡಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದಿದೆ. ತಾಲೂಕಿನ ಕೋಳಿಪಾಳ್ಯ ಗ್ರಾಮದ ಸುರೇಶ್ (45) ಮೃತಪಟ್ಟವರು. ಈತ ಮನೆ ಮನೆಗೆ ತೆರಳಿ ಕ್ಷೌರಿಕ ವೃತ್ತಿ ಮಾಡುತ್ತಿದ್ದ. ಶುಕ್ರವಾರ ಸಂಜೆ ಪುಣಜನೂರು ವನ್ಯಜೀವಿ ವಲಯದ ವ್ಯಾಪ್ತಿಗೆ ಬರುವ ಮೂಡಹಳ್ಳಿಯಿಂದ ಪಡಿತರ ಪಡೆದು ವಾಪಸ್ ಬರುತ್ತಿದ್ದಾಗ ಆನೆ ದಾಳಿ ನಡೆಸಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ರಾತ್ರಿ 8.30ರಿಂದ 9ಗಂಟೆ ಸುಮಾರಿಗೆ ಘಟನೆ ನಡೆದಿರುವ ಸಾಧ್ಯತೆ ಇದೆ. ಶನಿವಾರ ಬೆಳಗ್ಗೆ ನಮಗೆ ಮಾಹಿತಿ ಬಂತು. ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದೇವೆ ಎಂದು ಚಾಮರಾಜನಗರ ಪೂರ್ವ ಠಾಣೆಯ ಇನ್‌ಸ್ಪೆಕ್ಟರ್ ಆನಂದ್ ತಿಳಿಸಿದರು. ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಜಿ.ಸಂತೋಷ್‌ಕುಮಾರ್ ಪತ್ರಿಕೆಯೊಂದಿಗೆ ಮಾತನಾಡಿ, ಆನೆ ದಾಳಿ ಮಾಡಿದಂತೆ ಕಾಣುತ್ತಿದೆ. ಮರಣೋತ್ತರ ಪರೀಕ್ಷೆಯಿಂದ ನಿಖರವಾಗಿ ಗೊತ್ತಾಗಲಿದೆ. ಒಂದು ವೇಳೆ ಆನೆ ದಾಳಿಯಿಂದ ಸಾವು ಸಂಭವಿಸಿದ್ದರೆ, ನಿಯಮದಂತೆ ಮೃತರ ಕುಟುಂಬಕ್ಕೆ ಪರಿಹಾರ ನೀಡಲಾಗುವುದು ಎಂದರು.

ಮೂರನೇ ಪುಟದಿಂದ

ಮನೆ ಮನೆಗೆ ಗಂಗೆ

3,325 ಕೋಟಿ ನೀಡಿದ್ದು, ರಾಜ್ಯ ಸರಕಾರ 2,323 ಕೋಟಿ ಹಣವನ್ನು ಬಿಡುಗಡೆ ಮಾಡಿದೆ. ನೀರು ಪರೀಕ್ಷೆಗೆ 31 ಜಿಲ್ಲೆಗಳ 46 ತಾಲೂಕುಗಳಲ್ಲಿ ಪ್ರಯೋಗ ಶಾಲೆಗಳನ್ನು ನಾವು ಸ್ಥಾಪಿಸಿದ್ದೇವೆ. 18,600 ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. ಹಾಳಾದ ಘಟಕಗಳನ್ನು ದುರಸ್ತಿ ಮಾಡಿಸಲಾಗಿದೆ. ಈ ಯೋಜನೆ ಆರಂಭಕ್ಕೆ ಮುನ್ನ ರಾಜ್ಯದ ಶೇ. 25 ಮನೆಗಳಿಗೆ ನಳ್ಳಿನೀರಿನ ಸಂಪರ್ಕ ಇತ್ತು. ಇದಾದ ನಂತರ 20,56,650 ಮನೆಗಳಿಗೆ ಹೊಸದಾಗಿ ನೀರಿನ ಸಂಪರ್ಕ ಕೊಡಲಾಗಿದೆ. ಈಗ ಶೇ. 46ರಷ್ಟು ಮನೆಗಳಿಗೆ ಕೊಳಾಯಿ ನೀರಿನ ಸಂಪರ್ಕ ಇದೆ ಎಂದರು.

ಮನ್‌ರೇಗಾ ಮಹಾ ಸಾಧನೆ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ (ಮನ್‌ರೇಗಾ) ಪ್ರಗತಿಯಲ್ಲಿ ದಾಖಲೆ ಸಾಧನೆ ಮಾಡಿದ್ದೇವೆ. 2021–22ರಲ್ಲಿ 13 ಕೋಟಿ ಮಾನವ ದಿನಗಳ ಗುರಿ ಇದ್ದು, ಡಿಸೆಂಬರ್ 2021ರವೇಳೆಗೆ ಆ ಗುರಿ ತಲುಪಲಾಗಿತ್ತು. ಮತ್ತೆ ನಮ್ಮ ಕೋರಿಕೆ ಮೇರೆಗೆ 3 ಕೋಟಿ ಮಾನವ ದಿನಗಳನ್ನು ಕೇಂದ್ರ ಸರಕಾರ ನೀಡಿತು. ಮಾರ್ಚ್ ಅಂತ್ಯಕ್ಕೆ 3.13 ಕೋಟಿ ಮಾನವ ದಿನಗಳನ್ನು ಬಳಸಿಕೊಂಡು ಗುರಿ ಸಾಧನೆಗೆ ದಾಖಲೆ ಮಾಡಿದ್ದೇವೆ. ರಾಜ್ಯದ 32 ಲಕ್ಷ ಕುಟುಂಬಗಳು ಈ ಯೋಜನೆಯಲ್ಲಿ ಭಾಗವಹಿಸುತ್ತಿವೆ ಎಂದು ತಿಳಿಸಿದರು.

ಒಟ್ಟು 3,957.45 ಕೋಟಿ ರೂಪಾಯಿಯನ್ನು ಕೂಲಿ ರೂಪದಲ್ಲಿ ನೀಡುತ್ತಿದ್ದೇವೆ. 8.8 ಲಕ್ಷ ಪರಿಶಿಷ್ಟ ಜಾತಿ–ಪಂಗಡದ ಕುಟುಂಬಗಳು ಈ ಯೋಜನೆಯ ಲಾಭ ಪಡೆದುಕೊಂಡಿವೆ ಎಂದರು. 6.97 ಕೋಟಿ ಮಾನವ ದಿನಗಳನ್ನು ಮಹಿಳೆಯರಿಗೆ ನೀಡಿ ಮಹಿಳಾ ಸ್ವಾವಲಂಬನೆ ಸಾಧಿಸಲಾಗಿದೆ. 22,441 ದಿವ್ಯಾಂಗರು ಈ ಯೋಜನೆಯ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದು ವಿವರಿಸಿದರು.

ಕೇಂದ್ರದ ಜೊತೆ ಮಾತುಕತೆಯ ಬಳಿಕ ಮನ್‌ರೇಗಾಕ್ಕೆ ಕೂಲಿ ಹಣವನ್ನು 289 ರೂಪಾಯಿಯಿಂದ ಈಗ 309ಕ್ಕೆ ಹೆಚ್ಚಿಸಿದ್ದಾರೆ. ಬಾಂಡ್ಲಿ, ಪಿಕಾಸು ತಂದರೆ 10 ರೂಪಾಯಿ ಹೆಚ್ಚು ಕೂಲಿ ಕೊಡುತ್ತಿದ್ದಾರೆ. ಮಹಿಳೆ– ಪುರುಷರಿಗೆ ಸಮಾನವಾಗಿ ಕೂಲಿ ಕೊಡಲಾಗುತ್ತಿದೆ ಎಂದರು. ಹಿಂದೆ ಆರೆಂಟು ತಿಂಗಳ ಕಾಲ ಕೂಲಿ ಹಣ ಸಿಗುತ್ತಿರಲಿಲ್ಲ. ಭ್ರಷ್ಟಾಚಾರವೂ ಸಾಕಷ್ಟು ಆಗುತ್ತಿತ್ತು. ಪಿಡಿಒಗಳು ಕಡಿಮೆ ಕೂಲಿ ಕೊಡುವುದೂ ನಡೆಯುತ್ತಿತ್ತು. ಈಗ ನೇರವಾಗಿ ಕೂಲಿ ಹಣ ಬ್ಯಾಂಕ್ ಖಾತೆಗೇ 15 ದಿನಗಳೊಳಗೆ ಹಾಕಲಾಗುತ್ತಿದೆ ಎಂದು ನುಡಿದರು. ಜಲಧಾರೆ ಯೋಜನೆಯಡಿ ನಾವು ಮುಂಚೂಣಿಯಲ್ಲಿದ್ದೇವೆ ಎಂದರು. ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣ ನೈರ್ಮಲ್ಯ ಸಾಧನೆಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು 2021–22ನೇ ಸಾಲಿಗೆ 2,468 ಕೋಟಿ ರೂಪಾಯಿ ಬಿಡುಗಡೆ ಮಾಡಿವೆ. ಇದರಡಿ 2,211 ಕೋಟಿ ವೆಚ್ಚ ಮಾಡಿದ್ದೇವೆ. ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ 12,62,423 ವೈಯಕ್ತಿಕ ಗೃಹ ಶೌಚಾಲಯಗಳು, 1,496 ಸಮುದಾಯ ಶೌಚಾಲಯಗಳು ಹಾಗೂ 3,982 ಘನ–ದ್ರವ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ನಾವು ಸ್ಥಾಪಿಸಿದ್ದೇವೆ ಎಂದು ತಿಳಿಸಿದರು.

ಬೂಸ್ಟರ್ ಡೋಸ್

ನೀಡಲಾಗುವುದು. ಪ್ರಧಾನಿ ನರೇಂದ್ರ ಮೋದಿ ಸರ್ಕಾರ, ರೋಗ ಪೂರ್ವ ನಿಯಂತ್ರಣ ಕ್ರಮಗಳಿಗೆ ಹೆಚ್ಚು ಒತ್ತು ನೀಡಿದೆ. ಇದೇ ರೀತಿ ಕೋವಿಡ್ ಲಸಿಕಾಕರಣಕ್ಕೂ ವೇಗ ನೀಡಿದ್ದು, ದೇಶದಲ್ಲಿ ಈವರೆಗೆ 185 ಕೋಟಿ ಡೋಸ್ ಲಸಿಕೆ ನೀಡಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ನೇತೃತ್ವದ ನಮ್ಮ ಸರ್ಕಾರ ಲಸಿಕಾಕರಣವನ್ನು ಚುರುಕುಗೊಳಿಸಿರುವುದರಿಂದ, ಈವರೆಗೆ 10.47 ಕೋಟಿ ಡೋಸ್ ಲಸಿಕೆ ನೀಡಲಾಗಿದೆ. ಇದರ ಜೊತೆಗೆ, ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು, 60+ ವಯಸ್ಸಿನ ನಾಗರಿಕರಿಗೆ ಮುನ್ನೆಚ್ಚರಿಕೆ ಡೋಸ್ ನೀಡಲಾಗುತ್ತಿದೆ ಎಂದು ಸಚಿವರು ವಿವರಿಸಿದ್ದಾರೆ. ರಾಜ್ಯದಲ್ಲಿ ಈವರೆಗೆ, 12–14 ವಯೋಮಾನದವರಿಗೆ 13,27,985 ಮೊದಲ ಡೋಸ್ (65.6%), 15–17 ವಯೋಮಾನದವರಿಗೆ 25,09,276 ಮೊದಲ ಡೋಸ್ (79%) ಹಾಗೂ 20,48,576 ಎರಡನೇ ಡೋಸ್ (64.5%) ನೀಡಲಾಗಿದೆ. ಈವರೆಗೆ 15+ ವಯೋಮಾನದವರಿಗೆ 5,23,05,424 ಮೊದಲ ಡೋಸ್ (100.4%) ಹಾಗೂ 4,97,08,909 ಎರಡನೇ ಡೋಸ್ (95.4%) ನೀಡಲಾಗಿದೆ. 18+ ವಯೋಮಾನದವರಿಗೆ 4,97,96,148 ಮೊದಲ ಡೋಸ್ (101.8%) ಹಾಗೂ 4,76,60,333 ಎರಡನೇ ಡೋಸ್ (97.4%) ನೀಡಲಾಗಿದೆ. ಈವರೆಗೆ 14,24,433 (57.6%) ಮುನ್ನೆಚ್ಚರಿಕೆ ಲಸಿಕೆ ಡೋಸ್ ನೀಡಲಾಗಿದೆ. ಈ ಮೂಲಕ ರಾಜ್ಯವು ಲಸಿಕಾಕರಣದಲ್ಲಿ ಶ್ಲಾಘನೀಯ ಪ್ರಗತಿ ಸಾಧಿಸುತ್ತಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಕೇಂದ್ರ ಸರ್ಕಾರ ಮಾಡಿಕೊಟ್ಟ ಈ ಅವಕಾಶವನ್ನು ಎಲ್ಲರೂ ತಪ್ಪದೇ ಬಳಸಿಕೊಂಡು ಮುನ್ನೆಚ್ಚರಿಕೆ ಲಸಿಕೆ ಪಡೆಯಬೇಕು. ಎರಡು ಡೋಸ್‌ಗಳಂತೆ ಮುನ್ನೆಚ್ಚರಿಕೆ ಡೋಸ್ ಕೂಡ ಅಗತ್ಯ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಜೊತೆಗೆ ಕೋವಿಡ್ ಸುರಕ್ಷತಾ ಕ್ರಮಗಳನ್ನೂ ಪಾಲಿಸಬೇಕು ಎಂದು ಸಚಿವರು ಕೋರಿದ್ದಾರೆ.

ಬೂಸ್ಟರ್ ಡೋಸ್ ಬೆಲೆ 225 ರೂ.ಗೆ ಇಳಿಕೆ

ನವದೆಹಲಿ: ಪ್ರಮುಖ ಲಸಿಕೆ ತಯಾರಕ ಕಂಪನಿಗಳಾದ ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ(ಎಸ್‌ಐಐ) ಮತ್ತು ಭಾರತ್ ಬಯೋಟೆಕ್ ಶನಿವಾರ ತಮ್ಮ ಕೋವಿಡ್–19 ಲಸಿಕೆಗಳ ಬೂಸ್ಟರ್ ಡೋಸ್‌ನ ಬೆಲೆ ಕಡಿತಗೊಳಿಸಿದ್ದು, ಖಾಸಗಿ ಆಸ್ಪತ್ರೆಗಳಿಗೆ ಪ್ರತಿ ಡೋಸ್ 225 ರೂ.ಗೆ ಇಳಿಸಲು ನಿರ್ಧರಿಸಿವೆ. "ಕೇಂದ್ರ ಸರ್ಕಾರದೊಂದಿಗಿನ ಚರ್ಚೆಯ ನಂತರ, ಖಾಸಗಿ ಆಸ್ಪತ್ರೆಗಳಿಗೆ ಕೋವಿಶೀಲ್ಡ್ ಲಸಿಕೆ ದರವನ್ನು ಪ್ರತಿ ಡೋಸ್‌ಗೆ 600 ರಿಂದ 225 ರೂಪಾಯಿಗಳಿಗೆ ಇಳಿಸಲು ಸೆರಂ ನಿರ್ಧರಿಸಿದೆ ಎಂದು ಘೋಷಿಸಲು ನಾವು ಸಂತೋಷಪಡುತ್ತೇವೆ" ಎಂದು ಎಸ್‌ಐಐ ಸಿಇಒ ಆದರ್ ಪೂನಾವಾಲ ಟ್ವೀಟ್ ಮಾಡಿದ್ದಾರೆ.

ಸೆರಂ ಇನ್‌ಸ್ಟಿಟ್ಯೂಟ್ ಕೋವಿಡ್–19 ವಿರುದ್ಧದ ತನ್ನ ಕೋವಿಶೀಲ್ಡ್ ಲಸಿಕೆಯ ಬೂಸ್ಟರ್ ಡೋಸ್ 600 ರೂಪಾಯಿ ಬೆಲೆ ನಿಗದಿಪಡಿಸಿರುವುದಾಗಿ ಶುಕ್ರವಾರ ಹೇಳಿತ್ತು. ಇನ್ನು ಭಾರತ್ ಬಯೋಟೆಕ್ ಸಹ–ಸಂಸ್ಥಾಪಕಿ, ಜಂಟಿ ವ್ಯವಸ್ಥಾಪಕ ನಿರ್ದೇಶಕಿ ಸುಚಿತ್ರಾ ಸಹ ನಾವು ಕೋವ್ಯಾಕ್ಸಿನ್ ಬೆಲೆಯನ್ನು ಖಾಸಗಿ ಆಸ್ಪತ್ರೆಗಳಿಗೆ 1,200 ರೂ.ಗಳಿಂದ 225 ರೂ.ಗೆ ಕಡಿತಗೊಳಿಸಲು ನಿರ್ಧರಿಸಿದ್ದೇವೆ ಎಂದಿದ್ದಾರೆ.

ಮತ್ತೆ ತಲೆ ನೋವು

ಬಸವರಾಜ ಬೊಮ್ಮಾಯಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾಗೆ ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಕರ್ನಾಟಕ ಬಿಜೆಪಿ ಸರ್ಕಾರದಡಿಯಲ್ಲಿ ನಡೆದ ಭಾರತದ ಅತೀ ದೊಡ್ಡ ಬಿಟ್‌ಕಾಯಿನ್ ಹಗರಣದ ತನಿಖೆ ಮಾಡಲು ಎಫ್‌ಬಿಐ ಭಾರತದಲ್ಲಿ ಇದೆಯೇ ಎಂದು ಪ್ರಶ್ನಿಸಿದ್ದಾರೆ.

ಹಾಗಿದ್ದರೆ, ತನಿಖೆಯ ಹಾಗೂ ರಾಜಕೀಯ ವ್ಯಕ್ತಿಗಳೂ ಸೇರಿದಂತೆ ಶಂಕಿತರ ವಿವರಗಳನ್ನು ಬಿಡುಗಡೆ ಮಾಡಿದ್ದೀರಾ ಎಂದು ಪ್ರಶ್ನಿಸಿದ್ದಾರೆ. ಎಷ್ಟು ಬಿಟ್ ಕಾಯಿನ್ ಕದ್ದಿದ್ದಾರೆ ಮತ್ತು ಅವು ಎಷ್ಟು ಮೌಲ್ಯದ್ದು, ರಾಜ್ಯದಲ್ಲಿ ಯಾರ್‍ಯಾರು ಭಾಗಿಯಾಗಿದ್ದಾರೆ. ಕದ್ದ ಬಿಟ್‌ಕಾಯಿನ್‌ಗಳನ್ನು ಹ್ಯಾಕರ್ ಶ್ರೀಕೃಷ್ಣನ ವ್ಯಾಲೆಟ್‌ನಿಂದ ವರ್ಗಾಯಿಸಲಾಗಿದೆಯೇ ಎಂದು ಕೇಳಿದ್ದಾರೆ. ಹಗರಣದ ಬಯಲಿಗೆ ಅಂದಿನ ಗೃಹ ಸಚಿವರಾಗಿದ್ದ ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಇತರ ಸಚಿವರ ಜವಾಬ್ದಾರಿ ಏನು ಎಂದೆಲ್ಲ ಪ್ರಶ್ನಿಸಿದ್ದಾರೆ. ಬಿಜೆಪಿ ಸರ್ಕಾರ ಎನ್‌ಐಎ ಹಾಗೂ ಇ.ಡಿ.ಗೆ ಯಾಕೆ ಮಾಹಿತಿ ನೀಡಿಲ್ಲ ಎಂದು ಪ್ರಶ್ನೆ ಮಾಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಟ್ ಕಾಯಿನ್‌ಗೂ ನನಗೂ ಸಂಬಂಧವಿಲ್ಲ. ನಾನು ಈಗಾಗಲೇ ವಿಧಾನಸಭೆಯಲ್ಲೇ ಸ್ಪಷ್ಟಣೆ ನೀಡಿದ್ದೇನೆ. ಹಗರಣಕ್ಕೆ ಸಂಬಂಧಿಸಿದಂತೆ ದಾಖಲೆಗಳಿದ್ದರೆ, ಬಹಿರಂಗ ಮಾಡಿ, ಅನಗತ್ಯ ಆರೋಪ ಬೇಡ ಎಂದಿದ್ದಾರೆ.

ಹೆಣ್ಣು ಮಗು ಮಾರಾಟ

ಮಗುವನ್ನು ಮಾರಾಟ ಮಾಡಿರುವ ಬಗ್ಗೆ ಮಕ್ಕಳ ಸಹಾಯವಾಣಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿಗಳಿಗೆ ಅನಾಮಧೇಯ ವ್ಯಕ್ತಿಯೋರ್ವ ದೂರವಾಣಿ ಕರೆ ಮಾಡಿ ಮಾಹಿತಿ ನೀಡಿದ್ದರು. ಈ ಮಾಹಿತಿ ಆಧರಿಸಿ ಅಧಿಕಾರಿಗಳು ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆ ಹಾಗೂ ವಿಶ್ವನಾಥ ಕಾಲೋನಿಯ ಮಹಿಳೆಯ ಮನೆಗೆ ಭೇಟಿ ನೀಡಿ ವಿಚಾರಣೆ ನಡೆಸಿದ್ದಾರೆ. ಈ ವೇಳೆ ತಮಗೆ ಈಗಾಗಲೇ 2 ಗಂಡು, 2 ಹೆಣ್ಣು ಸೇರಿದಂತೆ ನಾಲ್ವರು ಮಕ್ಕಳಿರುವುದರಿಂದ ಐದನೇ ಮಗುವನ್ನು ಮಕ್ಕಳಿಲ್ಲದ ದಂಪತಿಗೆ ಮಧ್ಯವರ್ತಿ ಮೂಲಕ ದಾನ ಮಾಡಿದ್ದೇವೆಯೇ ಹೊರತು ಮಾರಾಟ ಮಾಡಿಲ್ಲ ಎಂದು ಅಧಿಕಾರಿಗಳಿಗೆ ಮಗುವಿನ ತಂದೆ, ತಾಯಿ ತಿಳಿಸಿದರು ಎನ್ನಲಾಗಿದೆ. ನಂತರ ಅಧಿಕಾರಿಗಳು ಮಧ್ಯವರ್ತಿ ಮಹಿಳೆ ಮೂಲಕ ಮಗುವನ್ನು ಪಡೆದಿದ್ದ ನಂಜನಗೂಡು ತಾಲೂಕು ಚನ್ನಪಟ್ಟಣ ಗ್ರಾಮದ ದಂಪತಿಗೆ ಕರೆ ಮಾಡಲಾಗಿ, ಅವರು ಕೂಡ ಮಕ್ಕಳಿಲ್ಲದ ತಾವು ಹೆಣ್ಣು ಮಗುವನ್ನು ದಾನವಾಗಿ ಪಡೆದಿದ್ದೇವೇಯೇ ಹೊರತು ಖರೀದಿ ಮಾಡಿಲ್ಲ ಎಂದು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಈ ವೇಳೆ ಮಕ್ಕಳ ಸಹಾಯವಾಣಿಯ ತಾಲೂಕು ನಿರ್ದೇಶಕ ಪ್ರಭು ಅವರು, ತಕ್ಷಣವೇ ಮಗುವನ್ನು ತಂದು ತಾಯಿಗೆ ನೀಡದಿದ್ದರೇ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುವುದಾಗಿ ಎಚ್ಚರಿಕೆ ನೀಡಿದ ನಂತರ ಚನ್ನಪಟ್ಟಣ ದಂಪತಿ ಶನಿವಾರ ಮಧ್ಯಾಹ್ನ ಮಗುವನ್ನು ತಂದು ಅಧಿಕಾರಿಗಳ ಸಮ್ಮುಖದಲ್ಲಿ ತಾಯಿಗೆ ನೀಡಿದ್ದಾರೆ. ಮಕ್ಕಳ ಸಹಾಯವಾಣಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಮಗುವಿನ ತಂದೆ, ತಾಯಿ, ಮಧ್ಯವರ್ತಿ ಮಹಿಳೆ ಹಾಗೂ ಮಗುವನ್ನು ಪಡೆದಿದ್ದ ದಂಪತಿ ಸೇರಿ ಐವರ ವಿರುದ್ಧ ಮಗು ಮಾರಾಟ ಪ್ರಕರಣ ದಾಖಲಿಸಲಾಗಿದೆ.

ಇಂಡಿಗೋ ವಿಮಾನ ಸೇವೆ

ಸಚಿವ ಜೋಶಿಯವರು ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದ್ದಾರೆ. ಇಂಡಿಗೋ ಮೇ 1ರಿಂದ ವಾರದಲ್ಲಿ 4 ದಿನ ಮಂಗಳೂರಿಗೆ ವಿಮಾನ ಹಾರಾಟ ನಡೆಸಲಿದ್ದು, ಏ.27ರಿಂದ ಹುಬ್ಬಳ್ಳಿಯಿಂದ ಹೈದರಾಬಾದ್‌ಗೆ ದೈನಂದಿನ ವಿಮಾನ ಕಾರ್ಯಾಚರಣೆ ಘೋಷಿಸಿದೆ. ವಿಮಾನವು ಹುಬ್ಬಳ್ಳಿಯಿಂದ ಬೆಳಗ್ಗೆ 8 ಗಂಟೆಗೆ ಹೊರಟು 9.10ಕ್ಕೆ ಹೈದರಾಬಾದ್‌ಗೆ ತಲುಪಲಿದೆ. ಹೈದರಾಬಾದ್‌ನಿಂದ ಬೆಳಗ್ಗೆ 9.40ಕ್ಕೆ ಹೊರಟು 11 ಗಂಟೆಗೆ ಹುಬ್ಬಳ್ಳಿಗೆ ಬರಲಿದೆ.

ಚಾಮುಂಡಿಬೆಟ್ಟದಲ್ಲಿ ರೋಪ್‌ವೇ, ರೇಲಿಂಗ್ಸ್ ಬೇಡವೇ ಬೇಡ

ಸಾಹಿತಿಗಳು, ಚಿಂತಕರ ಮೂಲಕ ಮುಖ್ಯಮಂತ್ರಿ ಸೇರಿದಂತೆ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲು ಚಾಮುಂಡಿಬೆಟ್ಟ ಉಳಿಸಿ ಸಮಿತಿ ನಿರ್ಧಾರ

ಕಿರು ಹೊತ್ತಿಗೆ, ಸಾಮಾಜಿಕ ಜಾಲತಾಣಗಳು, ಬೀದಿ ನಾಟಕಗಳ ಮೂಲಕ ಸಾರ್ವಜನಿಕರಲ್ಲಿ ಅರಿವು



ಮೈಸೂರು,ಏ.9(ಎಂಟಿವೈ)– ಚಾಮುಂಡಿ ಬೆಟ್ಟದ ರಕ್ಷಣೆಗಾಗಿ ಹೋರಾಟ ನಡೆಸುತ್ತಿರುವ ಚಾಮುಂಡಿಬೆಟ್ಟ ಉಳಿಸಿ ಸಮಿತಿಯು ಚಾಮುಂಡಿಬೆಟ್ಟಕ್ಕೆ ರೋಪ್ ವೇ, ಮೆಟ್ಟಿಲುಗಳಿಗೆ ರೇಲಿಂಗ್ಸ್ ನಿರ್ಮಾಣ ಸೇರಿದಂತೆ ಬೆಟ್ಟದ ಮೇಲೆ ಕೈಗೊಳ್ಳಲುದ್ದೇಶಿಸಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ವಿರೋಧಿಸಿ ಸಾಹಿತಿಗಳು ಮತ್ತು ಚಿಂತಕರಿಂದ ಪತ್ರ ಬರೆಸಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸುವ ಮೂಲಕ ಅಭಿಯಾನ ನಡೆಸಲು ನಿರ್ಧರಿಸಿದೆ.

ಚಾಮುಂಡಿಬೆಟ್ಟ ಉಳಿಸಿ ಸಮಿತಿ ಹಾಗೂ ಪರಿಸರ ಬಳಗದ ವತಿಯಿಂದ ಇತ್ತೀಚೆಗೆ ನಡೆದ ದುಂಡು ಮೇಜಿನ ಸಭೆಯಲ್ಲಿ ಪಾಲ್ಗೊಂಡಿದ್ದ ಪರಿಸರ ಬಳಗದ ಸದಸ್ಯರು ಮೈಸೂರಿನ ಗೋಕುಲಂ ಮೂರನೇ ಹಂತದ ಕಾಂಟೂರ್ ರಸ್ತೆಯಲ್ಲಿರುವ ಶ್ಯಾಗಲೆ ಶಿವರುದ್ರಮ್ಮ ಟ್ರಸ್ಟ್ ಸಭಾಂಗಣದಲ್ಲಿ ಸಭೆ ಸೇರಿ ಒಕ್ಕೊರಲಿನಿಂದ ರೋಪ್ ವೇ, ರೇಲಿಂಗ್ಸ್ ನಿರ್ಮಾಣ ಹಾಗೂ ಬೆಟ್ಟದ ಮೇಲೆ 'ಪ್ರಸಾದ್' ಯೋಜನೆಯಡಿ ನಡೆಸಲು ಉದ್ದೇಶಿಸಿರುವ ಅಭಿವೃದ್ಧಿ ಕಾಮಗಾರಿಗಳ ತಡೆಗೆ ಹಂತ ಹಂತವಾಗಿ ವಿವಿಧ ಹೋರಾಟ ನಡೆಸಲು ಹಾಗೂ ಸಾಹಿತಿ ಮತ್ತು ಚಿಂತಕರ ಬೆಂಬಲ ಪಡೆದು ಮುಖ್ಯಮಂತ್ರಿ ಸೇರಿದಂತೆ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲು ಸಮ್ಮತಿಸಿದರು.

ಬೆಟ್ಟದಲ್ಲಿ ಕಾಂಕ್ರಿಟ್‌ಗಳ ಕಟ್ಟಡಗಳ ನಿರ್ಮಾಣದಿಂದಾಗಿ ಬೆಟ್ಟದ ಮೇಲೆ ಒತ್ತಡ ಹೆಚ್ಚಾಗಿ ಕುಸಿತ ಸಂಭವಿಸಲಿದೆ. ಇದರಿಂದ ಮುಂದಿನ ಪೀಳಿಗೆಗೆ ಚಾಮುಂಡಿ ಬೆಟ್ಟದ ಉಳಿವಿಗಾಗಿ ಎಲ್ಲರೂ ಬೆಟ್ಟದ ರಕ್ಷಣೆಗೆ ಪಣ ತೊಡಬೇಕು. ಅಧಿಕಾರಶಾಹಿಗಳ ಏಕಪಕ್ಷೀಯ ನಿರ್ಧಾರದಿಂದ ಬೆಟ್ಟಕ್ಕೆ ಅನಾಹುತ ಸಂಭವಿಸದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ. ಈ ನಿಟ್ಟಿನಲ್ಲಿ ಬೆಟ್ಟ ಉಳಿಸಿ ಹೋರಾಟ ಸಮಿತಿಯನ್ನು ಹೋರಾಟ ಎಂಬ ಪದ ತೆಗೆದು ಚಾಮುಂಡಿಬೆಟ್ಟ ಉಳಿಸಿ ಸಮಿತಿ ಎಂದಷ್ಟೇ ಮಾಡಲಾಗಿದೆ. ಬೆಟ್ಟ ಉಳಿಸುವುದು ಮೈಸೂರಿಗರ ಕರ್ತವ್ಯವೂ ಆಗಿದೆ. ಕೇವಲ ಪ್ರವಾಸೋದ್ಯಮದ ದೃಷ್ಟಿಯಿಂದ ಬೆಟ್ಟವನ್ನು ಅಭಿವೃದ್ಧಿ ಪಡಿಸುವುದು ಸರಿಯಲ್ಲ ಎಂದು ಪರಿಸರ ಪ್ರೇಮಿಗಳು ಅಭಿಪ್ರಾಯಪಟ್ಟರು.

ರೋಪ್‌ವೇ ನಿರ್ಮಾಣಕ್ಕೆ ವಿರೋಧಿಸುವವರ ಸಂಖ್ಯೆ ಹೆಚ್ಚಾಗಿದೆ. ಸಂಸದ ವಿ.ಶ್ರೀನಿವಾಸಪ್ರಸಾದ್, ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಸಾಹಿತಿ ದೇವನೂರು ಮಹದೇವ ಸೇರಿದಂತೆ ಅನೇಕ ಪರಿಸರವಾದಿಗಳು, ಚಿಂತಕರು, ಸಾಹಿತಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದನ್ನು ಜನಪ್ರತಿನಿಧಿಗಳಿಗೆ ಮನವರಿಕೆ ಮಾಡಿಕೊಡಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು.

ಬೆಟ್ಟದ ರಕ್ಷಣೆಗಾಗಿ ಸಾಹಿತಿಗಳು, ಕವಿಗಳು, ಚಿಂತಕರನ್ನು ಭೇಟಿ ಮಾಡಿ ರೋಪ್ ವೇ ನಿರ್ಮಾಣ ಸೇರಿದಂತೆ ಯಾವುದೇ ಅಭಿವೃದ್ಧಿ ಕಾಮಗಾರಿ ನಡೆಸದಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆಯುವಂತೆ ಕೋರಲು ನಿರ್ಧರಿಸಲಾಯಿತು. ಬೆಟ್ಟಕ್ಕೆ ರೋಪ್‌ವೇ ನಿರ್ಮಾಣ ಮಾಡಿದರೆ ಅದರಿಂದಾಗುವ ಅಪಾಯ, ಪರಿಸರದ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ತಜ್ಞರು ನೀಡಿರುವ ವರದಿ, ವೈಜ್ಞಾನಿಕ ಮಾಹಿತಿಗಳೊಂದಿಗೆ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರು, ಅರಣ್ಯ ಸಚಿವರು, ಮುಜರಾಯಿ ಸಚಿವರು, ಸಂಸದರಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು. ಸ್ಥಳೀಯ ಶಾಸಕರನ್ನು ಖುದ್ದು ಭೇಟಿ ಮಾಡಿ ರೋಪ್‌ವೇ ವಿರೋಧಿಸುವಂತೆ ಮನವರಿಕೆ ಮಾಡಿಕೊಡುವುದಕ್ಕೂ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಲಾಯಿತು.

ಚಾಮುಂಡಿಬೆಟ್ಟಕ್ಕೆ ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತುವ ಸಾರ್ವಜನಿಕರು ಹಾಗೂ ನಗರದ ಸಾವಿರಾರು ಜನರಿಗೆ ಬೆಟ್ಟಕ್ಕೆ ಆಗುವ ಅಪಾಯಗಳ ಬಗ್ಗೆ ಅರಿವು ಮೂಡಿಸಲು ಕಿರುಹೊತ್ತಿಗೆ ಪ್ರಕಟಿಸಿ ಸಾರ್ವಜನಿಕರಿಗೆ ಹಂಚಿಕೆ ಮಾಡುವುದು. ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ಮಾಡುವುದು. ಮತ್ತೊಂದೆಡೆ ಕಲಾವಿದರನ್ನು ಬಳಸಿಕೊಂಡು ಆಯ್ದ ಸ್ಥಳಗಳಲ್ಲಿ ಬೀದಿ ನಾಟಕ ಪ್ರದರ್ಶನ ಆಯೋಜಿಸುವುದಕ್ಕೂ ಚಿಂತನೆ ನಡೆಸಿದ್ದು, ಶೀಘ್ರದಲ್ಲೇ ಇದರ ರೂಪುರೇಷೆಗಳನ್ನು ರೂಪಿಸಲು ಸಮ್ಮತಿಸಲಾಯಿತು. ಪರಿಸರ ಬಳಗವು ಸಹಿ ಸಂಗ್ರಹ ಆರಂಭಿಸಿದಾಗ ಗಣ್ಯರಿಂದ ಬೆಂಬಲ ವ್ಯಕ್ತವಾಗಿರಲಿಲ್ಲ. ಆದರೆ, ಈಗ ಬೆಟ್ಟ ಉಳಿಸುವ ವಿಚಾರದಲ್ಲಿ ಅನೇಕ ಹಿರಿಯರು ಧ್ವನಿ ಎತ್ತಿದ್ದಾರೆ. ಸರ್ಕಾರಕ್ಕೆ ಅಧಿಕೃತವಾಗಿ ಮನವಿ ಪತ್ರವನ್ನು ಸಲ್ಲಿಸಿ ರೋಪ್‌ವೇ ಯೋಜನೆ ಕೈಬಿಡುವಂತೆ ಒತ್ತಡ ಹೇರುವುದು. ಸಾಧ್ಯವಾದರೆ ಸಿಎಂ ಅವರನ್ನು ಖುದ್ದು ಭೇಟಿ ಮಾಡಿ ಮನವರಿಕೆ ಮಾಡಿಕೊಡುವುದಕ್ಕೂ ನಿರ್ಧರಿಸಲಾಯಿತು.

ಸಭೆಯಲ್ಲಿ ಪ್ರೊ.ಕೆ.ಕಾಳಚನ್ನೇಗೌಡ ಮಾತನಾಡಿ, ಚಾಮುಂಡಿಬೆಟ್ಟಕ್ಕೆ ಮಾರಕವಾಗಿರುವ ರೋಪ್‌ವೇ ಯೋಜನೆ ಕೈಬಿಡುವಂತೆ ಮನವಿ ಪತ್ರ ಸಲ್ಲಿಸೋಣ. ನಂತರ ಸರ್ಕಾರದ ಮಟ್ಟದಿಂದ ಬರುವ ಪ್ರತಿಕ್ರಿಯೆ ಆಧಾರದ ಮೇಲೆ ಮುಂದಿನ ಹೆಜ್ಜೆ ಇಡಬೇಕು. ಈಗಾಗಲೇ ಸರ್ಕಾರ ಆಯವ್ಯಯದಲ್ಲಿ ಘೋಷಣೆ ಮಾಡಿರುವ ಕಾರಣ ಮುಖ್ಯಮಂತ್ರಿಗಳನ್ನು ನೇರವಾಗಿ ಭೇಟಿ ಮಾಡಿ ಸಮಾಲೋಚಿಸಬೇಕು. ಅಲ್ಲಿಯ ತಜ್ಞರು ಸಂಗ್ರಹಿಸಿರುವ ಮಾಹಿತಿ, ವರದಿಯನ್ನು ಕ್ರೋಢೀಕರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಮಾತನಾಡಿ, ಬೆಟ್ಟ ಉಳಿಸುವ ವಿಚಾರದಲ್ಲಿ ಮೈಸೂರಿಗರು ಸಂಪೂರ್ಣ ಬೆಂಬಲ ಕೊಡಲಿದ್ದಾರೆ. ರೋಪ್‌ವೇ ನಿರ್ಮಾಣದ ಪರವಾಗಿಯೂ ಒಂದಿಬ್ಬರು ಜನಪ್ರತಿನಿಧಿಗಳು ಬಿಟ್ಟರೆ ಉಳಿದವರು ವಿರೋಧ ವ್ಯಕ್ತಪಡಿಸಿದ್ದಾರೆ. ಪ್ರತಿಯೊಬ್ಬ ಶಾಸಕರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸೋಣ. ಸ್ವಾಮೀಜಿಗಳು, ಹಿರಿಯ ಮುಖಂಡರ ಸಲಹೆ ಪಡೆದು ಮುಂದಿನ ಹೋರಾಟಗಳ ಕುರಿತಂತೆ ತೀರ್ಮಾನ ಮಾಡೋಣ ಎಂದರು.

ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷೆ ಮಾಳವಿಕ ಗುಬ್ಬಿವಾಣಿ ಮಾತನಾಡಿ, ರೋಪ್ ವೇ ಬೇಡ ಎನ್ನುವ ವಿಚಾರಕ್ಕೆ ವೈಜ್ಞಾನಿಕ ಮತ್ತು ಅನಾಹುತಗಳ ಬಗ್ಗೆ ಮಾಹಿತಿ ಸಂಗ್ರಹಿಸಿಕೊಂಡು ಹೆಜ್ಜೆ ಇಡಬೇಕು. ಮುಂದಿನ ದಿನಗಳಲ್ಲಿ ಪರಿಣಾಮಕಾರಿ ಹೋರಾಟ ಮಾಡಬೇಕು. ಆದಾಯದ ಮೂಲದಲ್ಲಿ ಚಾಮುಂಡಿ ಬೆಟ್ಟವನ್ನು ನೋಡದೆ ಧಾರ್ಮಿಕವಾಗಿ ನೋಡಬೇಕು. ಪ್ರವಾಸೋದ್ಯಮ ಆಕರ್ಷಿಸಲು ಉದ್ಯಮಿಗಳು ಒತ್ತಡ ಹೇರುತ್ತಿದ್ದಾರೆ. ಮುಂದೆ ಮೈಸೂರು ಉಳಿಸಬೇಕು ಎನ್ನುವ ಹೋರಾಟ ಮಾಡಬೇಕಾದ ಸನ್ನಿವೇಶ ನಿರ್ಮಾಣವಾಗಲಿದೆ ಎಂದರು.

ಸಭೆಯಲ್ಲಿ ಪ್ರೊ.ಕಾಳೇಗೌಡ ನಾಗವಾರ, ಪರಿಸರ ಬಳಗದ ಸದಸ್ಯರಾದ ಪರಶುರಾಮೇಗೌಡ, ರಾಮೇಗೌಡ, ಪ್ರಭಾನಂದೀಶ್, ಲೀಲಾ ಶಿವಕುಮಾರ್, ಸುಗುಣ, ಎಸ್.ಶೈಲೇಶ್, ಆನಂದ್, ಶಿಲ್ಪಾಕಿರಣ್, ಸುಶೀಲಾ, ಕುಸುಮ ಆಯರಹಳ್ಳಿ, ಡಿ.ಎಸ್.ಚಂದ್ರಶೇಖರ್, ಕಿರಣ್, ಎಂ.ಗಂಟಯ್ಯ, ಎಸ್.ವಿ.ರಾಘವೇಂದ್ರ, ಅಶೋಕ್, ಜವರಪ್ಪ, ಬಿ.ಪಿ.ರಾಜು ಇನ್ನಿತರರು ಪಾಲ್ಗೊಂಡಿದ್ದರು.

ಮುಸ್ಲಿಂರ ಹೊಟ್ಟೆಯ ಮೇಲೆ ಹೊಡೆಯುವ ಕೆಲಸವನ್ನು ಯಾರೂ ಮಾಡಬಾರದು: ವಿಶ್ವನಾಥ್

ಪೂರ್ಣಚಂದ್ರ ತೇಜಸ್ವಿ ಚಿಂತನೆ ಸಂಬಂಧಿತ ಸಂವಾದದಲ್ಲಿ ಭಾಗಿ



ಮೈಸೂರು, ಏ. 9– ತಮ್ಮ ಬರಹಗಳಿಂದ ಪೂರ್ಣಚಂದ್ರ ತೇಜಸ್ವಿಯವರಷ್ಟು ಯುವಜನರನ್ನು ಸೆಳೆದವರನ್ನು ಈವರೆಗೂ ನಾನು ಕಂಡಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರಿನ ಹೂಟಗಳ್ಳಿಯಲ್ಲಿರುವ ಒಡನಾಡಿ ಸೇವಾ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ 'ಪ್ರಸ್ತುತ ವಿದ್ಯಮಾನದಲ್ಲಿ ತೇಜಸ್ವಿ ಚಿಂತನೆ' ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದ ಅವರು, ವಿಶ್ವಮಾನವ ತತ್ವದ ಪ್ರತಿಪಾದಕರಾದ ಕುವೆಂಪು ಅವರ ಮಗನಾಗಿ ಜನಿಸಿದ ತೇಜಸ್ವಿಯವರು ತಮ್ಮದೇ ಆದ ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಸಾಹಿತ್ಯ ವಲಯದಲ್ಲಿ ಪ್ರಕಾಶಿಸಿದರು ಎಂದರು.

ಸಂವಾದದಲ್ಲಿ ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕ ಪರಶುರಾಮ್ ಅವರು ಪ್ರಸ್ತುತ ದಿನಗಳಲ್ಲಿ ಉಸಿರು ಕಟ್ಟುವ ವಾತಾವರಣವಿದೆ. ಯಾರೋ ಅವಿವೇಕಿಗಳು ರಾಜಕೀಯ ಮಾಡುತ್ತಾ ಸಮಾಜದ ಸಾಮರಸ್ಯ ಹಾಳು ಮಾಡುತ್ತಿದ್ದಾರೆ. ಅಂತಹವರ ವಿರುದ್ಧ ಕ್ರಮ ಕೈಗೊಳ್ಳಬೇಕಲ್ಲವೇ? ಎಂದು ಪ್ರಶ್ನಿಸಿದಾಗ, ಹಿಜಾಬ್, ಹಲಾಲ್, ಜಟ್ಕಾ, ಆಜಾನ್ ಹೆಸರಿನಲ್ಲಿ ಧರ್ಮ ಧರ್ಮಗಳ ನಡುವೆ ಬೆಂಕಿ ಹಚ್ಚುವವರನ್ನು ಒದೆಯಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದ ವಿಶ್ವನಾಥ್, ಮುಸ್ಲಿಂ ಎನ್ನುವ ಕಾರಣಕ್ಕೆ ವ್ಯಾಪಾರವನ್ನು ತಡೆದು ಅವರ ಹೊಟ್ಟೆಯ ಮೇಲೆ ಹೊಡೆಯುವ ಕೆಲಸವನ್ನು ಮಾಡಬಾರದು. ಎಲ್ಲಾ ಸಮುದಾಯದವರು ಸಾಂಘಿಕವಾಗಿ ಒಬ್ಬರಿಗೊಬ್ಬರು ಸಹಕಾರ ನೀಡುತ್ತಾ ಬದುಕಬೇಕು. ಪ್ರತಿಯೊಂದು ಸಮುದಾಯದವರಿಗೂ ಅವರದೇ ಆದ ವೃತ್ತಿಗಳಿವೆ. ಅದನ್ನು ಮಾಡಿಕೊಂಡು ಅವರು ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಎತ್ತುಗಳ ಕಾಲಿಗೆ ಲಾಳ ಹಾಕುವ ಕೆಲಸವನ್ನು ಮುಸ್ಲಿಂ ಸಮುದಾಯ ಮಾಡುತ್ತಾ ಬಂದಿದೆ. ಅವರು ವ್ಯಾಪಾರ ಮಾಡಬಾರದು ಎಂದು ಹೇಳುವವರು ಲಾಳ ಹೊಡೆದುಕೊಳ್ಳುತ್ತಾರೆಯೇ ಎಂದು ಪ್ರಶ್ನಿಸಿದರು. ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕ ಸ್ಟ್ಯಾನ್ಲಿ ಉಪಸ್ಥಿತರಿದ್ದರು.

ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಪದಚ್ಯುತಿ


ಇಸ್ಲಾಮಾಬಾದ್, ಏ.9– ಯಾವುದೇ ಕಾರಣಕ್ಕೂ ರಾಜೀನಾಮೆ ಕೊಡುವುದಿಲ್ಲ. ಅಧಿಕಾರ ಉಳಿಸಿಕೊಳ್ಳಲು ಕೊನೆಯ ಬಾಲ್‌ವರೆಗೂ ಆಡುತ್ತೇನೆ ಎಂದು ಹೇಳಿಕೆ ನೀಡಿದ್ದ ಪಾಕಿಸ್ತಾನ ಪ್ರಧಾನಿ ಇಮ್ರಾನ್‌ಖಾನ್ ಶನಿವಾರ ಮಧ್ಯರಾತ್ರಿ ಅವಿಶ್ವಾಸ ನಿರ್ಣಯವೆಂಬ ಬಾಲ್‌ಗೆ ಕ್ಲೀನ್ ಬೌಲ್ಡ್ ಆಗಿದ್ದಾರೆ.



ಶನಿವಾರ ರಾತ್ರಿ 10.30ರೊಳಗೆ ವಿಶ್ವಾಸಮತ ಸಾಬೀತುಪಡಿಸಬೇಕೆಂದು ಪಾಕಿಸ್ತಾನ ಸುಪ್ರೀಂಕೋರ್ಟ್ ಇಮ್ರಾನ್ ಖಾನ್ ಅವರಿಗೆ ಆದೇಶ ನೀಡಿತ್ತು. ಆದರೆ, ಅವಿಶ್ವಾಸ ನಿರ್ಣಯ ಮತದಲ್ಲಿ ಸೋಲು ಖಚಿತ ಎಂಬುದನ್ನು ಅರಿತಿದ್ದ ಇಮ್ರಾನ್‌ಖಾನ್ ವಿನಾಕಾರಣ ಕಾಲಹರಣ ಮಾಡುತ್ತಿದ್ದರು. ಸುಪ್ರೀಂಕೋರ್ಟ್ ತನ್ನ ಆದೇಶವನ್ನು ಮರುಪರಿಶೀಲನೆ ನಡೆಸಬೇಕು ಎಂದು ಅರ್ಜಿಯನ್ನೂ ಸಲ್ಲಿಸಿದ್ದರು. ಮತ್ತೊಂದೆಡೆ ತಮ್ಮ ನಿವಾಸದಲ್ಲಿ ಸಂಪುಟ ಸಭೆ ನಡೆಸುವ ನೆಪದಲ್ಲಿ ಸಂಸತ್‌ಗೆ ಬಾರದೆ ಮನೆಯಲ್ಲೇ ಕುಳಿತಿದ್ದರು.

ಆದರೆ ರಾತ್ರಿ 10.30ರ ಗಡುವು ಮುಗಿಯುತ್ತಿದ್ದಂತೆಯೇ ವಿಪಕ್ಷಗಳು ಸುಪ್ರೀಂ ಕೋರ್ಟ್‌ಗೆ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದವು. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಮೂರ್ತಿ ಅರ್ಜಿ ವಿಚಾರಣೆಗೆ ಅಂಗೀಕರಿಸುತ್ತಿದ್ದಂತೆಯೇ ಇಮ್ರಾನ್‌ಖಾನ್ ಸಂಸತ್‌ಗೆ ಆಗಮಿಸಿದರು. ಅತ್ತ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಯುತ್ತಿದ್ದರೆ, ಇತ್ತ ಅವಿಶ್ವಾಸ ನಿರ್ಣಯದ ಮೇಲೆ ಮತದಾನದಲ್ಲಿ ಇಮ್ರಾನ್‌ಖಾನ್ ಸೋಲನ್ನನುಭವಿಸಿ ಪ್ರಧಾನಿಪಟ್ಟ ಕಳೆದುಕೊಂಡು ಹೊರ ನಡೆದರು.


ಇಮ್ರಾನ್‌ಖಾನ್ ತಮ್ಮ ನಿವಾಸದಲ್ಲಿ ಸಂಪುಟ ಸಭೆ ನಡೆಸುತ್ತಿದ್ದ ವೇಳೆ ಅವರ ಮನೆ ಟೆರಸ್ ಮೇಲೆ ಹೆಲಿಕಾಪ್ಟರ್ ನಿಲ್ಲಿಸಲಾಗಿತ್ತು. ಆಗ ಇಮ್ರಾನ್ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿ ಹೆಲಿಕಾಪ್ಟರ್ ಮೂಲಕ ವಿದೇಶಕ್ಕೆ ಪಲಾಯನ ಮಾಡುತ್ತಾರೆ ಎಂಬ ಮಾತುಗಳು ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ ಪಾಕಿಸ್ತಾನದಿಂದ ಯಾವುದೇ ಜನಪ್ರತಿನಿಧಿ ಹೊರದೇಶಕ್ಕೆ ಹೋಗಲು ಅವಕಾಶ ನೀಡಬಾರದು ಎಂದು ಪಾಕಿಸ್ತಾನ ವಾಯುಪಡೆ ದೇಶದ ಎಲ್ಲಾ ವಿಮಾನ ನಿಲ್ದಾಣಗಳಿಗೂ ಸೂಚನೆ ನೀಡಿತು. ಜೊತೆಗೆ ವಿಮಾನ ನಿಲ್ದಾಣಗಳಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ.



ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ವಕೀಲ ಸಿದ್ದರಾಜು ಅವರನ್ನು ಶಾಸಕ ಜಿ.ಟಿ.ದೇವೇಗೌಡ ಸನ್ಮಾನಿಸಿ, ಶುಭಾಶಯ ಕೋರಿದರು. ಈ ವೇಳೆ ಚಂದ್ರಶೇಖರ್, ಸುರೇಶ್, ವೆಂಕಟೇಶ್, ರವಿ, ಆನಂದ್, ಮಹೇಶ್, ಸ್ವಾಮಿ, ಚಂದ್ರು ಇನ್ನಿತರರು ಉಪಸ್ಥಿತರಿದ್ದರು.

ಅಂತೂ ಸಂಘಟನೆಗೆ ಸಜ್ಜಾದ ರಾಜ್ಯ ಕಾಂಗ್ರೆಸ್

- **40 ಉಪಾಧ್ಯಕ್ಷರು, 109 ಪ್ರಧಾನ ಕಾರ್ಯದರ್ಶಿ ನೇಮಕ**
- **ಮೈಸೂರಿನ ಸೂರಜ್ ಹೆಗ್ಡೆ, ಮಂಡ್ಯದ ಚೆಲುವರಾಯಸ್ವಾಮಿ, ನರೇಂದ್ರಸ್ವಾಮಿ ಉಪಾಧ್ಯಕ್ಷರು; ಎಸ್.ಬಾಲರಾಜು, ಎಸ್.ಸಿ.ಬಸವರಾಜು, ಬ್ರಿಜೇಶ್ ಕಾಳಪ್ಪ, ಮಂಜುಳಾ ಮಾನಸ, ಎಂ.ಲಕ್ಷ್ಮಣ್, ಮಂಜುಳಾ ರಾಜ್, ಪ್ಯಾರೆ ಜಾನ್, ಅರುಣ್ ಮಾಚಯ್ಯ, ಚಂದ್ರಮೌಳಿ, ಚಂದ್ರಕಲಾ ಪ್ರಧಾನ ಕಾರ್ಯದರ್ಶಿಗಳು**



ವೇಣುಗೋಪಾಲ್

ಬೆಂಗಳೂರು, ಏ.9– ರಾಜ್ಯ ವಿಧಾನ ಸಭೆ ಚುನಾವಣೆ ಮುಂದಿನ ವರ್ಷ ನಡೆಯಲಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಸಂಘಟನೆಗೆ ಮುಂದಾಗಿದ್ದು, ಕೆಪಿಸಿಸಿಗೆ 40 ಉಪಾಧ್ಯಕ್ಷರು ಹಾಗೂ 109 ಪ್ರಧಾನ ಕಾರ್ಯದರ್ಶಿಗಳ ಪಟ್ಟಿಯನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಬಿಡುಗಡೆ ಮಾಡಿದ್ದಾರೆ.

ಮೈಸೂರಿನ ಸೂರಜ್ ಹೆಗ್ಡೆ, ಮಂಡ್ಯದಿಂದ ಮಾಜಿ ಸಚಿವರಾದ ಎನ್.ಚೆಲುವರಾಯಸ್ವಾಮಿ ಮತ್ತು ನರೇಂದ್ರಸ್ವಾಮಿ ಅವರಿಗೆ ಕೆಪಿಸಿಸಿ ಉಪಾಧ್ಯಕ್ಷ ಸ್ಥಾನ ನೀಡಲಾಗಿದೆ. ಮಾಜಿ ಶಾಸಕರಾದ ಎಸ್.ಬಾಲರಾಜು, ಎಸ್.ಸಿ.ಬಸವರಾಜು, ಸುಪ್ರೀಂ ಕೋರ್ಟ್ ಹಿರಿಯ ನ್ಯಾಯ ವಾದಿ, ಎಐಸಿಸಿ ವಕ್ತಾರ ಕೊಡಗಿನ ಬ್ರಿಜೇಶ್ ಕಾಳಪ್ಪ, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಪಿರಿಯಾಪಟ್ಟಣದ ಮಾಜಿ ಶಾಸಕ ದಿ. ಕಾಳಮರಿಗೌಡರ ಪುತ್ರಿ ಮಂಜುಳಾರಾಜ್, ಮೈಸೂರಿನ ಶ್ರೀಮತಿ ಪ್ಯಾರೆ ಜಾನ್, ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ್ ಮಾಚಯ್ಯ, ಮೂಲತಃ ಕುಶಾಲನಗರದ ಹಿರಿಯ ವಕೀಲ ಚಂದ್ರಮೌಳಿ, ಕೊಡಗು ಜಿಪಂ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ ಅವರಿಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸ್ಥಾನ ನೀಡಲಾಗಿದೆ.

ಉಪಾಧ್ಯಕ್ಷರು: ಅಭಯಚಂದ್ರ ಜೈನ್, ಪಿ.ಎಂ.ಅಶೋಕ್, ಬಿ.ಎನ್.ಚಂದ್ರಪ್ಪ, ಬಸವರಾಜರಾಯರೆಡ್ಡಿ, ಡಿ.ಆರ್. ಪಾಟೀಲ್, ಡಾ.ಬಿ.ಎಲ್.ಶಂಕರ್, ಡಾ.ಎಲ್. ಹನುಮಂತಯ್ಯ, ಡಾ.ಶರಣಪ್ರಕಾಶ್ ಪಾಟೀಲ್, ಶ್ರೀಮತಿ ಜಿ.ಪದ್ಮಾವತಿ, ಜಿ.ಸಿ.ಚಂದ್ರಶೇಖರ್, ಹೆಚ್.ಆಂಜನೇಯ, ಹೆಚ್.ಎಂ.ರೇವಣ್ಣ, ಹಸನ್‌ಸಾಬ್ ಧೋತಿಹಾಲ್, ಐವಾನ್ ಡಿಸೋಜಾ, ಕೆ.ಎನ್. ರಾಜಣ್ಣ ಎಂ.ಸಿ. ವೇಣುಗೋಪಾಲ್, ಎಂ.ಆರ್.ಸೀತಾರಾಂ, ಮಧು ಬಂಗಾರಪ್ಪ ಮಲ್ಲಿಕಾರ್ಜುನ ನಾಗಪ್ಪ ಮಂಜುನಾಥ ಭಂಡಾರಿ, ಎನ್. ಚಲುವರಾಸ್ವಾಮಿ, ನಾರಾಯಣ ಸ್ವಾಮಿ, ನರೇಂದ್ರಸ್ವಾಮಿ, ನಾಜೀರ್ ಹುಸೇನ್, ಪಿ.ವಿ.ಮೋಹನ್, ಪ್ರಕಾಶ್ ಹುಕ್ಕೇರಿ, ಪ್ರಮೋದ್ ಮಧ್ವರಾಜ್, ಆರ್.ಬಿ.ತಿಮ್ಮಾಪುರ್, ರಮಾನಾಥ ರೈ, ಎಸ್.ಇ.ಸುಧೀಂದ್ರ, ಸಂತೋಷ್ ಲಾಡ್, ಶರಣಪ್ಪ ಮಟ್ಟೂರ್, ಶಿವರಾಮೇಗೌಡ, ಸೂರಜ್ ಹೆಗ್ಡೆ, ವಿ.ಎಸ್.ಉಗ್ರಪ್ಪ, ವಿನಯ್ ಕುಲಕರ್ಣಿ, ವಿನಯ್ ಕುಮಾರ್ ಸೊರಕೆ.


ಪ್ರಧಾನ ಕಾರ್ಯದರ್ಶಿಗಳು: ಎ.ಸಿ.ಶ್ರೀನಿವಾಸ್, ವಕೀಲ ಗಜಾನನ್ ತೀರ್ಸ್ಕರ್, ಆಗಾ ಸುಲ್ತಾನ್, ಅಕ್ಕೈ ಪದ್ಮಶಾಲಿ, ಆಲ್ಕೋಡ್ ಹನುಮಂತಪ್ಪ, ಅನಿಲ್ ಕುಮಾರ್ ಪಾಟೀಲ್, ಅನಿಲ್ ಕುಮಾರ್, ಅರುಣ್ ಮಾಚಯ್ಯ, ಬಿ.ಬಾಲರಾಜನಾಯಕ್, ಬಿ.ಬಿ.ರಾಮಸ್ವಾಮಿ ಗೌಡ, ಬಿ.ಟಿ.ಶ್ರೀನಿವಾಸ ಮೂರ್ತಿ, ಎಸ್.ಬಾಲರಾಜ್, ಬಸವನಗೌಡ ಬಾದರ್ಲಿ, ಭೀಮಣ್ಣ ನಾಯಕ್, ಬ್ರಿಜೇಶ್ ಕಾಳಪ್ಪ ಸಿ.ಡಿ.ಗಂಗಾಧರ್, ಚಂದ್ರಮೌಳಿ, ಬಿ.ಕೆ.ಮೋಹನ್, ದಯಾನಂದ ಪಾಟೀಲ್, ದೀಪಕ್ ಪೂಜಾರಿ, ಧನಂಜಯ ಅಡಹುಂಗಾಯ, ಡಾ.ಎಂ.ಸಿ.ಬೆಳವಾದಿ, ಡಾ.ಸಾಸಲು ಸತೀಶ್, ಡಾ.ಬಿ.ಗುರಪ್ಪ ನಾಯ್ಡು, ಡಾ.ಹೆಚ್. ಎನ್.ರವೀಂದ್ರ, ಡಾ.ಶ್ರೀಮತಿ ನಾಗಲಕ್ಷ್ಮಿ ಚೌಧರಿ, ಎಫ್.ಹೆಚ್.ಜಕ್ಕಪ್ಪನವರ್, ಜಿ.ಎ.ಬಾವಾ, ಜಿ.ಶೇಖರ್, ಶ್ರೀಮತಿ ಗಾಯತ್ರಿ ಶಾಂತೇಗೌಡ, ಶ್ರೀಮತಿ ಗೀತಾರಾವ್ ಚಿದ್ರಿ, ಹೆಚ್.ಸಿದ್ದಯ್ಯ, ಹೆಚ್.ಕೆ.ಶ್ರೀಕಂಠು, ಹುಚ್ಚಪ್ಪ, ಇನಾಯತ್ ಅಲಿ, ಜೆ.ಎ.ಮಂಜುನಾಥ್, ಜೆ.ಡೆಸ್. ಆಂಜನೇಯಲು, ಜಯಸಿಂಹ, ಕೆಶಿಮೂರ್ತಿ, ಶ್ರೀಮತಿ ಕೆ.ಪಿ.ಚಂದ್ರಕಲಾ, ಕಾಗೋಡು ರತ್ನಾಕರ್, ಶ್ರೀಮತಿ ಕಮಲಾಕ್ಷಿ ರಾಜಣ್ಣ, ಶ್ರೀಮತಿ ಕಾಂತನಾಯಕ್, ಕುಮಾರಿ ಕವಿತಾ ರೆಡ್ಡಿ, ಕೇಶವ ಮೂರ್ತಿ, ಕೃಷ್ಣಂ ರಾಜು, ಶ್ರೀಮತಿ ಕೃಪಾ ಆಳ್ವಾ, ಎಂ.ಲಕ್ಷ್ಮಣ್, ಎಂ.ಡಿ.ಲಕ್ಷ್ಮೀ ನಾರಾಯಣ, ಶ್ರೀಮತಿ ಲತಾ, ಎಂ.ಎ.ಗಫೂರ್, ಎಂ.ರಾಜಕುಮಾರ್, ಎಂ. ರಾಮಚಂದ್ರಪ್ಪ ಎಂ.ರಾಮಪ್ಪ ಎಂ.ಸುರೇಶ್, ಎಂ.ಉದಯ ಶಂಕರ್, ಮಹವೀರ್ ಲಕ್ಷ್ಮಣ್ ಮೊಹಿತಿ, ಮಲ್ಲಿಕಾರ್ಜುನ ಪಾಟೀಲ್, ಶ್ರೀಮತಿ ಮಮತಾ ಘಟ್ಟಿ, ಶ್ರೀಮತಿ ಮಂಜುಳಾ ಮಾನಸ, ಶ್ರೀಮತಿ ಮಂಜುಳಾ ನಾಯ್ಡು ಶ್ರೀಮತಿ ಮಂಜುಳಾ ರಾಜು, ಮಂಜುನಾಥ ರೆಡ್ಡಿ, ಮನ್ಸೂರ್ ಅಲಿಖಾನ್, ಮರಿಗೌಡ ಪಾಟೀಲ್, ಶ್ರೀಮತಿ ಮೀನಾಕ್ಷಿ ಸಂಗ್ರಾಮ್, ಮಹರೋಜ್ ಖಾನ್, ಮಿಲಿಂದ್ ಧರ್ಮಸೇನಾ, ಮಿಥುನ್ ರಾಯ್, ಮುನಿಸ್ವಾಮಣ್ಣ, ಮರುಳಿಧರ ಹಾಲಪ್ಪ, ಎನ್.ಸಂಪಗಿ, ಶ್ರೀಮತಿ ನೈನಾ ಜವಹರ್, ನಿವೇದಿತಾ ಆಳ್ವಾ ಶ್ರೀಮತಿ ಪ್ಯಾರೇ ಜಾನ್, ಆರ್.ಮಂಜುನಾಥ್, ಆರ್. ಎಸ್. ಸತ್ಯನಾರಾಯಣ, ಆರ್.ವಿ.ವೆಂಕಟೇಶ್, ರಫಿಕ್ ಅಹಮದ್, ಶ್ರೀಮತಿ ರೈನಾದಿನಿ ಕಾಗೋಡು, ರಾಜಕುಮಾರ್, ರಕ್ಷಿತ್ ಶಿವರಾಂ, ರಮಾನಂದ ಬಿ.ನಾಯಕ್, ಶ್ರೀಮತಿ ರತ್ನಪ್ರಭಾ, ರುದ್ರಪ್ಪ ಲಂಬಾಣಿ, ಎಸ್.ಮನೋಹರ್, ಎಸ್.ಎ.ಹುಸೇನ್, ಎಸ್.ಸಿ.ಬಸವರಾಜು, ಎಸ್.ಪಿ.ಪ್ರಭಾಕರ ಗೌಡ ಎಸ್.ಎಸ್.ಮಲ್ಲಿಕಾರ್ಜುನ್, ಸದಾನಂದ ಡಂಗಣ್ಣನವರ್, ಸಯ್ಯದ್ ಅಹಮದ್, ಶ್ರೀಮತಿ ಶಾರದಾಗೌಡ, ಷಾ ನಿಜಾಮುದ್ದೀನ್ ಅಲಿಯಾಸ್ ನಿಜಾಂ, ಷಾಕೀರ್ ಸನದಿ, ಶರಣು ಮೋದಿ, ಪಿ.ಓ.ಶಿವಕುಮಾರ್, ಶಿವಣ್ಣ ಮಳವಳ್ಳಿ, ಸಿರಾಜ್ ಸಾಯಿದ್, ಶ್ರೀಮತಿ ಸುಜಾತ ದೊಡ್ಡಮಣಿ, ಸುನೀಲ್ ಜೆ.ಹನುಮಣ್ಣನವರ್, ಶ್ರೀಮತಿ ಸುಷ್ಮಾ ರಾಜಗೋಪಾಲ್, ಟಿ.ಈಶ್ವರ್, ಎ.ವಸಂತಕುಮಾರ್, ವೀಣಾ ಕೃಷ್ಣಪ್ಪನವರ್, ವೆಂಕಟರಾವ್ ಗೋರ್ಪಡೆ, ವಿಜಯ್ ಕೆ.ಮಲ್ಲುಂಡು, ವಿಜಯ್ ಸಿಂಗ್ ಮತ್ತು ವೈ.ಎನ್.ಗೌಡರ್.

ನಾಳೆ ಸುವರ್ಣಪ್ರಾಶನ ಅಭಿಯಾನ

ಮೈಸೂರು, ಏ. 9– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಏ. 11 ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 5 ರವರೆಗೆ ಸುವರ್ಣಪ್ರಾಶನ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 7776077626, 9645315591 ಮೂಲಕ ಸಂಪರ್ಕಿಸಬಹುದು.


ಕ್ರೇಜಿಸ್ಟಾರ್ ರವಿಚಂದ್ರನ್‌ಗೆ ಬೆಂಗಳೂರು ವಿವಿಯಿಂದ ಗೌರವ ಡಾಕ್ಟರೇಟ್

ಬೆಂಗಳೂರು, ಏ. 9– ಬೆಂಗಳೂರು ನಗರ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ ಕ್ರೇಜಿಸ್ಟಾರ್ ವಿ. ರವಿಚಂದ್ರನ್ ಅವರು ಸೇರಿ ಮೂವರಿಗೆ ಗೌರವ ಡಾಕ್ಟರೇಟ್ ಘೋಷಿಸಲಾಗಿದೆ. ಸಮಾಜ ಕ್ಷೇತ್ರದ ಅನುಪಮ ಸೇವೆಗಾಗಿ ರಂ.ಆರ್. ಜೈಶಂಕರ್, ವೈದ್ಯಕೀಯ ಕ್ಷೇತ್ರದ ಸಾಧನೆಗಾಗಿ ಡಾ.ಸತ್ಯನಾರಾಯಣ ಹಾಗೂ ಚಲನಚಿತ್ರ ರಂಗದಲ್ಲಿನ ಸೇವೆ ಪರಿಗಣಿಸಿ ನಟ ರವಿಚಂದ್ರನ್ ಅವರಿಗೆ ಬೆಂಗಳೂರು ನಗರ ವಿವಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದೆ.



ಸ್ಯಾಂಡಲ್‌ವುಡ್‌ಗೆ ಕ್ರೇಜಿಸ್ಟಾರ್ ರವಿಚಂದ್ರನ್ ಅವರ ಕೊಡುಗೆ ಅಪಾರ. ಯಾವುದೇ ವಿಭಾಗದಲ್ಲೂ ಕ್ರೇಜಿಸ್ಟಾರ್ ಕೆಲಸ ಮಾಡಿದ್ದಾರೆ. ನಟನೆ, ನಿರ್ದೇಶನ, ಸಂಗೀತ, ನಿರ್ಮಾಣ ಎಲ್ಲ ವಿಭಾಗದಲ್ಲೂ ರವಿಚಂದ್ರನ್ ನಿಪುಣರು.

ವಿಭಜನೆಗೊಂಡ ಬಳಿಕ ಮೊದಲ ಘಟಿಕೋತ್ಸವ!: ವಿಭಜನೆಗೊಂಡ ನಂತರ ಮೊದಲ ಘಟಿಕೋತ್ಸವ ಆಯೋಜಿಸಲಾಗಿದೆ. ಏಪ್ರಿಲ್ 11ರಂದು ಸೆಂಟ್ರಲ್ ಕಾಲೇಜಿನಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು. ಜ್ಞಾನಜ್ಯೋತಿ ಸಭಾಂಗಣದಲ್ಲಿ ಜರುಗಲಿರುವ ಬೆಂಗಳೂರು ನಗರ ವಿವಿ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಪದ್ಮವಿಭೂಷಣ ಡಾ.ಕೆ.ಕಸ್ತೂರಿರಂಗನ್ ಹಾಗೂ ಸಚಿವ ಸಿ.ಎನ್. ಅಶ್ವತ್ಥ್ ನಾರಾಯಣ ಭಾಗಿಯಾಗಲಿದ್ದಾರೆ.



ಜೈ ಶ್ರೀರಾಮ್

ರಾಮನಾಮದ ಧೀಶಕ್ತಿ. "ರಾಮಂ ಮಾನುಷಂ ಮನ್ಯೆ" ಎನ್ನುವುದರ ಮೂಲಕ ವಾಲ್ಮೀಕಿ ಮಹರ್ಷಿಗಳು ರಾಮಾಯಣದಲ್ಲಿ ಶ್ರೀರಾಮನನ್ನು ಓರ್ವ ಸಾಮಾನ್ಯ ಮನುಷ್ಯನಾಗಿಯೇ ಚಿತ್ರಿಸಿ, ಸಾರ್ಥಕ ಬದುಕಿನ ಅವನ ನಡವಳಿಕೆಯಿಂದಲೇ ದೇವನನ್ನಾಗಿಸುತ್ತಾರೆ. ಸಂಪೂರ್ಣ ರಾಮಾಯಣವನ್ನೇ ನಾವು ಅವಲೋಕಿಸಿದರೆ ರಾಮನ ಚಿತ್ರಣದಲ್ಲೇ ಕುಟುಂಬ ವಾತ್ಸಲ್ಯದ ಚಿತ್ರಣವಿರುವುದನ್ನು ಕಾಣಬಹುದು. ದೇವನಾಗಿಯೂ ರಾಮ ತಾನೊಬ್ಬನೇ ಎಲ್ಲಿಯೂ ಪೂಜಿಸಿಕೊಳ್ಳುವುದಿಲ್ಲ. ಸೀತೆ ಮಾತ್ರವಲ್ಲದೆ ಆಂಜನೇಯ, ಲಕ್ಷ್ಮಣ, ಭರತ, ಶತೃಘ್ನರೊಡಗೂಡಿದ ದೇವತಾ ಸ್ವರೂಪವೇ ಇವತ್ತಿಗೂ ನಮ್ಮ ಕಣ್ಮುಂದಿನ ಚಿತ್ರವಾಗಿದೆ.

ಬನ್ನೂರು ಕೆ.ರಾಜು ಮೊ. 9481533167

ರಾಮ ನಾಮದ ಧೀಶಕ್ತಿ. "ರಾಮಂ ಮಾನುಷಂ ಮನ್ಯೆ" ಎನ್ನುವುದರ ಮೂಲಕ ವಾಲ್ಮೀಕಿ ಮಹರ್ಷಿಗಳು ರಾಮಾಯಣದಲ್ಲಿ ಶ್ರೀರಾಮನನ್ನು ಓರ್ವ ಸಾಮಾನ್ಯ ಮನುಷ್ಯನಾಗಿಯೇ ಚಿತ್ರಿಸಿ, ಸಾರ್ಥಕ ಬದುಕಿನ ಅವನ ನಡವಳಿಕೆಯಿಂದಲೇ ದೇವನನ್ನಾಗಿಸುತ್ತಾರೆ. ಸಂಪೂರ್ಣ ರಾಮಾಯಣವನ್ನೇ ನಾವು ಅವಲೋಕಿಸಿದರೆ ರಾಮನ ಚಿತ್ರಣ ದಲ್ಲೇ ಕುಟುಂಬ ವಾತ್ಸಲ್ಯದ ಚಿತ್ರಣವಿ ರುವುದನ್ನು ಕಾಣಬಹುದು. ದೇವನಾಗಿಯೂ ರಾಮ ತಾನೊಬ್ಬನೇ ಎಲ್ಲಿಯೂ ಪೂಜಿಸಿಕೊಳ್ಳುವುದಿಲ್ಲ. ಸೀತೆ ಮಾತ್ರವಲ್ಲದೆ ಆಂಜನೇಯ, ಲಕ್ಷ್ಮಣ, ಭರತ, ಶತೃಘ್ನರೊಡಗೂಡಿದ ದೇವತಾ ಸ್ವರೂಪವೇ ಇವತ್ತಿಗೂ ನಮ್ಮ ಕಣ್ಮುಂದಿನ ಚಿತ್ರವಾಗಿದೆ.

ರಾಮನ ಆದರ್ಶ ಬದುಕು ಅಂಥಾದ್ದು. ಹಾಗಾಗಿ ರಾಮನಾಮ ಸೀಮೋಲ್ಲಂಘನ, ಸಾಗರೋಲ್ಲಂಘನವಾಗಿ ದೇಶದಲ್ಲಷ್ಟೇ ಅಲ್ಲದೆ, ವಿದೇಶಗಳಲ್ಲೂ ರಾಮ ಆರಾಧ್ಯ ದೈವವಾಗಿದ್ದಾನೆ. ರಾಮನನ್ನು ದಕ್ಷಿಣ ಏಷ್ಯಾದ ಸಾರ್ವಕಾಲಿಕ ಆದರ್ಶವೆಂದು ಖ್ಯಾತ ಸಂಶೋಧಕ, ವಿದ್ವಾಂಸ ಪ್ರೊ. ಡಬ್ಲ್ಯೂ.ಹೆಚ್. ಸ್ಟುಟರ್ ಹೀಮ್ ಹೇಳಿದ್ದು, ಬಾಲಿ ದ್ವೀಪದ ರಾಮನ ಪೂಜೆಯ ಬಗ್ಗೆ ವಿವರಿಸುತ್ತಾ "ಇಲ್ಲಿ ರಾಮ ಕಥೆಯ ಸಾರಾಂಶ ಗೊತ್ತಿಲ್ಲದ ಒಬ್ಬ ಹುಡುಗನನ್ನೂ ಕಾಣಲಾರಿರಿ. ಬೆಳೆದುತ್ತಲ್ಲ ಅದನ್ನು ಸಂಪೂರ್ಣವಾಗಿ ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವ ಪಾಠವನ್ನು ಇಲ್ಲಿ ಹೇಳಿಕೊಡಲಾಗುತ್ತದೆ" ಎಂದು ಅವರು ಉಲ್ಲೇಖಿಸಿದ್ದಾರೆ.

ಶ್ರೀರಾಮ ಚೈತ್ರಮಾಸದ ಶುಕ್ಲಪಕ್ಷ ನವಮಿಯಂದು ಮಧ್ಯಾಹ್ನ ಪುನರ್ವಸು ನಕ್ಷತ್ರದಲ್ಲಿ ಮಹಾತೇಜಸ್ವಿಯಾಗಿ, ಜಗದ ಬೆಳಕಾಗಿ ಅವತರಿಸಿದ್ದು, ಅದು ಶ್ರೀರಾಮ ನವಮಿಯಾಗಿ ಜಗತ್ತಿನಲ್ಲಿ ಪೂಜನೀಯ ಸ್ಥಾನ ಪಡೆದಿದೆ. ರಾಮಾವತಾರವು ವಿಷ್ಣುವಿನ ದಶಾವತಾರಗಳಲ್ಲಿ ಒಂದಾಗಿದ್ದು ಅನುಕ್ರಮಣಿಕೆಯಲ್ಲಿ ಏಳನೆಯದಾಗಿದೆ.


ಭಾರತೀಯ ಸಂಸ್ಕೃತಿ, ಸಂಪ್ರದಾಯ, ಪರಂಪರೆಗಳಲ್ಲಿ ಸಂಖ್ಯಾಶಾಸ್ತ್ರಕ್ಕೂ ತನ್ನದೇ ಆದ ಮಹತ್ವವಿದೆ. ಆ ಪ್ರಕಾರ ಸಂಖ್ಯೆ 'ಏಳು' ವಿಶೇಷ ಮಹತ್ವ ಪಡೆದುಕೊಂಡಿದೆ. ರಾಮನ ವಿಷಯದಲ್ಲೂ ಏಳು ಬಹಳ ಮಹತ್ವವೆನಿಸಿದೆ. ವಾಲ್ಮೀಕಿ ಮಹರ್ಷಿಗಳಿಂದ ರಚಿತವಾದ ರಾಮಾಯಣ ಕೂಡ ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂದಾಕಾಂಡ, ಸುಂದರ ಕಾಂಡ, ಯುದ್ಧಕಾಂಡ ಹಾಗೂ ಉತ್ತರ ಕಾಂಡಗಳೆಂಬ ಏಳು ಕಾಂಡಗಳಲ್ಲಿದೆ. ಶ್ರೀರಾಮನ ಜನ್ಮ ನಕ್ಷತ್ರ ಪುನರ್ವಸು. ಇದು ಸಪ್ತರ್ಷಿ ಮಂಡಲದಲ್ಲಿ ಏಳನೆಯದು. ವಾಲ್ಮೀಕಿ ರಾಮಾಯಣದ ಮೂಲವನ್ನಿಟ್ಟುಕೊಂಡು ದೇಶದಲ್ಲಿ ಸಾವಿರಾರು ರಾಮಕಥೆಗಳು, ಕಾವ್ಯಗಳು ರಚನೆಗೊಂಡಿವೆ.

ಒಟ್ಟಿನಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ರಾಮ ಹಾಸು ಹೊಕ್ಕಾಗಿದೆ. ಈ ದೇಶದ ಜನರ ಬಹುದೊಡ್ಡ ಆದರ್ಶವಾಗಿದೆ. ಇಂಥ ರಾಮ ಜನಿಸಿದ ಮಹಾ ಸುದಿನವಾದ 'ಶ್ರೀರಾಮ ನವಮಿಗೆ' ದೇಶದಲ್ಲಿ ವಿಶೇಷ ಮಹತ್ವ ಉಂಟು. ಹಾಗಾಗಿ ರಾಮ ಹುಟ್ಟಿದ ದಿನವನ್ನು ಪೂಜನೀಯವಾಗಿ ದೇಶದೆಲ್ಲೆಡೆ ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತದೆ.

ಸುಡು ಬಿಸಿಲಿನ ಬೇಸಿಗೆಯಲ್ಲೂ ಸುಮಧುರ ತಂಪು ಚೆಲ್ಲುವ ಸುವಾಸಿತ ತಾಜಾ ಹಣ್ಣುಗಳ ಪಾನಕ ಶ್ರೀರಾಮನವಮಿಯ ಆಕರ್ಷಣೆ. ಬೇಲದ ಹಣ್ಣು, ಕರಬೂಜ, ಕಲ್ಲಂಗಡಿ ಹಣ್ಣುಗಳ ಪಾನಕ ಮತ್ತು ನೀರು ಮಜ್ಜಿಗೆ ಕುಡಿದು ವಿವಿಧ ಬಗೆಯ ಕೋಸಂಬರಿಯನ್ನು ಸೇವಿಸುವುದೇ ಒಂದು ಆನಂದ. ಬೀದಿ ಬೀದಿಗಳಲ್ಲಿ, ಗಲ್ಲಿ-ಗಲ್ಲಿಗಳಲ್ಲಿ, ಕೇರಿ ಕೇರಿಗಳಲ್ಲಿ ಪಾನಕ ಮತ್ತು ನೀರು ಮಜ್ಜಿಗೆ ಹಾಗೂ ಕೋಸಂಬರಿಯದೇ ಸಮಾರಾಧನೆ. ರಾಮ ಭಕ್ತರಿಂದ ಎಲ್ಲೆಡೆಯೂ ಇದು ಉಚಿತ ವಿತರಣೆ. ಅದರಲ್ಲೂ ಗ್ರಾಮೀಣ ಪ್ರದೇಶದ ಹಳ್ಳಿಗಳಲ್ಲಿನ ಅರಳಿಕಟ್ಟೆಗಳಲ್ಲಿ ದೊಡ್ಡ ದೊಡ್ಡ ಹಂಡೆಗಳಲ್ಲಿ ಫಲಾಮೃತಗಳನ್ನು ವಿತರಿಸುವುದನ್ನು ಸವಿಯುವುದಿರಲಿ, ಅದನ್ನು ನೋಡುವುದೇ ಒಂದು ಮಹದಾನಂದ. ಶ್ರೀರಾಮ ಮಂದಿರಗಳಲ್ಲಿ ಮತ್ತು ಶ್ರೀರಾಮ ದೇವಸ್ಥಾನಗಳಲ್ಲಿ ಸೀತಾ, ಲಕ್ಷ್ಮಣ, ಆಂಜನೇಯ ಸಮೇತನಾಗಿ ಸರ್ವಾಲಂಕಾರ ಭೂಷಿತನಾಗಿ ಶ್ರೀರಾಮ ದೇವರು ಕಾಣಿಸಿಕೊಳ್ಳುವ ಚೆಲುವನ್ನು ಕಣ್ತುಂಬಿಕೊಳ್ಳುವುದೇ ಒಂದು ಮಹಾಹಬ್ಬ.

ಇದಿಷ್ಟೇ ಶ್ರೀರಾಮನವಮಿ ಹಬ್ಬವಲ್ಲ. ಇದಕ್ಕೆಲ್ಲಕ್ಕೂ ಪ್ರಭಾವಳಿಯಾಗಿ 'ಎಲ್ಲೆಲ್ಲು ಸಂಗೀತವೇ, ಎಲ್ಲೆಲ್ಲೂ ಸೌಂದರ್ಯವೇ, ಕೇಳುವ ಕಿವಿಯಿರಲು ನೋಡುವ ಕಣ್ಣಿರಲು ಎಲ್ಲೆಲ್ಲೂ ಸಂಗೀತವೇ......' ಎಂಬಂತೆ ದೊಡ್ಡ ದೊಡ್ಡ ಐಟಿ, ಬಿಟಿ ನಗರಗಳಿಂದ ಹಿಡಿದು ಸಣ್ಣಪುಟ್ಟ ಗ್ರಾಮಗಳಲ್ಲೂ ರಾಮನವಮಿ ಸಂದರ್ಭದಲ್ಲಿ ಸಂಗೀತೋತ್ಸವಗಳು ಜರುಗುತ್ತವೆ. ಅದೂ ಎಲ್ಲವೂ ಶ್ರೀರಾಮ ಭಕ್ತಿಯ ಪರಾಕಾಷ್ಟೆಯ ಸಂಗೀತ ವೈಭವವೇ ಆಗಿರುತ್ತದೆ. ಇವತ್ತು ದೇಶಾದ್ಯಂತ ನಡೆಯುತ್ತಿರುವ ಶ್ರೀರಾಮ ನವಮಿ ಸಂಗೀತೋತ್ಸವದ ಪರಂಪರೆ ರಾಜ್ಯದಲ್ಲಿ ಮೊದಲು ಶುರುವಾದದ್ದು ಸಾಂಸ್ಕೃತಿಕ ನಗರ ಮೈಸೂರಿನಲ್ಲೆಂಬ ಸತ್ಯ ಎಷ್ಟೋ ಮಂದಿಗೆ ತಿಳಿದಿರಲಾರದು. ಇಂದಿಗೂ ಮೈಸೂರು ನಗರ ಸೇರಿದಂತೆ ಇಲ್ಲಿನ ಬಹುಷ್ಟು ಬಡಾವಣೆಗಳಲ್ಲಿ ಸಂಗೀತೋತ್ಸವಗಳು ದೇಶ ವಿದೇಶಗಳ ಮಹಾನ್ ಸಂಗೀತಗಾರರಿಂದ ಜರುಗುತ್ತವೆ. ಇವುಗಳಲ್ಲಿ ಮಹಾನ್ ಸಂಗೀತ ದಿಗ್ಗಜ ಮೈಸೂರು ಬಿ. ವಾಸುದೇವಾಚಾರ್ಯರ ಮಾರ್ಗದರ್ಶನದಲ್ಲಿ 1918ರಲ್ಲಿ ಮತ್ತೋರ್ವ ಸಂಗೀತ ದಿಗ್ಗಜ ಬಿಡಾರಂ ಕೃಷ್ಣಪ್ಪನವರು ಆರಂಭಿಸಿದ ಬಿಡಾರಂ ಕೃಷ್ಣಪ್ಪ ರಾಮ ಮಂದಿರದ ಸಂಗೀತೋತ್ಸವಕ್ಕೆ ಹೆಚ್ಚು ಹೆಸರುವಾಸಿ. ಇವತ್ತಿಗೂ ಅಂಥ ಕೀರ್ತಿಯನ್ನು ಅದು ಉಳಿಸಿಕೊಂಡೇ ಇದೆ. ಇಂಥ ರಾಮನವಮಿ ಸಂದರ್ಭದ ಸಂಗೀತೋತ್ಸವಗಳಲ್ಲಿ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಕಲಾವಿದರುಗಳೆಲ್ಲರೂ ಹಾಡುತ್ತಾರೆ. ಹಾಗಾಗಿ ಇದೊಂದು ರೀತಿ ಭಾವೈಕ್ಯತೆಯ ಸಂಗೀತೋತ್ಸವವೆಂದೇ ಹೇಳಬಹುದು.

ಕರ್ನಾಟಕದಲ್ಲೂ ಅಯೋಧ್ಯೆ ಮಾದರಿಯ ರಾಮಮಂದಿರ


ಶ್ರೀ ಹನುಮ ಮೂರ್ತಿ

● ಎಂ.ಆರ್.ಮಂಜುನಾಥ್, ಮೊ:9448470308

ಮೈಸೂರು-ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿರುವ ಚನ್ನಪಟ್ಟಣ ಒಂದು ಐತಿಹಾಸಿಕ ನಗರವಾಗಿದೆ. ಇದು ಕರ್ನಾಟಕದ ಪ್ರಸಿದ್ಧ ರಾಜವಂಶಸ್ಥರು ಆಳ್ವಿಕೆ ಮಾಡಿದಂತಹ ನಗರ. ಇವರುಗಳು ಕಟ್ಟಿ ಬೆಳೆಸಿದ ಗುಡಿ ಗೋಪುರಗಳೆಷ್ಟೋ, ಅದರಲ್ಲಿ ಅಳಿದು ಉಳಿದವುಗಳೆಷ್ಟೋ. ಹಳೆಯ ನೆನಪಿಗೋಸ್ಕರ ಚನ್ನಪಟ್ಟಣ ನಗರ ಪ್ರದೇಶದಿಂದ ಕೇವಲ 4 ಕಿ.ಮೀ. ದೂರದಲ್ಲಿರುವ ಕುವೆಂಪು ಪದವಿ ಪೂರ್ವ ಕಾಲೇಜು ಆವರಣದಲ್ಲಿ ಅಯೋಧ್ಯೆ ಮಾದರಿಯ ಶ್ರೀರಾಮ ಮಂದಿರ ನಿರ್ಮಾಣವಾಗುತ್ತಿದೆ.

ಇದು ರಾಷ್ಟ್ರ ಕವಿ ಕುವೆಂಪುರವರ ಸ್ಫೂರ್ತಿಯ ರಾಮ ಮಂದಿರವೆಂದರೆ ತಪ್ಪಾಗಲಾರದು ಎಂದು ಕಾಲೇಜಿನ ಮುಖ್ಯಸ್ಥ ಆರ್.ಮಹೇಶ್‌ಚಂದ್ರ ತಿಳಿಸುತ್ತಾರೆ.

ರಾಷ್ಟ್ರಕವಿ ಕುವೆಂಪು ಹಾಗೂ ನಮ್ಮ ತಂದೆ ಎಲ್.ಎಸ್. ರಾಮಲಿಂಗಯ್ಯ ಒಳ್ಳೆಯ ಸ್ನೇಹಿತರು ಹಾಗೂ ಕುವೆಂಪುರವರ ಶಿಷ್ಯರು ಕೂಡ. ಕುವೆಂಪುರವರ ರಾಮಯಣ ದರ್ಶನಂ ಪುಸ್ತಕದ ಮಹತ್ವದಿಂದ ಸ್ಫೂರ್ತಿಗೊಂಡು ಕುವೆಂಪುರವರ ಹೆಸರಿನಲ್ಲಿ 1973ರಲ್ಲಿ ಕಾಲೇಜು ನಿರ್ಮಾಣ ಮಾಡಿದರು. ಈ ವೇಳೆ ಕುವೆಂಪುರವರು ಕಾಲೇಜಿಗೆ ಒಮ್ಮೆ ಭೇಟಿ ನೀಡಿ, ಅರಣ್ಯ ಪ್ರದೇಶದಲ್ಲಿದ್ದ ಕಾಲೇಜಿನ ವಾತಾವರಣ ಹಾಗೂ ವನಸಿರಿಯ ನಡುವೆ ಒಂದು ಗುಡ್ಡವನ್ನು ವೀಕ್ಷಿಸಿ ತಮ್ಮ ಶಿಷ್ಯ ರಾಮಲಿಂಗಯ್ಯನವರಿಗೆ ಈ ಗುಡ್ಡ ರಾಮಾದ್ರಿ ಗುಡ್ಡ, ಇಲ್ಲೊಂದು ರಾಮಮಂದಿರ ನಿರ್ಮಾಣ ಮಾಡು ಎಂದು ತಿಳಿಸಿದ್ದರಂತೆ.

ಅವರ ನೆನಪಿಗೋಸ್ಕರ 2005ರಲ್ಲಿ ಸುಮಾರು 70ಲಕ್ಷ ರೂ.ಗಳ ವೆಚ್ಚದಿಂದ ತಮಿಳುನಾಡಿನ ಮಹಾಬಲಿಪುರಂನಿಂದ ಕೃಷ್ಣ ಶಿಲೆಯನ್ನು ತರಿಸಿ ತಮಿಳುನಾಡಿನ ಕಲಾವಿದರಾದ ಸಡಗೋಪನ್ ಹಾಗೂ ಶಕ್ತಿವೇಲು ಅವರಿಂದ ವಿಗ್ರಹಗಳ ಕೆತ್ತನೆಯನ್ನು ಆರಂಭಿಸಿ ರಾಮಾದ್ರಿ ಗುಡ್ಡದಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಕಾರ್ಯ ಪ್ರಾರಂಭಿಸಿದರು.

2009ರವರೆಗೂ ಮಂದಿರ ನಿರ್ಮಾಣದ ಕೆಲಸವು ಸುಗಮವಾಗಿ ನಡೆಯುತ್ತಿತ್ತು. ಆ ನಂತರ ಅರಣ್ಯ ಇಲಾಖೆಯವರು ಈ ಜಾಗ ನಮಗೆ ಸೇರಿದ್ದು ಎಂದು ಗುಡ್ಡದ ಮೇಲೆ ಶ್ರೀರಾಮ ಮಂದಿರ ನಿರ್ಮಾಣ ಮಾಡಲು ಅನುಮತಿ ನೀಡದ ಕಾರಣ ದೇವಸ್ಥಾನದ ಕಾರ್ಯ ಸ್ಥಗಿತವಾಯಿತು. ಇದರ ಬೆನ್ನಲ್ಲೇ ಕಾಲೇಜಿನ ಸಂಸ್ಥಾಪಕರಾದ ರಾಮಲಿಂಗಯ್ಯರವರು ಮರಣ ಹೊಂದಿದರು. ಹಾಗಾಗಿ, ಮಂದಿರ ನಿರ್ಮಾಣ ಕೆಲಸವು ಅಪೂರ್ಣಗೊಂಡು ಸುಮಾರು 16 ವರ್ಷಗಳ ಕಾಲ ನನೆಗುದಿಗೆ ಬಿದ್ದಿತ್ತು.


ಇದೀಗ ರಾಮಾದ್ರಿ ಗುಡ್ಡದಿಂದ ಕಾಲೇಜು ಆವರಣಕ್ಕೆ ವಿಗ್ರಹಗಳನ್ನು ತಂದು ಸುಮಾರು 2 ಎಕರೆ ಜಾಗದಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಮಾಡಲಾಗುತ್ತಿದೆ. ಸುಮಾರು 75 ಭಾಗದಷ್ಟು ಕೆಲಸ ಮುಗಿದಿದೆ. ಇನ್ನೂ 25 ಭಾಗದಷ್ಟು ಕೆಲಸ ಬಾಕಿಯಿದೆ. ಈ ರಾಮನವಮಿಗೆ ಕೆಲಸ ಮುಕ್ತಾಯ ವಾಗ ಬೇಕಿತ್ತು. ತಮಿಳುನಾಡಿನಿಂದ ಕಲಾವಿದರ ತಂಡದ ಆಗಮನ ತಡವಾದುದ್ದರಿಂದ ಕೆಲಸವು ತಡವಾಗಿದೆ. ಆದರೆ ಈ ವರ್ಷದೊಳಗೆ ಮುಕ್ತಾಯಗೊಳಿಸಿ ಭಕ್ತರು ಹಾಗೂ ಪ್ರವಾಸಿಗರಿಗೆ ಅನುಕೂಲ ಮಾಡುತ್ತೇವೆ ಎಂದು ಆರ್.ಮಹೇಶ್ ಚಂದ್ರ ತಿಳಿಸುತ್ತಾರೆ.

ಈ ಮಂದಿರದಲ್ಲಿ ಬೃಹತ್ ಗಾತ್ರದ ಶ್ರೀರಾಮ, ಲಕ್ಷ್ಮಣ, ಸೀತಾ ಮಾತೆ ಹಾಗೂ ಆಂಜನೇಯ ಸ್ವಾಮಿಯ ಮೂರ್ತಿಗಳನ್ನು ಕಾಣಬಹುದಾಗಿದೆ. ಇಡೀ ರಾಜ್ಯದಲ್ಲಿ ಇಷ್ಟು ಎತ್ತರದ ಮೂರ್ತಿಗಳು ಎಲ್ಲಿಯೂ ಕಂಡು ಬರುವುದಿಲ್ಲ. ಜೊತೆಗೆ, ಏಕ ಶಿಲೆಗಳಿಂದ ನಿರ್ಮಾಣಗೊಳ್ಳುತ್ತಿರುವುದು ಇದೇ ಮೊದಲು. ಏಕೆಂದರೆ ಈ ಮೂರ್ತಿಗಳೆಲ್ಲವೂ ಕೃಷ್ಣ ಶಿಲೆಯಾಗಿದ್ದು, ಒಂದೊಂದು ಏಕಶಿಲೆ ಕಲ್ಲುಗಳು ಟನ್‌ಗಟ್ಟಲೇ ತೂಗುತ್ತದೆ.

20ಟನ್ ತೂಕವಿರುವ 21ಅಡಿ ಎತ್ತರವಿರುವ ಶ್ರೀ ರಾಮನ ಮೂರ್ತಿಯಲ್ಲಿ ಬಿಲ್ಲು, ಬಾಣ, ಕಿರೀಟ, ಕುತ್ತಿಗೆಯ ಸರಗಳ ಕೆತ್ತನೆಗಳು, 15ಟನ್ ತೂಕವಿರುವ 19ಅಡಿ ಎತ್ತರದ ಸೀತಾ ಮಾತೆ ಮೂರ್ತಿ ಸೀತೆಯ ಸೀರೆ, ಕೈಬಳೆ, ಸೊಂಟದ ಡಾಬು, ಕಿರೀಟ, ಕೈನಲ್ಲಿ ಕಮಲದ ಹೂವು, ಕುತ್ತಿಗೆಯಲ್ಲಿ ಸುಂದರವಾಗಿ ಕಂಡು ಬರುವ ಸರ ಹಾಗೂ ಲಕ್ಷ್ಮಣ ಮೂರ್ತಿಯು 16 ಟನ್ ತೂಕದ 19 ಅಡಿ ಎತ್ತರದ ಸುಂದರವಾದ ಕಿರೀಟ, ಬಿಲ್ಲು ಬಾಣ, ಕುತ್ತಿಗೆಯಲ್ಲಿ ಸರಗಳಿವೆ. ಈ ಮೂರ್ತಿಯ ಜೊತೆಗೆ 10 ಟನ್ ತೂಕದ 15 ಅಡಿ ಎತ್ತರದ ಆಂಜನೇಯ ಮೂರ್ತಿಯಂತು ಅಜಾನು ಬಾಹು, ಬಲಿಷ್ಠವಾದ ತೋಳುಗಳು, ಎತ್ತರವಾದ ನಿಲುವು, ಕೈನಲ್ಲಿ ಗದೆ ಹೀಗೆ ಒಂದು ಮೂರ್ತಿಗಿಂತ ಮತ್ತೊಂದು ಮೂರ್ತಿಗಳ ಕೆತ್ತನೆಯನ್ನು ನೋಡುತ್ತಿದ್ದರೆ ಎರಡು ಕಣ್ಣುಗಳು ಸಾಲದು. ಈ ಎಲ್ಲಾ ಮೂರ್ತಿಗಳ ಪೀಠಗಳು ಕೂಡ ಸುಮಾರು 25 ಅಡಿಗಳಷ್ಟು ಎತ್ತರವಿದೆ ಒಂದೊಂದು ಮೂರ್ತಿಗಳೂ ಕಲಾತ್ಮಕವಾದ ಕೆತ್ತನೆಯಿಂದ ಮನಸೂರೆಗೊಳ್ಳುತ್ತಿದೆ.

ಕುವೆಂಪು ಹಾಗೂ ತಂದೆಯವರ ಕನಸು ಈಡೇರುತ್ತಿದೆ. ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಳಿಸಿ ಭಕ್ತರಿಗೆ ಹಾಗೂ ಪ್ರವಾಸಿಗರಿಗೆ ಮುಕ್ತಗೊಳಿಸುತ್ತೇವೆ ಎಂದು ತಿಳಿಸುತ್ತಾರೆ ಸಂಸ್ಥಾಪಕರು. ಇಂತಹ ಬೃಹತ್ ರಾಮ ಮಂದಿರ ಕರ್ನಾಟಕಕ್ಕೆ ಕೊಡುಗೆಯಾಗಿ ಬರುತ್ತಿರುವುದು ಹೆಮ್ಮೆಯ ವಿಷಯ. ಸದ್ಯದಲ್ಲಿಯೇ ಈ ಕ್ಷೇತ್ರವೂ ಒಂದು ಪ್ರವಾಸೋದ್ಯಮ ವಾಗುವುದರಲ್ಲಿ ಸಂಶಯವಿಲ್ಲ.


ಶ್ರೀರಾಮ ಮೂರ್ತಿ


ಸೀತಾಮಾತೆ ಮೂರ್ತಿ


ಶ್ರೀ ಲಕ್ಷ್ಮಣ ಮೂರ್ತಿ

ವಾರ ಭವಿಷ್ಯ

10.04.2022ರಿಂದ 16.04.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ

ರವಿ-ಮೀನ, ಮೇಷ, ಚಂದ್ರ-ಕಟಕ, ಸಿಂಹ, ಕನ್ಯಾ, ಕುಜ-ಕುಂಭ, ಬುಧ-ಮೇಷ, ಗುರು-ಕುಂಭ, ಮೀನ, ಶುಕ್ರ-ಕುಂಭ, ಶನಿ-ಮಕರ, ರಾಹು-ವೃಷಭ, ಮೇಷ ಮತ್ತು ಕೇತು-ವೃಶ್ಚಿಕ, ಧನುಸ್ಸು.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ, ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ. ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಪ್ತಾಹದ ಆರಂಭಕ್ಕೆ ನಿಮ್ಮ ಕಾರ್ಯಕಲಾಪಗಳು ಪೂರ್ವ ನಿಯೋಜನೆಯಂತೆ ನಡೆಯುವುದು, ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಚೆಲುವೆಯರ ಸಂಗದಿಂದ ಮನಸ್ಸಿಗೆ ಹರುಷ. ವಿವಾಹ ಯೋಗ್ಯರಿಗೆ ಸೂಕ್ತ ಬಾಳ ಸಂಗಾತಿ ದೊರೆಯುವ ಸಂಭವವಿದೆ. ರವಿ-ಕೇತು ಸಂಯೋಗ ಅಶುಭವಿದ್ದು, ಸರ್ಕಾರದಿಂದ ತೊಂದರೆ ಉಂಟಾಗುವುದು. ಸಣ್ಣ-ಪುಟ್ಟ ಅಪಘಾತಗಳಿಂದ ಜಾಗೃತರಾಗಿರಿ. - ಶ್ರೀಗಣಪತಿ ಪ್ರಾರ್ಥನೆ, ಶುಭಸಂಖ್ಯೆ-7.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

'ಹಂಗಿನ ಅರಮನೆಗಿಂತ ರಾಗಿ ಅಂಬಲಿ ಲೇಸು' ಎಂಬ ನಾಣ್ನುಡಿ ಈ ವಾರ ನಿಮ್ಮ ಅನುಭವಕ್ಕೆ ಬರಲಿದೆ. ನಿರೀಕ್ಷಿತ ಹಣ ಕೈ ಸೇರುವಲ್ಲಿ ವಿಳಂಬವಾಗುವುದು. ಹೊಸ ಮಿತ್ರರ ಪರಿಚಯ ನಿಮ್ಮಲ್ಲಿ ಹೊಸತನ ತರುವುದು. ಸಾಮಾಜಿಕ ಸ್ಥಾನ-ಮಾನಗಳಲ್ಲಿ ಕುಂದುಂಟಾಗಬಹುದು. ರಾಜಕಾರಿಣಿಗಳಿಗೆ ಕಾನೂನು ತೊಡಕುಗಳು ಎದುರಾಗುವುದು. ಸರ್ಕಾರಿ ನೌಕರರು ವಾಮ ಮಾರ್ಗದ ಗಳಿಕೆಗೆ ಆಸೆಪಟ್ಟರೆ ಸಂಕಷ್ಟಕ್ಕೆ ಗುರಿಯಾಗುವರು. - ಶ್ರೀಚಾಮುಂಡೇಶ್ವರಿ ದರ್ಶನ, ಶುಭಸಂಖ್ಯೆ-3.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಇದು ನಿಮಗೆ ಸದಾ ಕ್ರಿಯಾಶೀಲತೆಯ ವಾರ. ಗ್ರಹಗಳ ಮಾರ್ಗಸೂಚಿ ನಮಗೆ ಅನುಕೂಲವನ್ನೇ ಮಾಡುವುದು. ಆರ್ಥಿಕವಾಗಿ ಲಾಭ, ಸಂಪತ್ತು ಗಳಿಸಲು ಗುರುಬಲವಿದೆ. ಸಜ್ಜನರ ಭೇಟಿಯಿಂದ ಕುಟುಂಬಕ್ಕೆ ಒಳಿತಾಗುವುದು. ವಿದ್ಯಾರ್ಥಿಗಳಿಗೆ ಉತ್ತಮ ಶ್ರೇಯಸ್ಸು ದೊರೆಯುವುದು. ಹಲವರಿಗೆ 'ಕನ್ಯಾ ಸೆರೆ'ಯಿಂದ ಬಿಡುಗಡೆ. ಸಮಯ ಪ್ರಜ್ಞೆ ಮೆರೆದು ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. ಗುರು ಮಠ ಭೇಟಿಯಿಂದ ಧನ್ಯತಾ ಭಾವ.- ಶ್ರೀವಿಷ್ಣು ನಮನ, ಶುಭಸಂಖ್ಯೆ-5.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಚಂದ್ರ ಗ್ರಹದ ಶುಭ ಸಂಚಾರದಿಂದ ಹೋಟೆಲ್, ಪ್ರವಾಸೋದ್ಯಮ, ಟ್ರಾವೆಲ್ಸ್ ಉದ್ಯಮದಾರರಿಗೆ ಉತ್ತಮ ಲಾಭವಾಗುವುದು. ಊರಿಂದೂರಿಗೆ ಅಲೆದಾಟವಾದರೂ ಫಲಪ್ರದವೆನಿಸುವುದು. ಅಷ್ಟಮ ಗುರುವಿನ ಕಾರಣ ಯಾವುದೇ ನಿರ್ಧಾರಕ್ಕೂ ಮುನ್ನ ನಿಧಾನಿಸಿ ಹೆಜ್ಜೆ ಇಡಿ. 'ಚಾಡಿ ಮಾತಿನಿಂದ ಚಾವಡಿ ಹಾಳು' ಎಂಬಂತೆ ಆಗುವುದನ್ನು ತಡೆಯಿರಿ ವೈದ್ಯರ ದರ್ಶನ ಅನಿವಾರ್ಯವಾಗಿ ಔಷಧ ವೆಚ್ಚಗಳು ಜಾಸ್ತಿಯಾಗಬಹುದು. - ಶ್ರೀದೇವೀ ಸ್ತುತಿ, ಶುಭಸಂಖ್ಯೆ-6.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕಾಲಪಕ್ವವಾಗಿದೆ. ಗುರು ಹಿರಿಯರ ಸಮಯೋಚಿತ ಸಲಹೆ, ಸಹಾಯವೂ ದೊರೆಯಲಿದೆ. ರಾಜಕೀಯ ವಿರೋಧಿಗಳನ್ನು ಸಮರ್ಥವಾಗಿ ಎದುರಿಸುವಿರಿ. ಚತುರ್ಥ ಕೇತು, ನಿಮ್ಮ ತಾಯಿಯವರ ಆರೋಗ್ಯದಲ್ಲಿ ವ್ಯತ್ಯಯ ಉಂಟು ಮಾಡಬಹುದು. ಜೊತೆಗೆ ಮಾನಸಿಕ ಅಸಮಾಧಾನಗಳು ಉಂಟಾಗುವ ಸಾಧ್ಯತೆ ಇದೆ. ವಾರದ ಕಡೆಗೆ ಧನಾದಾಯ ಉತ್ತಮವಾಗಿರುತ್ತದೆ. ಜೊತೆಗೆ, ಖರ್ಚುಗಳು. - ಶ್ರೀ ಗುರ್ವಾಷ್ಟಕ ಪಠಿಸಿ, ಶುಭಸಂಖ್ಯೆ-4.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಪಂಚಮ ಶನಿದೇವನ ಕಾರಣ ನಿಮ್ಮ ಕಾರ್ಯತಂತ್ರಗಳೇ ನಿಮಗೆ ಒತ್ತಡವಾಗಿ ಪರಿಣಮಿಸಬಹುದು. ಎದುರಿಗೆ ಹೊಗಳಿ, ಮರೆಯಲ್ಲಿ ತೆಗಳುವವರಿಂದ ದೂರವಿರಿ. ಆರೋಗ್ಯದಲ್ಲಿ ಸಣ್ಣ-ಪುಟ್ಟ ಏರಿಳಿತಗಳು ಉಂಟಾದೀತು. ವಾರದ ಕಡೆಗೆ ನಿಮ್ಮ ರಾಶಿಗೆ ಎಂಟರ್ ಆಗುವ ಚಂದ್ರನಿಂದ ಮನೆಯಲ್ಲಿ ಸಡಗರ- ಸಂಭ್ರಮಗಳು, ಹಲವು ಮೂಲಗಳಿಂದ ಧನ ಸಂಚಯವಾದರೂ 'ಹೆಸರಿಗೆ ಬಂಗಾರಪ್ಪ ಜೇಬಲ್ಲಿ ಬಿಡಿಗಾಸಿಲ್ಲ' ಎಂಬ ಪರಿಸ್ಥಿತಿ. - ಶ್ರೀರಾಮ ರಕ್ಷಾ ಸ್ತೋತ್ರ ಪಠಿಸಿ, ಶುಭಸಂಖ್ಯೆ-7.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಹೊಸ ವ್ಯವಹಾರಗಳನ್ನು ಕುದುರಿಸಿಕೊಳ್ಳಲು ನಿಮ್ಮ ರಾಶಿ ಸ್ವಾಮಿ ಶುಕ್ರನ ಕೃಪೆಯಿಂದ ಮಿತ್ರವೃಂದದವರ ಸಹಾಯ ಹಸ್ತ ದೊರೆಯುವುದು. ಸಣ್ಣ-ಪುಟ್ಟ ಮಿತ್ರಕೂಟಗಳೂ ಜರುಗುವುದು. ಪ್ರೀತಿ-ಪ್ರಣಯ ವಿಚಾರಗಳು ವಿವಾಹದ ಕಡೆಗೆ ಮುಖ ಮಾಡಬಹುದು. ಮನೆಗೆ ಅತಿಥಿ, ಅಭ್ಯಾಗತರ ಆಗಮನ ಅವರ ಸತ್ಕಾರಕ್ಕೆ ಧಾರಳ ಹಣ ವ್ಯಯವಾಗುವುದು. ಅಷ್ಟಮ ರಾಹು ನಿಮ್ಮ ವಿರುದ್ಧದ ಪಿತ್ತೂರಿಗಳಿಗೆ ಕಾರಣಕರ್ತನಾಗುವನು. - ಶ್ರೀನವಗ್ರಹಸ್ತೋತ್ರ, ಶುಭಸಂಖ್ಯೆ-3.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಮುಂದಡಿ ಇಡುವ ಮುನ್ನ ಯೋಚಿಸಿ ನಿರ್ಧರಿಸಿ. ನಾಲಿಗೆಗೆ ರುಚಿಯೆಂದು ಬಿಸಿ ತುಪ್ಪ ನುಂಗಲಾಗದು. ಕೈಗೆ ಬಂದ ಹಣ ಬಂದತೆಯೇ ಖರ್ಚಾಗುವುದು. ಹೆಚ್ಚಿನ ಗ್ರಹಗಳು ಅನುಕೂಲ ಸ್ಥಾನದಲ್ಲಿ ಇಲ್ಲ. ಎಲ್ಲಾ ಕೆಲಸಗಳನ್ನು ಸಂಯಮದಿಂದ ನಿರ್ವಹಿಸಿ. ವಾರಾಂತ್ಯಕ್ಕೆ ಕೆಲವು ನೆಮ್ಮದಿ ನೀಡುವ ಪ್ರಸಂಗಗಳು ನಡೆಯಲಿದೆ. ಕೃಷಿಕರಿಗೆ ಎಳ್ಳು, ದ್ವಿದಳ ಧಾನ್ಯ ಫಸಲು ಒಳ್ಳೆಯ ಆದಾಯ ತರಲಿದೆ. - ಶ್ರೀ ನೃಸಿಂಹಸ್ವಾಮಿ ದರ್ಶನ, ಶುಭಸಂಖ್ಯೆ-1.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

'ಗುರಿ ಸಾಧಿಸಲು ಗುರು ಬೇಕು' ಆದರೆ ಅದು ನಿಮಗೆ ವಿರುದ್ಧವಾಗಿದೆ. ಯಾವುದೇ ಮುಖ್ಯ ಕೆಲಸಗಳನ್ನು ನಂಬಿಕಸ್ಥರಿಂದ ಮಾಡಿಸಿಕೊಳ್ಳಿ. ಆಸ್ತಿ ಕ್ರಯ- ವಿಕ್ರಯದ ಮಾತುಗಳು ಪ್ರಗತಿ ಕಾಣದೆ ಬೇಸರವೆನಿಸಬಹುದು. ದೈವ ಕೃಪೆಗಾಗಿ ಕಾಯಿರಿ. ವಾರಾಂತ್ಯಕ್ಕೆ ನಿಮ್ಮ ಹಿತ ಚಿಂತಕರ ಭೇಟಿ ನಿಮಗೆ ವರದಾನವಾಗಲಿದೆ. 'ಸುಖೇ ದುಃಖೇ ಸಮೇ ಕೃತ್ವಾ' ಎಂಬ ಗೀತಾವಾಣಿಯಂತೆ ಸಾಗಿ. ಮಠ- ಮಂದಿರ ಗಮನದಿಂದ ಮಾನಸಿಕ ಶಾಂತಿ. - ಶ್ರೀ ಸಾಯಿಬಾಬಾ ಆರಾಧನೆ, ಶುಭಸಂಖ್ಯೆ-9.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕಾಲ ಪಕ್ವವಾಗಿದೆ. ಸಮಯೋಚಿತ ಸಹಾಯ, ಸಾಲ ಎರಡೂ ದೊರೆಯಲಿದೆ. ನಿಮ್ಮ ವಿರೋಧಿಗಳನ್ನು ಸಮರ್ಥವಾಗಿ ಎದುರಿಸುವಿರಿ. ಕಲಾವಿದರು ಯಶಸ್ವಿಗಳೆನಿಸಿ ಪ್ರಸಿದ್ಧಿ, ಪ್ರಶಸ್ತಿಗಳನ್ನು ಹೊಂದುವ ಸಂಭವವಿದೆ. ವಿವಾಹಾಂಕ್ಷಿಗಳಿಗೆ ಸೂಕ್ತ ವಧು-ವರ ದೊರಕುವರು. ಹಳೆಯ ಸಾಲಗಳ ವಸೂಲಾಗಬಹುದು. ಮನೆಯ ಸಹಚರರು ಒಗ್ಗಟ್ಟಾಗಿ ಇದ್ದರೆ 'ಮನೆಯೇ ಮಂತ್ರಾಲಯ'. - ಶ್ರೀ ಮಾರುತಿ ಪೂಜನ, ಶುಭಸಂಖ್ಯೆ-1.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಬದುಕೆಂಬುದು ಏರಿಳಿತಗಳ ಸರಮಾಲೆ. ಧೃತಿಗೆಡುವ ಅಗತ್ಯವಿಲ್ಲ. ಟೈಂ ಟೈಂಗೆ ಅಗತ್ಯದಷ್ಟು ಹಣ ಒದಗಿ ಬರುತ್ತದೆ. ಖರ್ಚು ವಿನಿಯೋಗಗಳು ನಿಮ್ಮ ಕೈ ಮೀರಲಿದೆ. 'ಉಳಿಸಿದ ಹಣ ಗಳಿಸಿದ ಹಣಕ್ಕೆ ಸಮ'. ವಾರ ಮಧ್ಯೆ ಚಂದ್ರಮನ ಶುಭ ದೃಷ್ಟಿಯ ಕಾರಣ ನೆಮ್ಮದಿಯ ತಂಗಾಳಿ ಬೀಸಿ ಹೊಸ ಹುರುಪು ಉತ್ಸಾಹಗಳಿಂದ ಮುನ್ನಡೆಯುವಿರಿ. ನಿಮ್ಮ ಪ್ರಗತಿಗೆ ಪೂರಕ ವಾತಾವರಣ ಮೂಡಿ ಬರುವುದು. ಸಣ್ಣ-ಪುಟ್ಟ ಕಾಯಿಲೆ ಕಾಡಿಸುವುದು. - ಶ್ರೀಶಿವಪಂಚಾಕ್ಷರಿ ಜಪಿಸಿ, ಶುಭಸಂಖ್ಯೆ-8.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಆಧ್ಯಾತ್ಮದ ಕಡೆಗೆ ಒಲವು ಇರುವುದು. ಹಣಕಾಸಿನ ವಿಷಯದಲ್ಲಿ ಏಳು-ಬೀಳುಗಳನ್ನು ಅನುಭವಿಸುವಿರಿ. ಕೈಗೆ ಬಂದ ಹಣ ಬಿದಿಲೆಗೆ ಬಿದ್ದ ನೀರಿನಂತೆ ಖರ್ಚಾಗುತ್ತದೆ. ಲಾಭಸ್ಥಾನ ಸ್ಥಿತಿ ಶನಿದೇವ ಸ್ಥಿರಾಸ್ತಿ, ಹೊಸ ವಾಹನ ಖರೀದಿಗೆ ಪೂರಕವಾಗಿದ್ದಾನೆ. ಕೃಷಿ ಉಪಕರಣ ವ್ಯಾಪಾರಿಗಳಿಗೆ ಉತ್ತಮ 'ಆರ್ಡರ್'ಗಳು ದೊರೆಯಲಿದೆ. ಸಂಯಮದ ಡ್ರೈವಿಂಗ್ ಎಲ್ಲರಿಗೂ ಒಳ್ಳೆಯದು. - ಶ್ರೀಮನ್ನಾರಾಯಣ ಪೂಜೆ, ಶುಭಸಂಖ್ಯೆ-3.

ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ



ನಂಜನಗೂಡು, ಏ.9– ತಾಲೂಕಿನ ಹೆಮ್ಮರಗಾಲ ಸರ್ಕಾರಿ ಪಬ್ಲಿಕ್ ಶಾಲೆ ಆವರಣದಲ್ಲಿ 2 ಕೋಟಿ ವೆಚ್ಚದ 11 ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಶಾಸಕ ಬಿ.ಹರ್ಷವರ್ಧನ್ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಹಿಂದುಳಿದವರು ಮುಂದೆ ಬರಲು ಶಿಕ್ಷಣವೇ ಪ್ರಮುಖ ಅಸ್ತ್ರವೆಂದು ಡಾ.ಬಿ.ಆರ್.ಅಂಬೇಡ್ಕರ್ ಹೇಳಿದ್ದಾರೆ. ಅವರ ಆಶಯದಂತೆ ವಿ.ಶ್ರೀನಿವಾಸಪ್ರಸಾದ್ ಕೂಡ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ ಪ್ರಥಮ ದರ್ಜೆ ಕಾಲೇಜು, ನಗರದಲ್ಲಿ ಬಾಲಕಿಯರ ಪಿಯು ಕಾಲೇಜು, ಹೆಚ್ಚಿನ ಶಾಲಾ ಕಟ್ಟಡಗಳ ಅಭಿವೃದ್ಧಿಗೆ ಮುಂದಾಗಿದ್ದರು. ನಾನು ಸಹ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರಕುವಂತೆ ಹೆಚ್ಚು ಒತ್ತು ನೀಡಿದ್ದೇನೆ. ಕ್ಷೇತ್ರದಲ್ಲಿ ಕಳೆದ 4 ವರ್ಷಗಳಲ್ಲಿ 22 ಕೋಟಿ ರೂ.ಗಳನ್ನು ಶಾಲಾ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಿದ್ದೇನೆ ಎಂದರು.

ಹೆಮ್ಮರಗಾಲದಲ್ಲಿ ಶಾಲಾ ಕೊಠಡಿಗಳನ್ನು ನಿರ್ಮಿಸಲು ಚಾಲನೆ ನೀಡಲಾಗಿದ್ದು, ಇದು ತಾಲೂಕಿನಲ್ಲೇ ಅತ್ಯಂತ ದೊಡ್ಡದಾದ ಮಾದರಿ ಸರ್ಕಾರಿ ಶಾಲೆಯಾಗಲಿದೆ. ಈ ಭಾಗದಲ್ಲಿ ಹಿಂದುಳಿದವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಕಾರಣ ಬಡವರ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಲು ಸಾಧ್ಯವಾಗಲಿದೆ ಎಂದರು.

ಕೊರೊನಾ ವೇಳೆಯೂ ಸರ್ಕಾರದಿಂದ ವಿಶೇಷ ಅನುದಾನ ತಂದು ಕ್ಷೇತ್ರದ ಪ್ರತಿ ಗ್ರಾಮಕ್ಕೂ ಭೇಟಿ ನೀಡಿ ಅಭಿವೃದ್ಧಿ ಕೆಲಸ ಮಾಡುವ ಜೊತೆಗೆ ಜನರ ಸಮಸ್ಯೆ ನಿವಾರಣೆಗೆ ಮುಂದಾಗಿದ್ದೇನೆ. ಹೆಮ್ಮರಗಾಲ ದಲ್ಲೂ ಸಹ ಚುನಾವಣೆಗೆ ಮುಂಚೆ ಭೇಟಿ ನೀಡಿದಾಗ 7 ಬೀದಿಯಲ್ಲಿ ಚರಂಡಿ ನೀರು ರಸ್ತೆಯಲ್ಲೇ ನಿಲ್ಲುತ್ತಿತ್ತು. ಇದೀಗ ಚರಂಡಿ ನಿರ್ಮಿಸಿ ಸಮಸ್ಯೆ ನಿವಾರಿಸಿದ್ದೇನೆ. ಜೊತೆಗೆ 10 ಕೋಟಿ ವೆಚ್ಚದಲ್ಲಿ ಕೂಡ್ಲಾಪುರ–ಹೆಮ್ಮರಗಾಲ, ಬದನವಾಳು–ಹೆಮ್ಮರಗಾಲಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಪಡಿಸಿದ್ದೇನೆ ಎಂದರು.

ವಿಪಕ್ಷ ಮುಖಂಡರು ಶಾಸಕರು ಯಾವ ಅಭಿವೃದ್ಧಿ ಕೆಲಸವನ್ನೂ ಮಾಡಿಲ್ಲ ಎಂಬುದಾಗಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ಚುನಾವಣೆ ವರ್ಷಗಳಲ್ಲಿ ಈ ಆರೋಪಗಳು ಸಾಮಾನ್ಯ. ನಾನು ಯಾವುದಕ್ಕೂ ತಲೆ ಕೆಡಿಸಿಕೊಳ್ಳದೇ ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿದ್ದೇನೆ. ಮುಂದಿನ 1 ವರ್ಷದಲ್ಲಿ ಹೆಚ್ಚಿನ ಅನುದಾನ ತಂದು 130 ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದೇನೆ. ಮುಖ್ಯವಾಗಿ ಸಾಮಾನ್ಯ ಜನರ ಬೀದಿಯಲ್ಲಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಆದ್ಯತೆ ನೀಡಲಿದ್ದೇನೆ ಎಂದು ಮಾಹಿತಿ ನೀಡಿದರು.

ಇದೇ ವೇಳೆ ತಾಲೂಕಿನ ಮಲ್ಲೂಪುರ ಗ್ರಾಮದಲ್ಲಿ 10 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿರುವ ಕುಂಬಾರ ಭವನ ಉದ್ಘಾಟಿಸಿದರು. ಈ ಸಂದರ್ಭ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ತಾಪಂ ಮಾಜಿ ಸದಸ್ಯರಾದ ಬಿ.ಎಸ್.ರಾಮು, ಶಿವಣ್ಣ ಮಹದೇವನಾಯಕ, ಬಸವರಾಜು, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಸೋಮಣ್ಣ, ಗ್ರಾಪಂ ಅಧ್ಯಕ್ಷೆ ಶೀಲಾ, ಮುಖಂಡರಾದ ಮರಿಶೆಟ್ಟಿ, ರಾಜಣ್ಣ, ಶಿವಣ್ಣ, ಕೃಷ್ಣಪ್ಪ, ಬಸವಶೆಟ್ಟಿ, ನಂದಕುಮಾರ, ಮಹೇಶ್, ನಾಗೇಂದ್ರ, ಶಿವಲಿಂಗ, ಬಿ.ಮಹದೇವಶೆಟ್ಟಿ, ಪ್ರಕಾಶ್, ಸಿದ್ದರಾಜು, ಗೀತಾ, ಬಿಇಓ ಸಿ.ಎನ್.ರಾಜು ಎಇಇ ಮುತ್ತುರಾಜ್ ಹಾಗೂ ಶಿಕ್ಷಕರು ಇದ್ದರು.

ಜನರನ್ನು ಒಗ್ಗೂಡಿಸುವ ಶಕ್ತಿ ಸಿನಿಮಾಗೆ ಇದೆ

ಚಿತ್ರ ನಿರ್ದೇಶಕ ರಾಜ್ ಬಿ.ಶೆಟ್ಟಿ ಅಭಿಮತ



ಮೈಸೂರು, ಏ.9(ಜಿಎ)–ಜನರನ್ನು ಒಗ್ಗೂಡಿಸುವ ಶಕ್ತಿ ಸಿನಿಮಾಗೆ ಇದೆ ಎಂದು ಕನ್ನಡದ ಖ್ಯಾತ ನಿರ್ದೇಶಕ, ಚಿತ್ರಕಥೆ ಬರಹಗಾರ, ರಾಜ್ ಬಿ. ಶೆಟ್ಟಿ ಅಭಿಪ್ರಾಯಪಟ್ಟರು.

ಅಮೃತ ವಿಶ್ವ ವಿದ್ಯಾಪೀಠಂ ದೃಶ್ಯ ಸಂವಹನ ವಿಭಾಗದ ವತಿಯಿಂದ ಆಯೋಜಿಸಿದ್ದ 'ಸಿನಿರಮಾ–2022 ರಾಷ್ಟ್ರೀಯ ಕಿರುಚಿತ್ರೋತ್ಸವದ ಸಮಾರೋಪ ಸಮಾರಂಭ ಅಮೃತ 'ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನಲ್ಲಿ ನಡೆಯಿತು.

ಕಿರುಚಿತ್ರೋತ್ಸವದ ಭಾಗವಾಗಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಕಿರುಚಿತ್ರ ಸ್ಪರ್ಧೆಯಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಕನ್ನಡದ ಖ್ಯಾತ ನಿರ್ದೇಶಕ, ಚಿತ್ರಕಥೆ ಬರಹಗಾರ, ನಟರಾಜ್ ಬಿ. ಶೆಟ್ಟಿ ಪ್ರಶಸ್ತಿ ಪ್ರದಾನ ಮಾಡಿದರು. ನಂತರ ಮಾತನಾಡಿದ ಅವರು, ಕಥೆ ಹೇಳುವ ಮತ್ತು ಕೇಳುವ ಪರಂಪರೆ ನಮ್ಮ ಸಮಾಜದಲ್ಲಿ ತುಂಬಾ ಸಹಜವಾಗಿ ಬೆಳೆದುಕೊಂಡು ಬಂದಿದೆ. ಸಮಾಜವನ್ನು ವಿಭಜಿಸಲು ಹಲವು ಕಾರಣಗಳಿವೆ. ಆದರೆ ಜನರನ್ನು ಒಂದು ಗೂಡಿಸುವ ಶಕ್ತಿ ಒಂದು ಸಿನಿಮಾಕ್ಕಿದೆ. ಅಲ್ಲದೇ ನಮ್ಮನ್ನೇ ನಾವು ಒಪ್ಪಿಕೊಳ್ಳುವ ಗುಣವನ್ನು ಸಿನಿಮಾ ನೀಡಬಲ್ಲದು ಎಂದು ಅವರು ಅಭಿಪ್ರಾಯಪಟ್ಟರು. ಇದಕ್ಕೆ ಪೂರಕವಾಗಿ ತಮ್ಮ ನಿರ್ದೇಶನದ ಮೊದಲ ಚಿತ್ರ ಒಂದು ಮೊಟ್ಟೆಯ ಕಥೆ ಯನ್ನು ನಿದರ್ಶನವಾಗಿ ನೀಡಿದರು. ಸಿನಿಮಾ ಮಾಡುವ ಮೊದಲು ಬೇಕಾದ ಆಳವಾದ ಅಧ್ಯಯನ,ಸಮಾಜವನ್ನು ಸಹಜವಾಗಿ ನೋಡುವ ಪರಿಯನ್ನು ಬೆಳೆಸಿಕೊಳ್ಳುವಂತೆ ಯುವ ಚಿತ್ರ ನಿರ್ದೇಶಕರಿಗೆ ಸಲಹೆ ನೀಡಿದರು.

ಪ್ರಶಸ್ತಿ ವಿಜೇತರು : ಪ್ರಥಮ ಅತ್ಯುತ್ತಮ ಕಿರುಚಿತ್ರ–ರಿತುನ್ ಚಾಕೊ ಇಟ್ಟಿ (ನನ್ನಿ–ಮಲಯಾಳಂ), ದ್ವಿತೀಯ ಅತ್ಯುತ್ತಮ ಕಿರುಚಿತ್ರ– ವೈಷ್ಣವ್ ಅಶೋಕ್ (ಬಿ ಸೆಲಿನ್–ಮಲಯಾಳಂ), ತೃತೀಯ ಕಿರುಚಿತ್ರ– ಗೆಡೆಲಾ ಮೋಹನಾ ವಂಶಿ (ದಿ ಮಂಕಿ ವಿಚ್‌ಟ್ರೈಡ್ ಟುಟೇಮ್ ದಆಕ್ಸಿಜನ್ ಬಾಂಬ್– ಬೆಂಗಾಳಿ) 5,000 ನಗದು, ಟ್ರೋಫಿ ಹಾಗೂ ಪ್ರಮಾಣಪತ್ರ

ವಿಶೇಷ ವಿಭಾಗ ಪ್ರಶಸ್ತಿಗಳು : ಅತ್ಯುತ್ತಮ ಸಂಕಲನಕಾರ– ಹರಿ (ಟಿಎನ್ 37–ತಮಿಳು), ಅತ್ಯುತ್ತಮ ನಿರ್ದೇಶಕ–ರಿತುನ್ ಚಾಕೋ ಇಟ್ಟಿ (ನನ್ನಿ–ತಮಿಳು), ಅತ್ಯುತ್ತಮ ಛಾಯಾಗ್ರಾಹಕ– ಕೀರ್ತಿ ವಾಸನ್ (ಪುಷ್ಪ ಲಾಡ್ಜ್ – ಕನ್ನಡ), ಅತ್ಯುತ್ತಮ ನಟನೆ–ಜಿತಿನ್ ಬಾಬು (ಬೂ– ಮಲಯಾಳಂ), ಜ್ಯೂರಿ ವಿಶೇಷ ಪ್ರಶಸ್ತಿ–ಪುಷ್ಪಲಾಡ್ಜ್ (ಕನ್ನಡ)

ಅಮೃತ ಮೈಸೂರು ಕ್ಯಾಂಪಸ್‌ನ ಪ್ರಾಂಶುಪಾಲ ಡಾ.ಜಿ. ರವೀಂದ್ರನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಚಾಲಕರಾದ ಬ್ರಹ್ಮಚಾರಿ ಮುಕ್ತಿದಾಮೃತ ಚೈತನ್ಯ, ದೃಶ್ಯ ಸಂವಹನ ವಿಭಾಗದ ಮುಖ್ಯಸ್ಥರಾದ ಡಾ. ಮೌಲ್ಯ ಬಾಲಾಡಿ ಹಾಗೂ ಡಿಆರ್‌ಸಿ ಸಿನೆಮಾದ ಮಾಲೀಕರಾದ ವೈಶಾಲಿ ಹನುಮಂತ್ ಮತ್ತು ಹನುಮಂತ್ ಭಾಗವಹಿಸಿದ್ದರು.

ಇಂದು ಮೂರೂರಮ್ಮ ರಥೋತ್ಸವ

ಹುಣಸೂರು, ಏ.9(ಕೆಕೆ)– ತಾಲೂಕಿನ ಹಾಲಗೆರೆ ಶ್ರೀಮೂರೂರಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ಏ.10ರಂದು ರಥೋತ್ಸವ ನಡೆಯಲಿದೆ. ಹುಣಸೂರು–ಮಡಿಕೇರಿ ಹೆದ್ದಾರಿಯಲ್ಲಿರುವ ದೇವಾಲಯದ ರಥೋತ್ಸವದ ಅಂಗವಾಗಿ ಅಂದು ಮುಂಜಾನೆ ಹಾಲಗೆರೆ ಸಮೀಪದ ನಿಲುವಾಗಿಲು ಗ್ರಾಮದ ಬಳಿ ಲಕ್ಷ್ಮಣತೀರ್ಥ ನದಿ ತಟದಲ್ಲಿ ಗಂಗಾಪೂಜೆ ನೆರವೇರಿಸಿದ ನಂತರ ಕಳಶ ಹೊತ್ತ ನೂರಾರು ಮಹಿಳೆಯರು ದೇವಾಲಯಕ್ಕೆ ಆಗಮಿಸುವರು. ಏ.11ಕ್ಕೆ ರಥೋತ್ಸವ, 12.30ಕ್ಕೆ ಅನ್ನಸಂತರ್ಪಣೆ, ಸಂಜೆ 4ಕ್ಕೆ ದೇವಾಲಯದ ಎದುರಿನ ಕೊಳದಲ್ಲಿ ತೆಪ್ಪೋತ್ಸವ ನಡೆಯಲಿದೆ.

ಇಂದು ಶ್ರೀಲಕ್ಷ್ಮೀ ರಂಗನಾಥಸ್ವಾಮಿ ಉತ್ಸವ

ಸಾಲಿಗ್ರಾಮ, ಏ. 9(ಜ್ಯೋತಿ)– ನಾಳೆ (ಏ. 10) ಸಂಜೆ 4 ಗಂಟೆಗೆ ಶ್ರೀ ಲಕ್ಷ್ಮೀ ರಂಗನಾಥಸ್ವಾಮಿ ಉತ್ಸವ ನಡೆಯಲಿದೆ. ಉತ್ಸವವು ಗುಳಸಿಂದ ಗ್ರಾಮದಿಂದ ಸಾಲಿಗ್ರಾಮದ ಶ್ರೀಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಹತ್ತಿರ ಬರಲಿದ್ದು, ನಂತರ ಅಲ್ಲಿಂದ ಮಹಾವೀರ ರಸ್ತೆಯಲ್ಲಿರುವ ಶ್ರೀರಾಮ ಮಂದಿರಕ್ಕೆ ಅಡ್ಡ ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ಬರಮಾಡಿಕೊಳ್ಳಲಾಗುವುದು. ಸ್ವಾಮಿ ಪೂಜೆ ನಂತರ ಸಂಜೆ 5 ಗಂಟೆಗೆ ಪ್ರಸಾದ ವಿನಿಯೋಗವಿರುತ್ತದೆ ಎಂದು ಶ್ರೀ ಲಕ್ಷ್ಮೀ ರಂಗನಾಥಸ್ವಾಮಿ ಸೇವಾ ಸಮಿತಿ ತಿಳಿಸಿದೆ. ಏ.11 ರಂದು ಮಧ್ಯಾಹ್ನ 2 ಗಂಟೆ ನಂತರ ಉತ್ಸವಮೂರ್ತಿಯನ್ನು ಗುಳಸಿಂದ ಗ್ರಾಮಕ್ಕೆ ಭಕ್ತಾದಿಗಳ ಸಮ್ಮುಖದಲ್ಲಿ ಕಳುಹಿಸಿ ಕೊಡಲಾಗುವುದು.

ಸಿಸಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಪಿರಿಯಾಪಟ್ಟಣ, ಏ.9(ವೀರೇಶ್)– ತಾಲೂಕಿನ ನಿಲವಾಡಿ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ನಾನು ಶಾಸಕನಾದ ಮೇಲೆ ತಾಲೂಕಿನಲ್ಲಿ ಹಿಂದೆಂದೂ ಕಾಣದ ಅಭಿವೃದ್ಧಿ ಕೆಲಸಗಳನ್ನು ಮಾಡಿ ತೋರಿಸಿದ್ದೇನೆ ಎಂದರು.

ಜನರು ನನ್ನನ್ನು ಶಾಸಕನಾಗಿ ಆಯ್ಕೆ ಮಾಡಿದ ದಿನದಿಂದ ಪಟ್ಟಣ ಸೇರಿದಂತೆ ಗ್ರಾಮಾಂತರ ಭಾಗಗಳಿಗೆ ಹೆಚ್ಚು ಒತ್ತು ನೀಡಿ ಮೂಲ ಸೌಕರ್ಯ ಒದಗಿಸಲು ಶ್ರಮಿಸಲಾಗುತ್ತಿದೆ. ಮುಂದಿನ ಚುನಾವಣೆಯಲ್ಲಿಯೂ ಜನಬೆಂಬಲ ನನ್ನೊಂದಿಗೆ ಇದ್ದರೆ ತಾಲೂಕಿನಲ್ಲಿ ಅಭಿವೃದ್ಧಿ ಕೆಲಸ ಬಾಕಿ ಉಳಿಯದಂತೆ ಪೂರ್ಣಗೊಳಿಸುತ್ತೇನೆ ಎಂದು ತಿಳಿಸಿದರು.

ಗ್ರಾಮಸ್ಥರಿಂದ ಮನವಿ: ಗ್ರಾಮದ ಒಳಗೆ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ, ಸಮುದಾಯ ಭವನ, ದಂಡಿಯಮ್ಮ ದೇವಾಲಯದ ಅಭಿವೃದ್ಧಿಗೆ ಅನುದಾನ ಜಮೀನುಗಳಿಗೆ ದಾರಿ ಹಾಗೂ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸಿ ಕೊಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಕೆ.ಮಹದೇವ್, ಈಗಾಗಲೇ 1.10 ಕೋಟಿ ರೂ.ಗಳನ್ನು ಗ್ರಾಮದ ಅಭಿವೃದ್ಧಿಗೆ ನೀಡಲಾಗಿದೆ. ದೇವಾಲಯದ ಅಭಿವೃದ್ಧಿಗೆ 5 ಲಕ್ಷ ರೂ. ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು. ವಿದ್ಯುತ್ ಸಮಸ್ಯೆಗಳನ್ನು ತಕ್ಷಣದಲ್ಲಿಯೇ ಬಗೆಹರಿಸುವುದಾಗಿ ಭರವಸೆ ನೀಡಿದರು. ಇದೇ ವೇಳೆ ಶಾಸಕ ಕೆಮಹದೇವ್ ಅವರನ್ನು ಸನ್ಮಾನಿಸಲಾಯಿತು. ತಹಸೀಲ್ದಾರ್ ಕೆ.ಚಂದ್ರಮೌಳಿ, ಮುಖಂಡರಾದ ಗಣೇಶ್, ಅಪ್ಪಾಜಿಗೌಡ, ಮೈಲಾರಪ್ಪ ಶೋಭಾ ಲೋಕೇಶ್, ರಂಗನಾಥ್, ನಂದೀಶ್, ಸುಂದರ್, ಪುಟ್ಟಸ್ವಾಮಿ, ನಟರಾಜು, ಪುಟ್ಟ ರಾಜು, ಮಲ್ಲೇಶ್, ಗೋಪಾಲಯ್ಯ, ಹನುಮಯ್ಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಗ್ರಾಮಸ್ಥರಿದ್ದರು.

ಚಿಕ್ಕಕೌಲಂದೆ ಗ್ರಾಮದಲ್ಲಿ ಚರಂಡಿ ಸಮಸ್ಯೆ

ಅಧಿಕಾರಿಗಳು, ಜನಪ್ರತಿನಿಧಿಗಳ ಗ್ರಾಮ ಪ್ರವೇಶಕ್ಕೆ ನಿರ್ಬಂಧ

ಗ್ರಾಮಸ್ಥರಿಂದ ಚುನಾವಣೆ ಬಹಿಷ್ಕರಿಸುವ ಎಚ್ಚರಿಕೆ



ನಂಜನಗೂಡು, ಏ.9– ಚರಂಡಿ ಸಮಸ್ಯೆ ನಿವಾರಿಸದ ಹಿನ್ನೆಲೆಯಲ್ಲಿ ತಾಲೂಕಿನ ಚಿಕ್ಕಕೌಲಂದೆ ಗ್ರಾಮಸ್ಥರು ಗ್ರಾಮದ ಒಳಗೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಪ್ರವೇಶವಿಲ್ಲ ಎಂಬ ನಾಮಫಲಕ ಅಳವಡಿಸಿ ಚುನಾವಣೆ ಬಹಿಷ್ಕರಿಸುವ ಎಚ್ಚರಿಕೆ ನೀಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚಿಕ್ಕಕೌಲಂದೆ ಗ್ರಾಮದಲ್ಲಿ ಚರಂಡಿ ನೀರು ಹರಿದು ಹೋಗದೆ ಚರಂಡಿಯಲ್ಲೇ ನಿಲ್ಲುತ್ತಿದೆ. ಗ್ರಾಮಸ್ಥರು ಪ್ರತಿದಿನ ಚರಂಡಿ ನೀರನ್ನು ಬಕೆಟ್‌ನಲ್ಲಿ ಹೊರಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಸಾಕಷ್ಟು ಬಾರಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಸಮಸ್ಯೆ ಬಗೆಹರಿಸುವಂತೆ ಮನವಿ ಸಲ್ಲಿಸಿದ್ದರೂ, ಯಾವುದೇ ಪ್ರಯೋಜನವಾಗದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಚರಂಡಿ ಶುಚಿತ್ವಕ್ಕೆ ಆದ್ಯತೆ ನೀಡದ ನಮ್ಮ ಮನವಿಗೆ ಸ್ಪಂದಿಸದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ನಮ್ಮ ಗ್ರಾಮಕ್ಕೆ ಭೇಟಿ ನೀಡಲು ಯೋಗ್ಯರಲ್ಲ. ಅವರಿಗೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ನಾಮಫಲಕ ಅಳವಡಿಸಿ ಪ್ರತಿಭಟನೆ ನಡೆಸಿದ್ದಾರೆ.

ಶಾಸಕ ಬಿ.ಹರ್ಷವರ್ಧನ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಚಿಕ್ಕಕೌಲಂದೆ ಗ್ರಾಮದಲ್ಲಿ ಚರಂಡಿ ನೀರು ಖಾಸಗಿಯವರ ಜಮೀನಿನಲ್ಲಿ ಹರಿದು ಹೋಗಬೇಕು. ಅದಕ್ಕೆ ಅವಕಾಶವಿಲ್ಲ. ಖಾಸಗಿ ಜಮೀನಿನ ಮಾಲೀಕರು ಅವರು ಚಿಕ್ಕದಾದ ಜಾಗ ನೀಡಲು 2 ಲಕ್ಷ ಕೇಳುತ್ತಿದ್ದಾರೆ. ಆದ್ದರಿಂದ ಸಮಸ್ಯೆ ಬಗೆಹರಿದಿಲ್ಲ. ಆದ್ದರಿಂದ ಆಪಾದನೆ ಮಾಡುತ್ತಿದ್ದಾರೆ. ಇದು ಚುನಾವಣೆ ವರ್ಷವಾದ್ದರಿಂದ ಅಪಾದನೆ ಸಹಜ. ಗ್ರಾಪಂಗೆ ಸಮಸ್ಯೆ ಬಗೆಹರಿಸಲು ಸೂಚಿಸಿದ್ದೇನೆ ಎಂದರು.

ಶ್ರೀಹೊನ್ನಾದೇವಿ ಅಮ್ಮನವರ ಜಾತ್ರಾ ಮಹೋತ್ಸವ



ತಿ.ನರಸೀಪುರ ಏ.9(ಎಸ್‌ಕೆ)– ತಾಲೂಕಿನ ಸೋಸಲೆ ಗ್ರಾಮದಲ್ಲಿ ಕಳೆದ 2 ವರ್ಷಗಳಿಂದ ಸ್ಥಗಿತಗೊಂಡಿದ್ದ ಶ್ರೀಹೊನ್ನಾದೇವಿ ಅಮ್ಮನವರ ಜಾತ್ರಾ ಮಹೋತ್ಸವ ಈ ಬಾರಿ ಅದ್ಧೂರಿಯಾಗಿ ನಡೆಯಲಿದೆ. ಶ್ರೀಹೊನ್ನಾದೇವಿ ಹಾಗೂ ಶ್ರೀ ಹೂ ಬಾಲೇಶ್ವರಿ ಅಮ್ಮನವರ ಜಾತ್ರಾ ಸಿದ್ಧತೆ ಸೋಸಲೆ ಗ್ರಾಮದಲ್ಲಿ ಬಿರುಸಿನಿಂದ ಸಾಗಿದ್ದು, ಹಬ್ಬ ಹಾಗೂ ಧಾರ್ಮಿಕ ಉತ್ಸವಕ್ಕೆ ಏ.3ರಿಂದಲೇ ಅಂಕುರಾರ್ಪಣೆಯೊಂದಿಗೆ ವಿದ್ಯುಕ್ತ ಚಾಲನೆ ನೀಡಲಾಗಿದೆ. ಏ.6 ರಂದು ಬಿಜಯ ಬಿಡಿಸುವುದು. ಏ.7 ರಂದು ಶಾಂತೋತ್ಸವ, ಏ.8 ರಂದು ನಿತ್ಯೋತ್ಸವ, ಏ.9 ರಂದು ಶೇಷ ವಾಹನೋತ್ಸವ ನಡೆಯಿತು.

ಏ.10ರಂದು ಬಲಿ ಉತ್ಸವ ಜರುಗಲಿದ್ದು, ಏ.11ರಂದು ಚಂದ್ರ ಮಂಡಲೋತ್ಸವ, ಏ.12ರಂದು ಪುಷ್ಪಮಂಟಪ ಉತ್ಸವ, ಏ.13ರಂದು ಮಡೆ ಅಶ್ವವಾಹನೋತ್ಸವ, ಏ.14ರಂದು ಗಜಾರೋಹಣ ಉತ್ಸವ, ಏ.15ರಂದು ಮಧ್ಯಾಹ್ನ 12.30ಕ್ಕೆ ಶ್ರೀಹೊನ್ನಾದೇವಿ ಅಮ್ಮನವರ ದಿವ್ಯ ರಥೋತ್ಸವ, ಏ.16ರಂದು ಗರುಡೋತ್ಸವ, ಏ.17ರಂದು ಬೆಳಗ್ಗೆ ವಸಂತೋತ್ಸವ, ಸಂಜೆ ತೆಪ್ಪೋತ್ಸವ, ಏ.18ರಂದು ರುದ್ರಾಕ್ಷಿ ಮಂಟಪೋತ್ಸವ, ಏ.19ರಂದು ಮಹಾರುದ್ರಾಭಿಷೇಕ ಹಾಗೂ ಏ.20ರಂದು ಪುಷ್ಪಂದಳೋತ್ಸವ ಸಾಂಗವಾಗಿ ನೆರವೇರಲಿವೆ.

ಮುಂಜಾಗ್ರತಾ ಕ್ರಮವಾಗಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಭಕ್ತರು ಹಾಗೂ ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿಕೊಂಡು ದೇವರ ದರ್ಶನ ಪಡೆಯಬೇಕು. ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಬಾರದೆಂದು ಧಾರ್ಮಿಕ ದತ್ತಿ ಇಲಾಖೆ ಅಧಿಕಾರಿಗಳೂ ಆದ ತಹಸೀಲ್ದಾರ್ ಬಿ.ಗಿರಿಜಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹೆಚ್.ಡಿ.ಕೋಟೆ ಸಮರ್ಥ ಫೌಂಡೇಶನ್ ಟ್ರಸ್ಟ್‌ನಿಂದ ಆಯೋಜಿಸಿದ್ದ ಕ್ಷಯರೋಗ ಮಾಸಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ನಾಗೇಂದ್ರ ಅವರನ್ನು ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ವಿವಿಧ ಮಹಿಳಾ ಸ್ವಸಹಾಯ ಸಂಘದ ಸದಸ್ಯರು, ಟ್ರಸ್ಟ್ ಸಂಸ್ಥಾಪಕ ಪ್ರಕಾಶ್, ಕಾರ್ಯಕ್ರಮ ವ್ಯವಸ್ಥಾಪಕ ಕೃಷ್ಣಸ್ವಾಮಿ ಸೇರಿದಂತೆ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ 'ಕೈ' ಪ್ರತಿಭಟನೆ



ಭೇರ್ಯ, ಏ.9– ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಗ್ಯಾಸ್, ಅಡುಗೆ ಎಣ್ಣೆ, ರಸಗೊಬ್ಬರ, ಔಷಧಗಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಕೆ.ಆರ್.ನಗರ ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ್ ನೇತೃತ್ವದಲ್ಲಿ ಭೇರ್ಯದಲ್ಲಿ ಪ್ರತಿಭಟನೆ ನಡೆಸಲಾಯಿತು.


ಬೆಳೆಗಳಿಗೆ ರೈತರು ಬಳಸುವ ಔಷಧಿ ಮೇಲಿನ ಜಿಎಸ್‌ಟಿ ದರ ಹೆಚ್ಚಿಸಿದ್ದಾರೆ. ಸರ್ಕಾರ ರೈತರು ಬೆಳೆದ ರಾಗಿ ಖರೀದಿಸದೆ, ರಾಗಿ ಖರೀದಿ ಕೇಂದ್ರ ಮುಚ್ಚಿದ್ದಾರೆ. ಇದರಿಂದಾಗಿ ರೈತರು ಜಿಲ್ಲೆಯಲ್ಲಿ ಅಂದಾಜು 15 ಸಾವಿರ ಟನ್ ರಾಗಿ ಮಾರಾಟ ಮಾಡಲು ಸಾಧ್ಯವಾಗದೇ ದಲ್ಲಾಳಿಗಳ ಮೊರೆ ಹೋಗಿದ್ದು, ಇದರಿಂದ ರೈತರಿಗೆ ಪ್ರತಿ ಕ್ವಿಂಟಾಲ್‌ಗೆ 1500 ರೂ. ನಷ್ಟವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು ಇದೇ ರೀತಿ ಮೆಕ್ಕೆಜೋಳ ಮತ್ತು ಭತ್ತ ಖರೀದಿಯಲ್ಲಿಯೂ ರೈತರಿಗೆ ಅನ್ಯಾಯವಾಗಿದೆ ಎಂದರು.

ಪಂಚರಾಜ್ಯ ಚುನಾವಣೆ ಫಲಿತಾಂಶ ಬರುವವರೆಗೂ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಮಾಡಲಿಲ್ಲ. ಆದರೆ ಚುನಾವಣೆ ಫಲಿತಾಂಶ ಬಂದ ಬಳಿಕ 8 ರೂ. ಹೆಚ್ಚಾಗಿದೆ ಸಗಟು ಡೀಸೆಲ್ ದರ 25 ರೂ. ಹೆಚ್ಚಳ ಮಾಡಲಾಗಿದೆ ವಾಣಿಜ್ಯ ಗ್ಯಾಸ್ ಬೆಲೆ 250 ರೂ. ಹೆಚ್ಚಳ ಆಗಿದೆ. ಡಾಲರ್ ಎದುರು ರೂಪಾಯಿ ಬೆಲೆ ಕುಸಿಯುತ್ತಲೇ ಇದೆ. ಕೇಳಿದರೆ ಕೇಂದ್ರ ಸಚಿವರು ಯಾವುದು ನಮ್ಮ ಕೈಲಿ ಇಲ್ಲ ಎನ್ನುತ್ತಾರೆ. ಯಾಕೆ ಜನರಿಗೆ ಸುಳ್ಳು ಹೇಳುತ್ತೀರಾ ಮೋದಿಯವರೇ ಎಂದು ಪ್ರಶ್ನಿಸಿದರು.

ನಮ್ಮ ಪಕ್ಷದ ಅಧಿಕಾರಾವಧಿಯಲ್ಲಿ ಗ್ಯಾಸ್ ಬೆಲೆ 414 ರೂ. ಇತ್ತು. ಆದರೆ ಈಗ 1000 ರೂ. ತಲುಪಿದೆ. ನಮ್ಮ ಸರ್ಕಾರ ಗ್ಯಾಸ್ ಮೇಲೆ ಶೇ.50 ಸಬ್ಸಿಡಿ ನೀಡಿತ್ತು. ಆದರೆ ಮೋದಿ 2020ರಿಂದ ಸಬ್ಸಿಡಿ ನಿಲ್ಲಿಸಿದ್ದಾರೆ. ಇದರಿಂದಾಗಿಯೇ ಎಲ್‌ಪಿಜಿ ಬೆಲೆ ಏರಿದೆ. ಅಡುಗೆ ಎಣ್ಣೆ ಬೆಲೆ ಲೀಟರ್‌ಗೆ 220 ರೂ., ಕಬ್ಬಿಣ ಟನ್‌ಗೆ 90 ಸಾವಿರ ರೂ. ಆಗಿದೆ. ಜನೌಷಧದ ಬೆಲೆಯನ್ನೂ ಶೇ.10 ರಷ್ಟು ಹೆಚ್ಚಿಸಲಾಗಿದೆ. ಈ ದುಬಾರಿ ಬೆಲೆಯಲ್ಲಿ ಜನ ಬದುಕಲು ಸಾಧ್ಯವೇ? ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ರಾಷ್ಟ್ರೀಯ ವಿದ್ಯಾರ್ಥಿ ಕಾಂಗ್ರೆಸ್ ತಾಲೂಕು ಅಧ್ಯಕ್ಷ ಸಚಿನ್, ಕಾಂಗ್ರೆಸ್ ಮುಖಂಡರಾದ ಖಾಲಿದ್ ಪಾಷ, ಕೆ.ಸಯ್ಯದ್, ಕೆ.ದಿನೇಶ್, ರಾಘವೇಂದ್ರ (ಬಬ್ರು), ಶಿವಣ್ಣ, ಟಿ.ಸಿ.ಮಂಜು, ಪದಾಧಿಕಾರಿಗಳಾದ ಶಂಕರ್, ಸ್ವರೂಪ್, ನಿಶಾದ್, ದರ್ಶನ್ ಹಾಗೂ ಮಹದೇವ, ಮರಿಶೆಟ್ಟಿ ಇತರರಿದ್ದರು.

ಇಂದು ಬನ್ನೂರಿಗೆ ಮಾಜಿ ಸಿಎಂ ಹೆಚ್‌ಡಿಕೆ



ತಿ.ನರಸೀಪುರ ಏ.9(ಎಸ್‌ಕೆ)– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ವಿಶೇಷ ಚೇತನರಿಗೆ ಸವಲತ್ತುಗಳನ್ನು ವಿತರಿಸಲು ತಾಲೂಕಿನ ಬನ್ನೂರು ಪಟ್ಟಣಕ್ಕೆ ಏ.10ರಂದು ಆಗಮಿಸಲಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ತಾಲೂಕಿನ ಗಡಿಗ್ರಾಮ ದೊಡ್ಡ ಮುಲಗೂಡು ಮೂಲಕ ಆಗಮಿಸುವ ಹೆಚ್.ಡಿ.ಕುಮಾರಸ್ವಾಮಿ ಅವರು ಕೆಂಪೇಗೌಡನಕೊಪ್ಪಲು, ಯಾಚೇನಹಳ್ಳಿ, ತುರುಗನೂರು, ದಾಸೇಗೌಡನಕೊಪ್ಪಲು, ಚಾಮನಹಳ್ಳಿ ಮಾರ್ಗವಾಗಿ ಸಂಜೆ 4 ಗಂಟೆಗೆ ಬನ್ನೂರು ಪಟ್ಟಣಕ್ಕೆ ಆಗಮಿಸಲಿದ್ದಾರೆ.

ಹಳೇ ಸಂತೇಮಾಳದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿದ ಬಳಿಕ ಶ್ರೀಬಿಸಿಲು ಮಾರಮ್ಮ ಹಾಗೂ ಗಣಪತಿ ದೇವಸ್ಥಾನಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸುವರು. ದೇವಿತೋಪು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಬೀಡನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ದೇವಾಲಯಕ್ಕೆ ಭೇಟಿ ನೀಡುವರು. ಬನ್ನೂರಿನ ಹೆಗ್ಗರೆ ವೀಕ್ಷಣೆ ಮಾಡಿ, ಮಾಕನಹಳ್ಳಿ ಮಾರ್ಗವಾಗಿ ಮತ್ತೆ ಬನ್ನೂರು ಡೈರಿ ಆವರಣದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ವಿಶೇಷ ಚೇತನರಿಗೆ ತ್ರಿಚಕ್ರ ವಾಹನಗಳನ್ನು ವಿತರಿಸುವರು.

ಶಾಸಕ ಎಂ.ಅಶ್ವಿನ್ ಕುಮಾರ್, ಎಂಎಲ್‌ಸಿ ಸಿ.ಎನ್.ಮಂಜೇಗೌಡ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು. ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಹುಣಸೂರು, ಏ.9(ಕೆಕೆ)– ತಾಲೂಕಿನ ಬಿಳಿಕೆರೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಹೊಸ ಶಕ್ತಿ ಪರಿವರ್ತಕ ಅಳವಡಿಸುವ ಕಾಮಗಾರಿ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಏ.10 ಮತ್ತು 11 ರಂದು ತಾಲೂಕಿನ ಮನುಗನಹಳ್ಳಿ, ತೆಂಕನಕೊಪ್ಪಲು, ಬಿಳಿಕೆರೆ, ಆಲಗನಹಳ್ಳಿ, ಕ್ಯಾತನಹಳ್ಳಿ, ಗಾಗೇನಹಳ್ಳಿ, ಮುಳ್ಳೂರು, ಬೋಳನಹಳ್ಳಿ, ರಮ್ಮನಹಳ್ಳಿ, ಚಿಕ್ಕಬೀಚನಹಳ್ಳಿ, ಚಲ್ಲಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೀಶಂಭುಲಿಂಗೇಶ್ವರ ಪೂಜಾ ಮಹೋತ್ಸವ



ಸರಗೂರು, ಏ.8 (ನಾಗೇಶ್)– ಪಟ್ಟಣದ ಆದಿಕರ್ನಾಟಕ ಸಮಾಜದ ವತಿಯಿಂದ ಶ್ರೀ ಶಂಭುಲಿಂಗೇಶ್ವರ ಪೂಜಾ ಮಹೋತ್ಸವವನ್ನು ವಿಜೃಂಭಣೆಯಾಗಿ ಆಚರಣೆ ಮಾಡಲಾಯಿತು.

ದೇವಸ್ಥಾನಕ್ಕೆ ತಳಿರು ತೋರಣ ರಂಗೋಲಿ ಬಿಡಿಸಿ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಬೆಳಿಗಿನ ಜಾವ ಗಣಪತಿ ಹೋಮ ಪುಣ್ಯಾಹ, ಕಳಶ ಪ್ರತಿಷ್ಠಾಪನೆ, ನವಗ್ರಹ ಹೋಮ, ಪೂಜಾ ಕೈಂಕರ್ಯಗಳು ಜರುಗಿದವು.

ಬೆಳಗ್ಗೆ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ನಡೆಸಿ ಶೀಶಂಭುಲಿಂಗೇಶ್ವರ ಉತ್ಸವ ಮೂರ್ತಿಯನ್ನು ಪೂರ್ಣ ಕುಂಭ ಕಳಶದೊಂದಿಗೆ ಪಟ್ಟಣದ ಪ್ರಮುಖ ರಸ್ತೆ ಮುಖಾಂತರ ಮಂಗಳವಾದ್ಯ, ಸತ್ತಿಗೆಯೊಂದಿಗೆ ಮೆರವಣಿಗೆ ನಡೆಸಲಾಯಿತು, ಉತ್ಸವವು ದೇವಾಲಯಕ್ಕೆ ತಲುಪಿನಂತರ ವಿಶೇಷ ಪೂಜೆ ನಡೆಸಿ ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು. ಪಪಂ ಸದಸ್ಯ ಎಸ್.ಎಲ್.ರಾಜಣ್ಣ, ಆದಿ ಕರ್ನಾಟಕ ಸಮಾಜದ ಯಜಮಾನರಾದ ಕೃಷ್ಣ, ಭೈರಲಿಂಗಯ್ಯ, ಚಿಕ್ಕಯಜಮಾನರಾದ ಕೃಷ್ಣ, ಮಾಜಿ ಯಜಮಾನರಾದ ಭೀಮಯ್ಯ, ಇದೀಯಪ್ಪ, ಹನುಮಂತಯ್ಯ, ಕೃಷ್ಣದಾಸಿ, ಭೋಗಯ್ಯ, ಕೃಷ್ಣ, ಸುಬ್ರಹ್ಮಣ್ಯ ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಕೃಷ್ಣಯ್ಯ, ಬಿಲ್ಲೇಶ್, ಶಿವಶಂಕರ್, ದೇವಣ್ಣ, ಅರ್ಚಕರಾದ, ಕಲ್ಲಪ್ಪ, ಹಾಗೂ ಸಮಾಜದ ಬಂಧುಗಳು ಭಾಗವಹಿಸಿದ್ದರು.

ಸವಾಲಿನ ಜೀವನದ ನಡುವೆ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಇರಲಿ

ಮಧುಮೇಹ ತಜ್ಞ ಡಾ.ರೇಣುಕಾಪ್ರಸಾದ್



ಮೈಸೂರು, ಏ.9– ಇಂದಿನ ಸ್ಥಿತಿಯಲ್ಲಿ ಸಾಕಷ್ಟು ಸವಾಲಿನ ನಡುವೆ ತನ್ನ ಜೀವನ ನಡೆಸುತ್ತಿರುವ ಮಾನವರು ಅದರ ನಡುವೆಯೇ ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಮಧುಮೇಹ ತಜ್ಞ ಡಾ.ರೇಣುಕಾಪ್ರಸಾದ್ ತಿಳಿಸಿದರು.

ಮೈಸೂರಿನ ಸುಣ್ಣದಕೇರಿ 8ನೇ ಕ್ರಾಸ್‌ನಲ್ಲಿರುವ ಗಂಗಾಮತಸ್ಥರ ಸಮುದಾಯ ಭವನದಲ್ಲಿ ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ಡಾಕ್ಟರ್ ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆ ಹಾಗೂ ನ್ಯೂ ಡಯಾ ಕೇರ್ ಸೆಂಟರ್ ಅಂಡ್ ಪಾಲಿಕ್ಲಿನಿಕ್ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ವಿಶ್ವ ಆರೋಗ್ಯ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ವಿಶ್ವ ಆರೋಗ್ಯ ದಿನವನ್ನು ಬಹಳ ಹಿಂದಿನಿಂದಲೂ ಜಾಗೃತಿ ದಿನವನ್ನಾಗಿ ವಿಶ್ವದಾದ್ಯಂತ ಆಚರಿಸಿಕೊಂಡು ಬಂದಿದ್ದೇವೆ. ಆರೋಗ್ಯ ಸುಧಾರಣೆ ನಮ್ಮ ಮೊದಲ ಆದ್ಯತೆಯಾಗಿರಬೇಕು. ಕಳೆದೆರೆಡು ವರ್ಷಗಳಲ್ಲಿ ಅನಾರೋಗ್ಯದಿಂದ ಸಾವನ್ನಪ್ಪುವವರ ಸಂಖ್ಯೆ ಹೆಚ್ಚಾಗಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಹಾಗಾಗಿ ಎಲ್ಲರೂ ತಮ್ಮ ಕುಟುಂಬ ಮತ್ತು ತಮ್ಮ ಊರಿನ ಜನರಲ್ಲಿ ಆರೋಗ್ಯ ಜಾಗೃತಿಯನ್ನು ಮೂಡಿಸಬೇಕು. ನಾವು ಚೆನ್ನಾಗಿದ್ದರೆ ಕುಟುಂಬ ಚೆನ್ನ, ಕುಟುಂಬ ಚೆನ್ನಾಗಿದ್ದರೆ. ಊರು ಚೆನ್ನ ಹೀಗೆ ಎಲ್ಲರೂ ಒಗ್ಗೂಡಿ ಆರೋಗ್ಯಯುತವಾದ ಪರಿಸರವನ್ನು ನಮ್ಮ ಸುತ್ತಮುತ್ತ ನಿರ್ಮಿಸೋಣ. ಎಲ್ಲರೂ ಆರೋಗ್ಯದಿಂದ ಬದುಕೋಣ ಎಂದರು."ನಮ್ಮ ಕ್ರಮ ನಮ್ಮ ಆರೋಗ್ಯ" ಎಂಬ ಧ್ಯೇಯವಾಕ್ಯದೊಂದಿಗೆ ಸುತ್ತಮುತ್ತಲಿನ ವಾತಾವರಣವನ್ನು ಸಹ ಚೆನ್ನಾಗಿ ಇಟ್ಟುಕೊಳ್ಳಬೇಕು ಎಂದರು.

ರೋಗಗಳಲ್ಲಿ ಸಕ್ಕರೆ ಖಾಯಿಲೆಯೂ ಸಹ ಒಂದಾಗಿದೆ. ಇದರಿಂದ ಸಾಕಷ್ಟು ಅಂಗಾಂಗಗಳು ದುರ್ಬಲಗೊಂಡು ಜೀವ ವನ್ನೇ ಕಳೆದುಕೊಳ್ಳುವ ಸಂದರ್ಭಗಳೂ ಸಹ ಎದುರಾಗುತ್ತದೆ. ಆದ್ದರಿಂದ ತಮ್ಮ ಆರೋಗ್ಯವನ್ನು ಚೆನ್ನಾಗಿ ನೋಡಿ ಕೊಳ್ಳಬೇಕು ಎಂದು ಸಲಹೆ ನೀಡಿದರು.

ಸುವರ್ಣ ಬೆಳಕು ಫೌಂಡೇಶನ್‌ನ ಅಧ್ಯಕ್ಷ ಮಹೇಶ್ ಮಾತನಾಡಿ, ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಸುಣ್ಣದಕೇರಿ ಬಡಾವಣೆಯ ನಿವಾಸಿಗಳಿಗಾಗಿ ಕಣ್ಣಿನ ತಪಾಸಣೆ ಹಾಗೂ ಮಧುಮೇಹ ತಪಾಸಣೆಯನ್ನು ಏರ್ಪಡಿಸಲಾಗಿದ್ದು, ಇದನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ಜನತೆ ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಡಾಕ್ಟರ್ ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯ ಮಾರ್ಕೆಟಿಂಗ್ ಮ್ಯಾನೇಜರ್ ರವಿ. ಎನ್, ಸುವರ್ಣ ಬೆಳಕು ಫೌಂಡೇಶನ್‌ನ ಉಪಾಧ್ಯಕ್ಷ ರವಿ ಭಗೀರಥ್, ಗೋಪಣ್ಣ, ಅಶ್ವಥ್, ಡಾ।ಪ್ರಭು ಶಂಕರ್, ಕಿಶೋರ್, ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೃಗಾಲಯಕ್ಕೆ ಚೆಮ್ ಟ್ರೆಂಡ್ ಸಂಸ್ಥೆ ದೇಣಿಗೆ



ಮೈಸೂರು, ಏ.9– ಮೈಸೂರು ಮೃಗಾಲಯಕ್ಕೆ ಚೆಮ್ ಟ್ರೆಂಡ್ ಕೆಮಿಕಲ್ಸ್ ಕಂಪನಿ 5 ಲಕ್ಷ ರೂ. ದೇಣಿಗೆ ನೀಡಿದೆ. ದೇಣಿಗೆ ಹಸ್ತಾಂತರಿಸಿದ ಕಂಪನಿಯ ನಿರ್ದೇಶಕ ರಾಜೇಶ್ ಪದ್ಕೆ ಅವರನ್ನು ಮೃಗಾಲಯದ ಪ್ರಾಧಿಕಾರದ ಅಧ್ಯಕ್ಷ ಎಲ್. ಆರ್. ಮಹದೇವಸ್ವಾಮಿ, ವ್ಯವಸ್ಥಾಪಕ ನಿರ್ದೇಶಕ ಅಜಿತ್ ಕುಲ್ಕರ್ಣಿ ಅಭಿನಂದಿಸಿದರು. ಪ್ರಾಧಿಕಾರದ ಸದಸ್ಯ ಗೋಕುಲ್ ಗೋವರ್ಧನ್, ಚೆಮ್ ಸಂಸ್ಥೆಯ ಕಾರ್ಯಪ್ಪ, ಜಿತಿನ್, ವಿವೇಕಾನಂದನ್, ಸೌಮಿತ್ರ, ರವಿಕುಮಾರ್ ಉಪಸ್ಥಿತರಿದ್ದರು. ಕೊರೊನಾ ಕಾಲಘಟ್ಟದಲ್ಲಿ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದ ಮೃಗಾಲಯ ಇನ್ನೂ ಚೇತರಿಸಿಕೊಳ್ಳುತ್ತಿದೆ. ಸದ್ಯ ವೀಕ್ಷಕರ ಸಂಖ್ಯೆ ಹೆಚ್ಚಿದ್ದರೂ ಪ್ರಾಣಿಪಾಲನೆ ಸುಲಭಸಾಧ್ಯವಲ್ಲ ಎನ್ನುವ ಸ್ಥಿತಿಯಿದ್ದು, ಹಲವು ಪ್ರಾಣಿ-ಪಕ್ಷಿ ಪ್ರಿಯರು ದೇಣಿಗೆ ನೀಡುವ ಮೂಲಕ ನೆರವಾಗುತ್ತಿದ್ದಾರೆ. ಹಾಗೆಯೇ ಮೃಗಾಲಯ ಪ್ರಾಧಿಕಾರದ ಸದಸ್ಯ ಗೋಕುಲ್ ಗೋವರ್ಧನ್ ಚೆಮ್ ಟ್ರೆಂಡ್ ಕೆಮಿಕಲ್ಸ್ ಕಂಪನಿಯವರ ಸಹಕಾರ ಕೇಳಿದ್ದರು.

ಜೆ.ಪಿ.ನಗರ ಬ್ರಾಹ್ಮಣ ಸಂಘ (ರಿ.)
(ನೋಂದಣಿ ಸಂಖ್ಯೆ (206/98-99 ದಿನಾಂಕ: 26-11-1996)
ನಂ.177, 10ನೇ ಮುಖ್ಯ ರಸ್ತೆ, "ಎಫ್" ಬ್ಲಾಕ್, ಜೆ.ಪಿ.ನಗರ, ಮೈಸೂರು-570031

ಪತ್ರಿಕಾ ಪ್ರಕಟಣೆ

ಮಾನ್ಯರೆ,
ಮೇಲ್ಕಂಡ ಸಂಘಕ್ಕೆ ನೂತನ ಆಡಳಿತ ಮಂಡಳಿ ರಚಿಸಲು ಅನುವಾಗುವಂತೆ ಮಾರ್ಚ್ 12 ರಂದು ಪ್ರಕಟಿಸಿದ್ದು ಪಟ್ಟಿಯ ಮೇಲೆ ಆಕ್ಷೇಪಣೆಗಳು ಬಂದ ಹಿನ್ನೆಲೆಯಲ್ಲಿ ತಿದ್ದುಪಡಿ ಮಾಡಿ ಮತ್ತೊಮ್ಮೆ ಸಂಘದ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಲಾಗಿದೆ. ಸದರಿ ಪಟ್ಟಿಯ ಕುರಿತು ಆಕ್ಷೇಪಣೆಗಳಿದ್ದಲ್ಲಿ ಏಪ್ರಿಲ್ 10 ರಿಂದ 24ರ ಒಳಗಾಗಿ ಸಂಘದ ಕಚೇರಿಗೆ ಸಲ್ಲಿಸಲು ಸೂಚಿಸಿದೆ. ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ, ಪ್ರಕಟಿಸಿರುವ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು.

ಸಮಯ: 10-30 am to 12-00 am, 5-30 pm to 7-00 pm — ಸಹಿ/- ಕಾರ್ಯದರ್ಶಿ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 8123812865 — ಜೆ.ಪಿ.ನಗರ ಬ್ರಾಹ್ಮಣ ಸಂಘ (ರಿ.)

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2022ಕ್ಕೆ 42 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 43ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 14, 2022 ರೊಳಗೆ ನೀಡಬೇಕಾಗಿ ಕಳಕಳಿ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋವ್: 8951668960
ಪ್ರೇಮ: 9880549879, ಗಿರೀಶ್. ಆರ್: 9945783118

ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು ಕಛೇರಿ: ಪ್ರಸಾದ್
ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ
08272-223517 / 97314-69871

ಮಂಡ್ಯ ಕಛೇರಿ: ಎಂ.ಕೆ. ಮೋಹನ್‌ರಾಜ್
3ನೇ ಕ್ರಾಸ್, ಅಶೋಕನಗರ, ಮಂಡ್ಯ
8762960325

ಚಾಮರಾಜನಗರ ಕಛೇರಿ: ಸಿದ್ದಲಿಂಗಸ್ವಾಮಿ
ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ
92422-65657

ಹಾಸನ: ಆರ್.ಎನ್.ಸೋಮೇಶ್‌ಗೌಡ
ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 94484-01175

ನಂಜನಗೂಡು: ಎಂ.ಎಸ್.ಸುದರ್ಶನ್
ಇಡಬ್ಲ್ಯೂಎಸ್-12, ಕೆಹೆಚ್‌ಬಿ ಕಾಲೋನಿ, ನಂಜನಗೂಡು.
9972335009

ಟಿ. ನರಸೀಪುರ: ಕುಮಾರ್
ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 99867-19590

ಹುಣಸೂರು: ಕೆ. ಕೃಷ್ಣ (ಕೆ.ಕೆ.)
EWS 204, KHB ಕಾಲೋನಿ, ಹುಣಸೂರು. 94487-20626
ಹುಣಸೂರು: ಹೆಚ್.ಎಸ್.ಮುರಳೀಧರ್
ಬ್ರಾಹ್ಮಣರ ಬೀದಿ, ಹುಣಸೂರು. 94482-22415

ಕೆ.ಆರ್. ನಗರ: ಕೆ.ಟಿ. ರಮೇಶ್
ಸ್ನೇಹ ಎಂಟರ್ ಪ್ರೈಸಸ್, ವಿ.ವಿ.ರಸ್ತೆ, ಕೆ.ಆರ್. ನಗರ. 94480-21368

ಗುಂಡ್ಲುಪೇಟೆ: ಸೋಮಶೇಖರ್
ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 98459-95426

ಶ್ರೀರಂಗಪಟ್ಟಣ: ವಿನಯ್ ಕಾರೇಕುರ
96868-93234

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು